ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/-
ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAAPU PRAPANCHA

ಸಂಪುಟ-06 • ಸಂಚಿಕೆ-08 • ಜನವರಿ 2025



ರೂ. 28/- BAAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ–ಇಂಗ್ಲೀಷ್ ಮಾಸಿಕ ಸಂಪುಟ–06 • ಸಂಚಿಕೆ–08 • ಜನವರಿ 2025



ಕರ್ನಾಟಕ ಗಾಂಧಿ
ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ–ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು
ಬಾಪು ಪ್ರಪಂಚದಲ್ಲಿನ ಚಿತ್ರಗಳು ಸಾಂದರ್ಭಿಕವಾಗಿರುತ್ತದೆ

Design : **Ujwal Creations,** Bangalore

ಪತ್ರಗಳು

ಮಾನ್ಯರೆ ,

ಬಾಪು ಪ್ರಪಂಚ, ಡಿಸೆಂಬರ್ ಸಂಚಿಕೆಗೆ ಧನ್ಯವಾದಗಳು.
ಗಾಂಧಿ ಮತ್ತು ಪ್ರೇಮಚಂದರ ಸಾಮ್ಯತೆ ಮತ್ತು ಪೆರಿಯಾರ್ ಬಗೆಗಿನ ಲೇಖನ ಎರಡೂ ಇಷ್ಟವಾದವು. ಶ್ರಮ ವಹಿಸಿ ಒಳ್ಳೆಯ ಸಂಚಿಕೆಗಳನ್ನು ಪ್ರಕಟಿಸುತ್ತಿದ್ದೀರಿ. ಇದು ಲವ್ಸ್ ಲೇಬರ್. ಶುಭಾಶಯಗಳು.

ಪ್ರೊ ಎಚ್ ಎಸ್ ಈಶ್ವರ್

ಬೆಂಗಳೂರು

* * *

ಮಾನ್ಯರೆ ,

ಗಾಂಧೀಜಿಯವರ ಪ್ರಭಾವ ಅವರ ಕಾಲಮಾನದ ಎಲ್ಲ ಜನರ ಮೇಲೆ ಆಗಿದೆ. ಕನ್ನಡದಲ್ಲಿ ಕುವೆಂಪು ಸಾಹಿತ್ಯದ ಮೇಲೆ ಗಾಂಧೀಜಿಯ ಪ್ರಭಾವವಿದೆ. ಸಾಮಾಜಿಕ ವಲಯದಲ್ಲಿ ಹಲವಾರು ಮಂದಿ ಗಾಂಧಿಯಿಂದ ಪ್ರಭಾವಿತರಾಗಿ ನೂರಾರು ಶಿಕ್ಷಣ ಸಂಸ್ಥೆಗಳು , ಗೃಹ ಉದ್ಯಮಗಳು , ಸಾಮಾಜಿಕ ಸೇವಾ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ . ಮಹಾತ್ಮ ಗಾಂಧಿ , ಬಾಪೂಜಿ , ಜನತಾ , ಗ್ರಾಮೀಣ , ಭಾರತಿ ಹೆಸರಿನ ಹಲವಾರು ಸ್ಮಾರಕ ಶಿಕ್ಷಣ ಸಂಸ್ಥೆಗಳು , ಗೃಹ ಉದ್ಯಮಗಳು ಆರಂಭವಾಗಿದ್ದವು . ಹೀಗೆ ಗಾಂಧಿ ಪ್ರಭಾವ ಎಲ್ಲ ಕಡೆ ಆಗಿದೆ. ಪ್ರೇಮ್ ಚಂದ್ ಅವರ ಮೇಲೆ ಗಾಂಧಿ ಪ್ರಭಾವ ಲೇಖನ ಓದಿದಾಗ ಇವೆಲ್ಲ ನೆನಪಾದವು .

ರಾಜಶೇಖರ್

ಮಂಡ್ಯ



ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು
https://gandhibhavan.in
ಜಾಲತಾಣದಲ್ಲಿ ವೀಕ್ಷಿಸಿ.

ಪತ್ರಿಕೆಯ ಬಗ್ಗೆ
ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :

ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com



ಬೆಳಗಾಂ ಕಾಂಗ್ರೆಸ್ ಅಧಿವೇಶನ : ಒಂದು ನೋಟ

– ಎನ್. ಆರ್. ವಿಶುಕುಮಾರ್

ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ 1924 ರಲ್ಲಿ ಡಿಸೆಂಬರ್ 26 ಮತ್ತು 27 ರಂದು ಬೆಳಗಾಂ ನಲ್ಲಿ 39 ನೇ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಧಿವೇಶನ ನಡೆದಿತ್ತು . ಈಗ 2024 ರಲ್ಲಿ ಈ ಅಧಿವೇಶನಕ್ಕೆ ನೂರು ವರ್ಷವಾಗುತ್ತಿದೆ . ಅದು ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಕಾಂಗ್ರೆಸ್ ಅಧಿವೇಶನ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ .

ಈ ಕಾಂಗ್ರೆಸ್ ಅಧಿವೇಶನ ಅಂದರೆ ಏನು ? ಅದು ಹೇಗೆ ಆರಂಭವಾಯಿತು ಅನ್ನುವುದರ ಬಗ್ಗೆ ಸ್ವಲ್ಪ ಮಾಹಿತಿ ತಿಳಿದುಕೊಳ್ಳೋಣ . ನಮ್ಮ ದೇಶದಲ್ಲಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟಗಳು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ನೇತೃತ್ವದಲ್ಲಿ ನಡೆಯುತ್ತಿತ್ತು . ಈ ಸ್ವಾತಂತ್ರ್ಯ ಚಳವಳಿಯನ್ನು ಗಟ್ಟಿಗೊಳಿಸಲು ಪ್ರತಿ ವರ್ಷ ಭಾರತದ ಬೇರೆ ಬೇರೆ ನಗರಗಳಲ್ಲಿ ಕಾಂಗ್ರೆಸ್ ಅಧಿವೇಶನಗಳನ್ನು ನಡೆಸಲಾಗುತ್ತಿತ್ತು . ಆ ಮೂಲಕ ಆಯಾ ಸಂದರ್ಭಗಳಲ್ಲಿ ದೇಶದಲ್ಲಿದ್ದ ವಿದ್ಯಮಾನಗಳನ್ನು ಆಧರಿಸಿ ಸ್ವಾತಂತ್ರ್ಯ ಚಳವಳಿಯನ್ನು ರೂಪಿಸಲಾಗುತ್ತಿತ್ತು .

ಇಂಥ ಕಾಂಗ್ರೆಸ್ ನ ಪ್ರಥಮ ಅಧಿವೇಶನ 1885 ರಲ್ಲಿ ಡಬ್ಲ್ಯು .ಸಿ ಬ್ಯಾನರ್ಜಿ ಯವರ ಅಧ್ಯಕ್ಷತೆಯಲ್ಲಿ ಬಾಂಬೆಯಲ್ಲಿ ನಡೆಯಿತು . ಪ್ರಮುಖ ಕಾಂಗ್ರೆಸ್ ನಾಯಕರುಗಳ ಅಧ್ಯಕ್ಷತೆಯಲ್ಲಿ ನಡೆದ ಇಂಥ ಕೆಲವು ಕಾಂಗ್ರೆಸ್ ಅಧಿವೇಶನಗಳನ್ನು ಅವಲೋಕಿಸೋಣ .1905 ರಲ್ಲಿ ಗೋಪಾಲ ಕೃಷ್ಣ ಗೋಖಲೆಯವರ ಅಧ್ಯಕ್ಷತೆಯಲ್ಲಿ ಬನಾರಸ್ ನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು . ಈ ಅಧಿವೇಶನದಲ್ಲಿ ಸ್ವದೇಶಿ ಚಳವಳಿಯನ್ನು ಘೋಷಣೆ ಮಾಡಲಾಯಿತು . 1906 ರಲ್ಲಿ ಕಲ್ಕತ್ತಾದಲ್ಲಿ ದಾದಾಭಾಯಿ ನವರೋಜಿಯವರ ಅಧ್ಯಕ್ಷತೆಯಲ್ಲಿ ; 1919 ರಲ್ಲಿ ಅಮೃತಸರದಲ್ಲಿ ಮೋತಿಲಾಲ್ ನೆಹರು ಅಧ್ಯಕ್ಷತೆಯಲ್ಲಿ ; 1925 ರಲ್ಲಿ ಕಾನ್ಪುರದಲ್ಲಿ ಸರೋಜಿನಿ ನಾಯ್ಡು ಅಧ್ಯಕ್ಷತೆಯಲ್ಲಿ ; 1929 ರಲ್ಲಿ ಲಾಹೋರದಲ್ಲಿ ಜವಾಹರಲಾಲ್ ನೆಹರು ಅಧ್ಯಕ್ಷತೆಯಲ್ಲಿ ; 1931 ರಲ್ಲಿ ಕರಾಚಿಯಲ್ಲಿ ವಲ್ಲಭಬಾಯ್ ಪಟೇಲ್ ಅಧ್ಯಕ್ಷತೆಯಲ್ಲಿ ; 1934 ರಲ್ಲಿ ಬಾಂಬೆಯಲ್ಲಿ ಬಾಬು ರಾಜೇಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ; 1936 ಮತ್ತು 1937 ರಲ್ಲಿ ಲಕ್ನೋ ಮತ್ತು ಫೈಜಾಬಾದ್ ನಲ್ಲಿ ಜವಾಹರ್ ಲಾಲ್ ನೆಹರು ಅಧ್ಯಕ್ಷತೆಯಲ್ಲಿ ; ಹಾಗೂ 1938 ರಲ್ಲಿ ಸುಭಾಷ್ ಚಂದ್ರ ಬೋಸ್ ಅಧ್ಯಕ್ಷತೆಯಲ್ಲಿ ; 1940 ರಲ್ಲಿ ಬಾಂಬೆಯಲ್ಲಿ ಅಬುಲ್ ಕಲಾಂ ಅಜಾದ್ ಅವರುಗಳ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನಗಳು ನಡೆದಿದ್ದವು . 1941 ರಿಂದ 1945 ರ ವರೆಗೆ ' ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ' ಚಳವಳಿ ನಡೆಯುತ್ತಿದ್ದ ಕಾರಣದಿಂದ ಕಾಂಗ್ರೆಸ್ ಅಧಿವೇಶನಗಳು ನಡೆಯಲಿಲ್ಲ . 1946 ರಲ್ಲಿ ಜೆ ಬಿ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಪೂರ್ವದ ಕಡೆಯ ಕಾಂಗ್ರೆಸ್ ಅಧಿವೇಶನ ಮೀರತ್ ನಲ್ಲಿ ನಡೆಯಿತು .

ಸ್ವಾತಂತ್ರ್ಯ ಹೋರಾಟ ರೂಪುಗೊಳ್ಳುತ್ತಿದ್ದ ಆ ವರ್ಷಗಳಲ್ಲಿ ಕಾಂಗ್ರೆಸ್ ಅಧಿವೇಶನವನ್ನು ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಆಯೋಜಿಸುವುದೇ ಕಾಂಗ್ರೆಸ್ಸಿಗರಿಗೆ ಒಂದು ಪ್ರತಿಷ್ಠೆಯ ವಿಷಯವಾಗಿತ್ತು . ಹೆಚ್ಚಿನ ಅಧಿವೇಶನಗಳು ಬಾಂಬೆ , ಕಲ್ಕತ್ತಾ ,ಮದ್ರಾಸ್ , ದೆಹಲಿ , ಅಹಮದಾಬಾದ್ ,ಲಕ್ನೋ ಇತ್ಯಾದಿ ಮಹಾನಗರಗಳಲ್ಲಿ ನಡೆಯುತ್ತಿದ್ದವು . ಇಂಥ ಸಮಯದಲ್ಲಿ 1923 ರಲ್ಲಿ ಆಂದ್ರಪ್ರದೇಶದ ಕಾಕಿನಾಡ ಪಟ್ಟಣದಲ್ಲಿ ಕಾಂಗ್ರೆಸ್ ನ 38 ನೇ ಅಧಿವೇಶನ ನಡೆಯಿತು. ಮುಂದಿನ ಕಾಂಗ್ರೆಸ್ ಅಧಿವೇಶನ ಕರ್ನಾಟಕದಲ್ಲಿ ನಡೆಯಬೇಕು ಎಂದು ಗೊತ್ತಾಗಿತ್ತು .ಅದಕ್ಕಾಗಿಯೆ ಕಾಂಗ್ರೆಸ್ಸಿನಿಂದ ಅಲ್ಲಿಗೆ ಕರ್ನಾಟಕದ ಬಹಳ ಜನ ಪ್ರತಿನಿಧಿಗಳು ಹೋಗಿದ್ದರು . ಆ ಕಾಂಗ್ರೆಸ್ ನಲ್ಲಿ ಕರ್ನಾಟಕದ ದೇಶಪಾಂಡೆ ಗಂಗಾಧರ ರಾಯರು ಕನ್ನಡದಲ್ಲಿ ಭಾಷಣ ಮಾಡಿ ಮುಂದಿನ ಅಧಿವೇಶನವನ್ನು ಕರ್ನಾಟಕದಲ್ಲಿ ಏರ್ಪಡಿಸಲು ಅವಕಾಶ ನೀಡುವಂತೆ ಮನವಿ ಮಾಡಿದರು . ಕಾಕಿನಾಡ ಕಾಂಗ್ರೆಸ್ ಅಧಿವೇಶನಕ್ಕೆ ಮೌಲಾನಾ ಮಹಮದ್ ಆಲಿ ಅವರು ಅಧ್ಯಕ್ಷರಾಗಿದ್ದರು . ಅವರು ಮುಂದಿನ ವರ್ಷದ ಕಾಂಗ್ರೆಸ್ ಕರ್ನಾಟಕದಲ್ಲಿ ನಡೆಯಬೇಕು ಎನ್ನುವ ಮನವಿಯನ್ನು ಪುಷ್ಟಿಕರಿಸಿದರು .ಅಧ್ಯಕ್ಷರೇ ಒಪ್ಪಿದ ಮೇಲೆ ಕರ್ನಾಟಕದ ಮನವಿಗೆ ಕಾಂಗ್ರೆಸ್ ನಲ್ಲಿ ಸರ್ವಾನುಮತಿ ದೊರೆಯಿತು .

ಅನುಮತಿ ದೊರೆತ ನಂತರ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿವೇಶನವನ್ನು ಎಲ್ಲಿ ನಡೆಸಬೇಕು ಎನ್ನುವ ಪ್ರಶ್ನೆ ಎದುರಾಯಿತು . ಆಗ ಕರ್ನಾಟಕದಲ್ಲಿ ಇದ್ದದ್ದು ಎರಡೇ ದೊಡ್ಡ ಪಟ್ಟಣಗಳು . ಒಂದು ಬೆಂಗಳೂರು . ಇನ್ನೊಂದು ಹುಬ್ಬಳ್ಳಿ . ಆಗ ಬೆಂಗಳೂರು ನಗರ ಮೈಸೂರು ಸಂಸ್ಥಾನಕ್ಕೆ ಸೇರಿದ್ದಾಗಿತ್ತು . ನಾಲ್ವಡಿ ಕೃಷ್ಣರಾಜ ಒಡೆಯರು ಮಹಾರಾಜರಾಗಿದ್ದರು . ಗಾಂಧೀಜಿಗೆ ದೇಶಿಯ ಸಂಸ್ಥಾನಗಳಲ್ಲಿ ರಾಜಕೀಯ ಚಳವಳಿ ನಡೆಸುವುದು ಇಷ್ಟವಿರಲಿಲ್ಲ. ಆದ್ದರಿಂದ ಬೆಂಗಳೂರಲ್ಲಿ ಕಾಂಗ್ರೆಸ್ ನಡೆಸುವ ಮಾತೇ ಇರಲಿಲ್ಲ. ಉಳಿದದ್ದು ಹುಬ್ಬಳ್ಳಿ. ಹುಬ್ಬಳ್ಳಿಯೇನೋ ವ್ಯಾಪಾರ ಸ್ಥಳವೇ. ಆದರೆ ಅಲ್ಲಿನ ಜನರಿಗೆ ಕಾಂಗ್ರೆಸ್ ನಡೆಸುವ ಮನಸ್ಸು ಇರಲಿಲ್ಲ. ಕಾಂಗ್ರೆಸ್ಸನ್ನು ನಡೆಸಲು ಕಡೇ ಪಕ್ಷ 50 ಸಾವಿರ ರೂಪಾಯಿಗಳಾದರೂ ಬೇಕಾಗಿತ್ತು . ಗಂಗಾಧರ ರಾಯರು ಬೆಳಗಾವಿ ಮತ್ತು ಶಹಪುರದ ವರ್ತಕರನ್ನು ಕೇಳಿ 30 ಸಾವಿರ ರೂಗಳ ವಾಗ್ದಾನ ಪಡೆದಿದ್ದರು. ಆ ವರ್ತಕರು ತಮ್ಮ ವಾಗ್ದಾನವನ್ನು ಲಿಖಿತವಾಗಿ ಬರೆದೇ ಕೊಟ್ಟಿದ್ದರು ಎನ್ನುವ ಮಾಹಿತಿಗಳಿವೆ .

ಕಾಂಗ್ರೆಸ್ ಅಧಿವೇಶನದ ಸ್ಥಳ ನಿಗದಿಗಾಗಿ ಸೇರಿದ್ದ ಕರ್ನಾಟಕ ಕಾಂಗ್ರೆಸ್ ಪ್ರಾಂತೀಯ ಸಮಿತಿ ಸಭೆಯಲ್ಲಿ ಮಂಗಳೂರಿನ ಪರ ಕಾರ್ನಾಡ್ ಸದಾಶಿವ ರಾಯರು , ಬಿಜಾಪುರದ ಪರ ಕೌಜಲಗಿ ಶ್ರೀನಿವಾಸ ರಾಯರು ಗಟ್ಟಿಯಾಗಿ ವಾದಿಸಿದರು. ಇಲ್ಲಿ ಈ ಎರಡು ಪಟ್ಟಣಗಳ ಬಗ್ಗೆ ಸ್ವಲ್ಪ ಹೆಚ್ಚುಗಾರಿಕೆ ಇತ್ತು. ಬಿಜಾಪುರಕ್ಕೆ ಹಿಂದಿನ ವೈಭವದ ಹಿನ್ನೆಲೆ ಇತ್ತು. ಮಂಗಳೂರು ಸೃಷ್ಟಿ ಸೌಂದರ್ಯದ ಗಣಿ . ಆದರೆ ಬೆಳಗಾವಿಯಲ್ಲಿ ಈ ಎರಡೂ ಇರಲಿಲ್ಲ . ಆದರೆ ಗಂಗಾಧರ ರಾವ್ ದೇಶಪಾಂಡೆಯವರ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ , ಹಣಕಾಸು ಹೊಂದಿಸುವ ಕೌಶಲ್ಯದ ಬಗ್ಗೆ ಭರವಸೆಯಿದ್ದರಿಂದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಬೆಳಗಾವಿಯ ಕಡೆಗೆ ಒಲವು ತೋರಿತು . ಈ ಹಿಂದೆ 1916 ರಲ್ಲಿ ಹದಿನಾರನೇ ಮುಂಬಯಿ ಪ್ರಾಂತೀಯ ಕಾಂಗ್ರೆಸ್ ಅಧಿವೇಶನವನ್ನು ಯಶಸ್ವಿಯಾಗಿ ನಡೆಸಿದ್ದ ಸಾಕ್ಷಿಯೂ ಬೆಳಗಾವಿಯ ಬೆಂಬಲಕ್ಕೆ ನಿಂತಿತು . ಈ ಎಲ್ಲದರ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಧಿವೇಶನವನ್ನು ಬೆಳಗಾವಿಯಲ್ಲೇ ನಡೆಸ ಬೇಕೆಂದು ಕಾಂಗ್ರೆಸ್ ಪ್ರಾಂತೀಯ ಸಮಿತಿ ತೀರ್ಮಾನಿಸಿತು.

ಅಂದಿನ ರಾಜಕೀಯ ಪರಿಸ್ಥಿತಿ

ಅಸಹಕಾರ ಚಳವಳಿಯ ಹಿನ್ನೆಲೆಯಲ್ಲಿ ಗಾಂಧೀಜಿಯವರನ್ನು 1922 ರಲ್ಲಿ ಬಂಧಿಸಲಾಗಿತ್ತು . ಅವರು ಜೈಲಿಗೆ ಹೋದ ನಂತರ ದೇಶದಲ್ಲಿ ಅಸಹಕಾರ ಆಂದೋಲನದ ಕಸುವು ಕುಗ್ಗುತ್ತಾ ಬಂದಿತ್ತು . ಅಲ್ಲಲ್ಲಿ ಜಾತಿಯ ದಂಗೆಗಳು ಮತ್ತೆ ತಲೆ ಎತ್ತಿದ್ದವು. ಚಿತ್ತರಂಜನ ದಾಸ್ ಮತ್ತು ಮೋತಿಲಾಲ ನೆಹರು ಮೊದಲಾದ ದೇಶಭಕ್ತರು ಕೌನ್ಸಿಲ್ ಪ್ರವೇಶ ಮಾಡಿ ಅಲ್ಲಿಯೇ ಅಸಹಕಾರ ಚಳವಳಿ ಮುಂದುವರಿಸ ಬೇಕೆಂದು ನಿರ್ಧರಿಸಿದ್ದರು . ಈ ನಡುವೆ 1922 ರಲ್ಲಿ ಚಿತ್ತರಂಜನ ದಾಸ್ ಅವರು ಕಾಂಗ್ರೆಸ್ ನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಸ್ವರಾಜ್ಯ ಪಕ್ಷ ಸ್ಥಾಪಿಸಿದರು. ಮುಂದೆ ಬರು ಬರುತ್ತಾ ದೇಶದಲ್ಲಿ ವಿಚಾರವಂತರಿಂದ ಸ್ವರಾಜ್ಯ ಪಕ್ಷಕ್ಕೆ ಬೆಂಬಲವೂ ದೊರೆಯತೊಡಗಿತು . ಕೌನ್ಸಿಲ್ ಪ್ರವೇಶದ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಾಗಿ ಕಾಂಗ್ರೆಸ್ ನಲ್ಲಿ ಎರಡು ಬಣಗಳಾದವು . ಒಂದು ಪರಿವರ್ತನ ವಾದಿಗಳು (ಪ್ರೊ ಚೇಂಜರ್ಸ್) . ಇನ್ನೊಂದು ಅಪರಿವರ್ತನ ವಾದಿಗಳು (ನೋ ಚೇಂಜರ್ಸ್) . ಪರಿವರ್ತನ ವಾದಿ ಬಣದಲ್ಲಿ ಸಿ ಆರ್ ದಾಸ್ . ಮೋತಿಲಾಲ ನೆಹರು ಮುಂಚೂಣಿಯಲ್ಲಿದ್ದರು. ಅಪರಿವರ್ತನ ವಾದಿಗಳ ಬಣದಲ್ಲಿ ಬಾಬು ರಾಜೇಂದ್ರ ಪ್ರಸಾದ್ , ವಲ್ಲಭ ಬಾಯ್ ಪಟೇಲ್ , ರಾಜಗೋಪಾಲ ಚಾರಿ , ಗಂಗಾಧರ ರಾವ್ ದೇಶಪಾಂಡೆ ಮೊದಲಾದವರು ಇದ್ದರು . ಇವರೆಲ್ಲರೂ ಕಟ್ಟಾ ದೇಶಭಕ್ತರುಗಳೇ. ಇದರಿಂದಾಗಿ ಜನರಿಗೆ ಯಾರನ್ನು ಹಿಂಬಾಲಿಸಬೇಕು ಎಂದು ತಿಳಿಯದೇ ಗೊಂದಲದಲ್ಲಿ ಬಿದ್ದರು. ಅಷ್ಟೇ ಅಲ್ಲ ; ಎಲ್ಲಿ ಕಾಂಗ್ರೆಸ್ ಒಡೆದು ಹೋಗುವುದೋ ಎಂಬ ಭೀತಿಯೂ ತಲೆದೋರಿತು.

ಇಂಥ ಪರಿಸ್ಥಿತಿಯಲ್ಲಿ ದೇಶಕ್ಕೆ ಮಾರ್ಗದರ್ಶನ ಮಾಡಲೋ ಏನೋ ಎಂಬಂತೆ ಯರವಾಡಾ ಸೆರೆಮನೆಯಿಂದ 1924 ರ ಫೆಬ್ರವರಿ ತಿಂಗಳಲ್ಲಿ ಗಾಂಧೀಜಿಯವರ ಬಿಡುಗಡೆ ಆಯಿತು. ಯಾವುದೇ ಮಹತ್ವದ ಕಾರ್ಯವನ್ನು ದೊಡ್ಡವರೇ ಆರಂಭಿಸ ಬಲ್ಲರು ಮತ್ತು ಅದರಲ್ಲಿ ಬರುವ ಅಡೆತಡೆಗಳನ್ನು ಅವರೇ ನಿವಾರಿಸಬಲ್ಲರು. ಆಗ ಕಾಂಗ್ರೆಸ್ಸಿನಲ್ಲಿ ಉದ್ಭವಿಸಿದ ಮತ ಭೇದವನ್ನು ಗಾಂಧೀಜಿ ಅಲ್ಲದೆ ಮತ್ತಾರು ನಿವಾರಿಸಬಹುದಿತ್ತು? ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿ ಅಂಥವರೇ ಕಾಂಗ್ರೆಸಿನ ಅಧ್ಯಕ್ಷರಾಗುವ ಅವಶ್ಯಕತೆ ಇತ್ತು. ಆ ಮೇರೆಗೆ ಗಾಂಧೀಜಿಯೇ 1924 ರಲ್ಲಿ ಬೆಳಗಾಂವ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಈ ದೃಷ್ಟಿಯಿಂದ, ಬೆಳಗಾಂವ ಕಾಂಗ್ರೆಸ್ಸು ಇತಿಹಾಸದಲ್ಲಿ ಒಂದು ಮಹತ್ವಪೂರ್ಣವಾದ ಘಟ್ಟವಾಗಿದೆ.

ಬೆಳಗಾಂ ಕಾಂಗ್ರೆಸ್ ನಲ್ಲಿ ಅಧ್ಯಕ್ಷರ ಉದ್ಘಾಟನಾ ಭಾಷಣ : (26.12.1924)

ದೇಶ ಇಂಥ ಗೊಂದಲದ ಪರಿಸ್ಥಿತಿಯಲ್ಲಿದ್ದಾಗ ಮಹಾತ್ಮ ಗಾಂಧಿಯವರು ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಲು ಒಪ್ಪಿಕೊಂಡರು , ಅವರು ಪ್ರಪ್ರಥಮ ಬಾರಿಗೆ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಲು ಒಪ್ಪಿಕೊಂಡದ್ದೇ ನಮ್ಮ ಭಾಗ್ಯ ಎಂದು ಕಾಂಗ್ರೆಸ್ಸಿಗರು ಬೀಗಿ ಹೋಗಿದ್ದರು , ರಾಷ್ಟ್ರದ ಎಲ್ಲ ಪ್ರಾಂತ್ಯಗಳಿಂದ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ 1844 ಪ್ರತಿನಿಧಿಗಳು ಬಂದರು. ಆಂಧ್ರದಿಂದ ಅತಿ ಹೆಚ್ಚು ಪ್ರತಿನಿಧಿಗಳು ಅಂದರೆ 299 ಮಂದಿ ಆಗಮಿಸಿದ್ದರು .

ತಮಿಳು ನಾಡಿನಿಂದ 298 ಮಂದಿ , ಮಹಾರಾಷ್ಟ್ರದಿಂದ 286 ಮಂದಿ , ಕರ್ನಾಟಕದಿಂದ 230ಮಂದಿ , ಉತ್ತರ ಪ್ರದೇಶದಿಂದ 164 ಮಂದಿ ,ಗುಜರಾತಿನಿಂದ 104 ಮಂದಿ ಪ್ರತಿನಿಧಿಗಳು ಆಗಮಿಸಿದ್ದರು . ದೂರದ ಬರ್ಮಾ ಪ್ರಾಂತ್ಯದಿಂದ ಕೂಡಾ 16 ಪ್ರತಿನಿಧಿಗಳು ಆಗಮಿಸಿದ್ದರು . ಒಟ್ಟಾರೆ ಬೆಳಗಾವಿ ಮಿನಿ ಭಾರತವಾಗಿ ರೂಪಾಂತರಗೊಂಡಿತ್ತು .

ದಿನಾಂಕ 26 .12 .2024 . ಅಂದು ಶುಕ್ರವಾರ . ಮಧ್ಯಾಹ್ನ 3 ಘಂಟೆಗೆ ಅಧಿವೇಶನ ಸಮಯ ನಿಗದಿಯಾಗಿತ್ತು .ಬೆಳಗಾವಿಯ ಕಾಂಗ್ರೆಸ್ ಅಧಿವೇಶನವನ್ನು ನೋಡಿ ಕಣ್ತುಂಬಿ ಕೊಳ್ಳಲು ದೇಶದ ನಾನಾ ಭಾಗಗಳಿಂದ ಮತ್ತು ಕರ್ನಾಟಕದಿಂದಲೂ ಸಾವಿರಾರು ಜನರು ಬಂದಿದ್ದರು . ಕವಿ ಕುವೆಂಪುರವರೂ ಸಹ ಮಹಾತ್ಮ ಗಾಂಧಿಯವರನ್ನು ಕಣ್ಣಾರೆ ನೋಡಲು ತಮ್ಮ ಗೆಳೆಯರ ಜೊತೆ ಬೆಳಗಾವಿಗೆ ಆಗಮಿಸಿದ್ದರು . ಇಡೀ ಬೆಳಗಾವಿ ಜನ ಜಂಗುಳಿಯಿಂದ ತುಂಬಿ ಹೋಗಿತ್ತು. ಮುಖ್ಯ ಪೆವಿಲಿಯನ್ ಬಳಿ ಪ್ರತಿನಿಧಿಗಳು ಕಿಕ್ಕಿರಿದು ನೆರೆದಿದ್ದರು . ಸ್ವಾತಂತ್ರ್ಯದ ಮಹತ್ವ ಸಾರುವ ಸಂಸ್ಕೃತ , ಹಿಂದಿ , ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿದ್ದ ಬ್ಯಾನರ್ ಗಳು ಅಧಿವೇಶನದ ಪ್ರಮುಖ ಸ್ಥಳಗಳಲ್ಲಿ ರಾರಾಜಿಸುತ್ತಿದ್ದವು. ನೆರೆದಿದ್ದ ಜನರು ' ಕರ್ನಾಟಕ ಕೀ ಜೈ ' ' ಲೋಕಮಾನ್ಯ ಕೀ ಜೈ ' ' ಮಹಾತ್ಮ ಗಾಂಧಿ ಕೀ ಜೈ ' ಎಂದು ಜಯ ಘೋಷ ಕೂಗುತ್ತಿದ್ದರು .ಒಟ್ಟಾರೆ ಬೆಳಗಾವಿ ಹಬ್ಬದ ವಾತಾವರಣದಲ್ಲಿ ಮುಳುಗಿತ್ತು .

ಮಹಾತ್ಮ ಗಾಂಧಿಯವರು ಮೆರವಣಿಗೆಯಲ್ಲಿ ಅಧಿವೇಶನ ಸ್ಥಳಕ್ಕೆ ಕಾಂಗ್ರೆಸ್ ನಾಯಕರುಗಳ ಜೊತೆ ಸರಿಯಾದ ಸಮಯಕ್ಕೆ ಆಗಮಿಸಿದರು. ಮಹಾತ್ಮ ಗಾಂಧೀಜಿ ಮೆರವಣಿಗೆಯ ಮುಂಚೂಣಿಯಲ್ಲಿ ತುಂಡು ಪಂಚೆ ಉಟ್ಟು ಕೈಯಲ್ಲಿ ಖಾದಿ ಹಾರ ಹಿಡಿದು ನಡೆಯುತ್ತಾ ಬಂದರು. ಅವರ ಹಿಂದೆ ಎರಡು ಜನರ ಸಾಲಿನಲ್ಲಿ ಮೌಲಾನಾ ಮಹಮದ್ ಆಲಿ , ದೇಶಬಂದು ಚಿತ್ತರಂಜನ ದಾಸ್ , ಸೈಫುದ್ದೀನ್ , ಗಂಗಾಧರ ರಾವ್ ದೇಶ ಪಾಂಡೆ , ಪಂಡಿತ್ ಮೋತಿಲಾಲ್ ನೆಹರು , ಮದನ ಮೋಹನ ಮಾಳವಿಯ , ಲಾಲಾ ಲಜಪತ್ ರಾಯ್ , ಸಿ ರಾಜಗೋಪಾಲ



ಚಾರಿ , ಮೌಲಾನಾ ಅಬುಲ್ ಕಲಾಂ ಅಜಾದ್ , ಟಿ ಪ್ರಕಾಶಂ , ಬಾಬು ರಾಜೇಂದ್ರ ಪ್ರಸಾದ್ , ಸೇಠ್ ಜಮ್ನಾಲಾಲ್ ಬಜಾಜ್ , ಸರೋಜಿನಿ ನಾಯ್ಡು , ಪಂಡಿತ್ ಜವಾಹರ್ ಲಾಲ್ ನೆಹರು ಇತ್ಯಾದಿ ದುರೀಣರು ಸಾಗುತ್ತಾ ಬಂದರು.

ಕಾಂಗ್ರೆಸ್ ಅಧಿವೇಶನದ ವೇದಿಕೆಯನ್ನೇರಿದ ಗಾಂಧೀಜಿ ನಡುವೆ ಕುಳಿತರು . ಅವರ ಬಲ ಬದಿಯಲ್ಲಿ ಲಾಲಾ ಲಜಪತ ರಾಯ್ , ಸರೋಜಿನಿ ನಾಯ್ಡು , ಎಡ ಬದಿಯಲ್ಲಿ ಪಂಡಿತ್ ಮದನ ಮೋಹನ ಮಾಳವಿಯ , ದೇಶ ಬಂಧು ಚಿತ್ತರಂಜನ ದಾಸ್ , ಕುಳಿತಿದ್ದರು . ಕಾಕಿನಾಡ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೌಲಾನಾ ಮಹಮದ್ ಆಲಿ ಮತ್ತಿತರ ಹಿರಿಯ ನಾಯಕರುಗಳು ಗಾಂಧೀಜಿಯವರ ಮುಂದುಗಡೆ ಕುಳಿತರು .

ಅಧಿವೇಶನವು 3 ಗಂಟೆಗೆ ಸರಿಯಾಗಿ ರಾಷ್ಟ್ರೀಯ ಗೀತೆ ಸುಜಲಾಂ , ಸುಫಲಾಂ , ಮಲೆಯಜ ಶೀತಲಾಂ ಹಾಡುವ ಮೂಲಕ ಆರಂಭವಾಯಿತು. ಎಲ್ಲರೂ ಎದ್ದು ನಿಂತು ಗೌರವ ಸೂಚಿಸಿದರು . ನಂತರ ಕನ್ನಡದಲ್ಲಿ ಸ್ವಾಗತ ಗೀತೆ " ನಮದ್ಯೆ ನಮ್ಮದೀ ಭರತ ಭೂಮಿ " ಯನ್ನು ಹಾಡಲಾಯಿತು. ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಗಂಗಾಧರ ರಾವ್ ದೇಶಪಾಂಡೆಯವರು ಕನ್ನಡದಲ್ಲಿ ಸ್ವಾಗತ ಭಾಷಣ ಮಾಡಿ ಸಭೆಯ ಅಧ್ಯಕ್ಷತೆ ವಹಿಸಿ ಕೊಳ್ಳುವಂತೆ ಗಾಂಧೀಜಿಯವರಿಗೆ ಮನವಿ ಮಾಡಿದರು .

ಗಾಂಧೀಜಿ ವೇದಿಕೆಯಿಂದ ಕೆಳಗೆ ಇಳಿದು ಭಾಷಣ ಮಾಡುವ ಸ್ಥಳಕ್ಕೆ ಬಂದರು . ಎತ್ತರವಾದ ಪೀಠದ ಮೇಲೆ ಕುಳಿತು, ಎದುರಿಗೆ ಗಡಿಯಾರ ಇಟ್ಟುಕೊಂಡರು. ಸ್ವಾಗತಾಧ್ಯಕ್ಷರಾದ ಗಂಗಾಧರ ದೇಶಪಾಂಡೆಯವರು ಒಂದು ಗಂಧದ ಮರದ ಪೆಟ್ಟಿಗೆಯಲ್ಲಿ ಕರ್ನಾಟಕ – ಒಂದು ಕೈಪಿಡಿ (Karnataka Hand Book) ಪುಸ್ತಕವನ್ನು ನೀಡಿದರು .ಜನರ ಜೋರು ಚಪ್ಪಾಳೆಗಳ ನಡುವೆ ಗಾಂಧೀಜಿ ಅದನ್ನು ಸ್ವೀಕರಿಸಿದರು .

ಮೊದಲ 10 ನಿಮಿಷ ಗಾಂಧೀಜಿ ಹಿಂದಿಯಲ್ಲಿ ಮಾತನಾಡಿದರು.

ಗಂಗಾಧರರಾಯರೇ, ಸೋದರ ಸೋದರಿಯರೇ, ನಾನು ದೊಡ್ಡ ಭಾಷಣ ಮಾಡುವದಿಲ್ಲ; ನಾನು ಹೇಳಬೇಕಾದದ್ದು ತಮಗೆ ಈಗಾಗಲೇ ಗೊತ್ತಿದೆ. ನನ್ನ ಭಾಷಣ ಹಿಂದೀ, ಕನ್ನಡ, ಮರಾಠಿಗಳಿಗೆ ಭಾಷಾಂತರ ಆಗಿದೆ. ಇಂಗ್ಲೀಷಿನಲ್ಲಿಯೂ ಇದೆ. ನಿನ್ನೆ ಸಂಜೆಯ ಹೊತ್ತಿಗೆ ನಿಮಗೆಲ್ಲರಿಗೂ ಅದರ ಪ್ರತಿಗಳು ಸಿಗಬೇಕು ಎಂದು ಗಂಗಾಧರರಾಯರನ್ನು ಪ್ರಾರ್ಥಿಸಿದ್ದೆ, ಅದು ನಿಮಗೆ ಸಿಕ್ಕಿದೆ. ನೀವು ಅದನ್ನು ಚೆನ್ನಾಗಿ ಓದಿಕೊಂಡಿದ್ದೀರಿ ಎಂದು ತಿಳಿದಿದ್ದೇನೆ.

ನಾನು ಹೇಳಬೇಕಾದದ್ದು ಇಷ್ಟೇ. 1920 –21 ರಲ್ಲಿ ನಾವು ಏನು ಸಾಧಿಸಬೇಕು ಎಂದಿದ್ದೆವೋ ಅದನ್ನು ಸಾಧಿಸಲಾಗಿಲ್ಲ . ನಮ್ಮೊಳಗೆ ಐಕ್ಯಮತ್ಯವಿಲ್ಲ. ವಿರಸ ತಲೆ ಎತ್ತಿಕೊಂಡಿದೆ.

ಹಿಂದೂಗಳೂ, ಮುಸ್ಲಿಮರೂ ಪರಸ್ಪರ ಶತ್ರುಗಳು ಎಂದು ತಿಳಿದುಕೊಂಡು ಶಾರೀರಿಕ ಹಿಂಸೆಯನ್ನು ಮಾಡುತ್ತಿದ್ದಾರೆ. ಇದು ಸ್ವರಾಜ್ಯ ಸಾಧನೆಗೆ ಖಂಡಿತಾ ದಾರಿಯಲ್ಲ . ನಾವು ಹಿಂದೂಗಳು, ಅಸ್ಪೃಶ್ಯರನ್ನು ಕೀಳಾಗಿ ಕಾಣುತ್ತೇವೆ, ಅವರನ್ನು ಮುಟ್ಟಿದರೆ ಪಾಪ ಎಂದು ತಿಳಿದಿದ್ದೇವೆ. ಇದು ದೇವರೆದುರು ಮಾಡಿದ ಮಹಾಪಾಪ. ಈಗಾಗಲೇ 3 – 4 ವರ್ಷಗಳಿಂದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಚರಕದ ಮೂಲಕವೇ ಸ್ವರಾಜ್ಯ ಸಂಪಾದನೆ ಆಗಬೇಕು ಎಂದು ಹೇಳುತ್ತಿದ್ದೇವೆ. ಈ ಚಳವಳಿಯ ಪ್ರಚಾರಕ್ಕಾಗಿ ನಾನು ಪೂನಾಕ್ಕೆ ಹೋಗಿದ್ದಾಗ, ಲೋಕಮಾನ್ಯ ತಿಲಕರು ಕೊಟ್ಟ " ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಎನ್ನುವುದನ್ನು ಪ್ರಸ್ತಾಪಿಸಿ ಅದನ್ನು ಪೂರ್ಣ ಮಾಡುವುದೇ ನನ್ನ ಬದುಕಿನ ಪರಮೋದ್ದೇಶ ಎಂದು ಹೇಳಿದ್ದೇನೆ .

ಈಗ ನಾನು ಮತ್ತೆ ಅದನ್ನೇ ಹೇಳುತ್ತಿದ್ದೇನೆ. ನಮಗೆ ಸ್ವರಾಜ್ಯ ಬೇಕು

ಎಂದರೆ ಅದಕ್ಕೆ ದಾರಿ ಚರಕ , ನೂಲು ಮತ್ತು ಖಾದಿ . ಇದು ನಮಗೆ ಗೊತ್ತಿದೆ. ಆದರೂ ನಾವು ಅದರಂತೆ ನಡೆಯುತ್ತಿಲ್ಲ ಎಂದು ನನಗೆ ವಿಷಾದವಾಗುತ್ತದೆ . ಈ ರೀತಿಯಾದರೆ ನಮಗೆ ಸ್ವರಾಜ್ಯ ದೊರೆಯುವುದಿಲ್ಲ ಎಂದು ನಾನು ಬಲ್ಲೆ. ಬೇಗಂ ಮಹಮ್ಮದಾಲಿ ಒಂದು ಸಾರಿ ನನಗೆ ಹೇಳಿದರು – ಕಾಂಗ್ರೆಸ್ ಅಧಿವೇಶನಕ್ಕೆ ಹೋದಾಗಲೆಲ್ಲ ಸ್ವರಾಜ್ಯ ಬಂತು ಎಂದು ಒಂದು ವಾರ ತನಗೆ ಅನಿಸುತ್ತದೆ . ಅಂದರೆ ನಾವು ಸ್ವರಾಜ್ಯದ ನಾಟಕ ಆಡುತ್ತೇವೆ ಅಂತ ಅರ್ಥ; ಒಬ್ಬ ವೇಷಧಾರಿ ಹರಿಶ್ಚಂದ್ರನ ಪಾತ್ರ ಮಾಡಿದಂತೆ ಆಗುತ್ತದೆ. ಹರಿಶ್ಚಂದ್ರನ ವೇಷ ಹಾಕಿದವನು ಸತ್ಯವಂತ ಹೌದೊ ಅಲ್ಲವೋ ನಮಗೆ ತಿಳಿಯದು. ಈ ಸ್ವರಾಜ್ಯೋತ್ಸವ ಒಂದು ನಾಟಕ ಆಗಿದೆ.

ಆದ್ದರಿಂದಲೇ ನಿಮಗೆ ನಾನು ಹೇಳುತ್ತೇನೆ. ದೇಶಬಂಧು ಚಿತ್ತರಂಜನ ದಾಸರು ಒಂದು ಗೊತ್ತುವಳಿಯನ್ನು ಮಂಡಿಸುತ್ತಾರೆ. ನಿಮಗೆ ಇದು ಒಪ್ಪಿತವಾದರೆ ಒಪ್ಪಿಗೆ ಕೊಡಿ. ಇಲ್ಲದೆ ಇದ್ದರೆ ನಿರಾಕರಿಸಿ. ಅದರಲ್ಲಿ ಹಿಂದೂ ಮುಸ್ಲಿಂ ಐಕ್ಯದ ಮಾತು ಇಲ್ಲ; ಅಸ್ಪೃಶ್ಯತೆಯ ವಿಷಯವೂ ಇಲ್ಲ. ನಾವು ನೂಲಬಯಸುತ್ತೇವೆ ಎಂದಷ್ಟೇ ಅದರ ಮಾತು. ಇಲ್ಲಿ ಬಂದಿರುವ ಅಸ್ಪೃಶ್ಯರು , ಕ್ರಿಶ್ಚಿಯನರು, ಇತರರು ಎಲ್ಲ ಪ್ರತಿನಿಧಿಗಳಿಗೂ ನನ್ನ ಬೇಡಿಕೆ ಇಷ್ಟೇ – ನೀವು ಯಾರನ್ನು ಪ್ರತಿನಿಧಿಸಲು ಬಂದಿದ್ದೀರೋ ಅವರ ನಿಜವಾದ ಪ್ರತಿನಿಧಿಗಳು ನೀವಾಗಿದ್ದರೆ ಮಹಮದಾಲಿ ಮತ್ತು ದಾಸರ ಶಪಥವನ್ನು ನೀವು ಎತ್ತಿ ಹಿಡಿಯಲು ಬಯಸಿದರೆ ದೇವರ ಸನ್ನಿಧಿಯಲ್ಲಿ ನಿಮಗೆ ಹೇಗೆ ಮಾಡಬೇಕೋ ಹಾಗೆ ಮಾಡಿ. ಇದು ಸರಿಯಾಗಿಲ್ಲ ; ಗಾಂಧಿ ನಿಮ್ಮನ್ನು ಮೋಸಗೊಳಿಸುತ್ತಿದ್ದಾನೆ ಎನಿಸಿದರೆ ; ದೇಶಕ್ಕೆ ಗಾಂಧೀ ಹುಚ್ಚ ಎನಿಸಿದರೆ ಅವನನ್ನು ತಿರಸ್ಕರಿಸಿಬಿಡಿ.



ನಮ್ಮ ಕೋಟಿ ಕೋಟಿ ಜನ ಸೋದರ ಸೋದರಿಯರು ಎಲ್ಲಿಯವರೆಗೆ ಚರಕದಲ್ಲಿ ವಿಶ್ವಾಸವಿಡುವುದಿಲ್ಲವೋ, ಚರಕದಲ್ಲಿ ನೂಲುವುದಿಲ್ಲವೋ, ಖಾದಿಯನ್ನು ಮಾಡುವುದಿಲ್ಲವೋ ಮತ್ತು ಧರಿಸುವುದಿಲ್ಲವೋ ಅಲ್ಲಿಯವರೆಗೆ ಸ್ವರಾಜ್ಯ ಬರುವುದಿಲ್ಲವೆಂದು ನಾನು ಮನಗಂಡಿದ್ದೇನೆ. ಈ ಖಾದೀ ಕಾರ್ಯ ಆಗುವವರೆಗೆ ಭಾರತದ ಬಡತನ ನೀಗದು. ಇದೇ ಕರಾರಿನ ಮೇರೆಗೆ ದೇಶಬಂಧು ದಾಸರೊಂದಿಗೆ, ಪಂಡಿತ್ ಮೋತಿಲಾಲರೊಂದಿಗೆ ನಾನು ಒಂದು ಒಪ್ಪಂದ ಮಾಡಿಕೊಂಡು, ಅದನ್ನು ಇಡೀ ದೇಶದ ಮುಂದೆ ಇಟ್ಟಿದ್ದೇನೆ.

ನನ್ನ ಮಟ್ಟಿಗೆ ಶಾಸನಸಭೆಗಳಿಂದ ಏನೂ ಲಾಭ ಇಲ್ಲ ಎಂದುಕೊಂಡಿದ್ದೇನೆ. ಆದರೆ ಶಾಸನಸಭೆಗಳ ಮೂಲಕ ಲಾಭ ಉಂಟು ಎಂದು ತಿಳಿದ ಅನೇಕ ಮಹಾನಾಯಕರು ಇದ್ದಾರೆ. ಏನೂ ಆಗದಿದ್ದರೂ ಶಾಸನಸಭೆಗಳಿಗಾದರೂ ಹೋಗಬಹುದಲ್ಲ ಎನ್ನುತ್ತಾರೆ ಅವರು. ನಿಜ, ಶಾಸನಸಭೆಗಳಿಗೆ ಹೋಗುವುದರಲ್ಲಿ ಅನುಕೂಲ ಇದೆ ಎಂದು ಅವರಿಗೆ ಅನಿಸಿದರೆ ಅವರು ಹೋಗಲೇಬೇಕು ಎನ್ನುತ್ತೇನೆ. ಅವರೂ ದೇಶದ ನಾಯಕರೇ. ಅವರಿಗೆ ಬೇಡ ಎಂದು ಹೇಳಲು ನಾನು ಯಾರು ? ಹೋಗಬೇಕು ಎನ್ನುವವರು ಶಾಸನಸಭೆಗೆ ಹೋಗಲಿ ಎನ್ನುತ್ತದೆ ಒಪ್ಪಂದ. ಅಸಹಕಾರಿಗಳು ಅವರನ್ನು ಹಿಂಬಾಲಿಸಬೇಕು ಎಂದು ಇದರ ಅರ್ಥವಲ್ಲ. ಕಾಂಗ್ರೆಸ್ , ಪರಿವರ್ತನವಾದಿಗಳಿಗೆ ಎಷ್ಟರ ಮಟ್ಟಿಗೆ ಸೊತ್ತೋ ಅಪರಿವರ್ತನವಾದಿಗಳಿಗೂ ಅಷ್ಟೇ. ಇದು ಯಾರೊಬ್ಬರದೂ ಅಲ್ಲ . ಹಾಗೆ ತಿಳಿದರೆ ಅದು ತಪ್ಪು. ಈಗ ಇದು ತಪ್ಪು ಎಂದು ನಾನು ಹೇಳಿದೆ. ಆದರೆ ನನ್ನದೇ ಸರಿ, ಉಳಿದವರು ತಪ್ಪು ಎಂಬ ಭಾವನೆಯು ಅಳಿಯಬೇಕು.

ಜಗತ್ತಿನಲ್ಲಿ ಬೇರೆ ಬೇರೆ ಮನೋಧರ್ಮ ಇರುವವರೆಗೆ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ಆದರೆ ಸಹನೆಯನ್ನು ಹೆಚ್ಚಿಸಲು ನಾವು ಎಲ್ಲವನ್ನೂ ಅಪ್ಪಿಕೊಳ್ಳುತ್ತೇವೆ. ಇದು ಅಹಿಂಸೆಯ ಒಂದು ಅಂಗ. ಈ ಪ್ರತಿಜ್ಞೆಯಲ್ಲಿ ಮುಖ್ಯ ವಿಷಯ ಚರಕ . ಚರಕ ಶಾಸ್ತ್ರದಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ, ಖಾದಿಯಲ್ಲಿ ನಿಮಗೆ ಶ್ರದ್ಧೆ ಇಲ್ಲದಿದ್ದರೆ, ಈ ಹೊಸ ಮತದಾನ ಪದ್ಧತಿ ಕಾಂಗ್ರೆಸ್ಸನ್ನು ದುರ್ಬಲಗೊಳಿಸುತ್ತದೆ ಎಂದು ನಿಮಗನಿಸಿದರೆ, ಚರಕವನ್ನು ಕೈಬಿಡಿ ಎನ್ನುತ್ತೇನೆ.

ಇನ್ನು ಒಂದೇ ಒಂದು ಬಿನ್ನಹ. ಚೆನ್ನಾಗಿ ತಿಳಿದುಕೊಳ್ಳಿ. ನಾನು ಹೇಳಬೇಕಾದ್ದನ್ನೆಲ್ಲ ಹಿಂದಿಯಲ್ಲಿ ಹೇಳಿದ್ದೇನೆ. ನಿಮಗೂ ಅರ್ಥವಾಗಿದೆ. ಚಿತ್ತರಂಜನ ದಾಸರು ಬಂದು ತಮಗೆ ಬೇಕಾದದ್ದನ್ನು ಹೇಳುತ್ತಾರೆ. ಅದರಲ್ಲಿ ಇರುವುದು ಇಷ್ಟೇ. ಪರಿವರ್ತನವಾದಿಗಳು, ಅಪರಿವರ್ತನವಾದಿಗಳು ಏಕಮತದಿಂದ ಇರಬೇಕು ಎಂಬುದು ಅದರ ಆಶಯ. ನಮ್ಮ ಅಭಿಪ್ರಾಯಗಳು ಬೇರೆ ಬೇರೆ ಇರಬಹುದು . ಆದರೆ ನಮ್ಮ ಹೃದಯ ಒಂದೇ. ನೀವು ಅಪರಿವರ್ತನವಾದಿಗಳಾಗಿದ್ದರೆ ನಿಮ್ಮ ಹೃದಯದಲ್ಲಿ ನನಗಿರುವಷ್ಟು ಸ್ಥಾನವೇ ದೇಶಬಂಧು ದಾಸರಿಗೆ, ಪಂಡಿತ್ ಮೋತೀಲಾಲರಿಗೆ, ಕೇಲ್ಕರ್ ಮತ್ತು ಇತರರಿಗೆ ಇರಬೇಕು. ನಿಮ್ಮ ನಾಯಕರುಗಳಿಗೆ ಕೊಡುವಷ್ಟು ಗೌರವವನ್ನು ನನಗೂ ಕೊಡಬೇಕು. ಇದೇ ಹಿಂದೂ ಮುಸ್ಲಿಂ ಐಕ್ಯತೆ. ಹಿಂದೂ ಮುಸ್ಲಿಮ್ ಐಕ್ಯ ಎಂದರೆ ನನ್ನ ಹೃದಯದಲ್ಲಿ ಮಾಲವೀಯ ಅವರಿಗೆ ಯಾವ ಸ್ಥಾನವಿದೆಯೋ ಮೌಲಾನಾ ಮಹಮದಾಲಿ, ಶೌಕತಾಲಿ ಮತ್ತು ಇತರ ಮುಸಲ್ಮಾನರ ಬಗ್ಗೆಯೂ ಅದೇ ಸ್ಥಾನ ಇರಬೇಕು.

ಈ ಗೊತ್ತುವಳಿ ಅಸ್ಪಷ್ಟವಾಗಿಲ್ಲ. ಕೆಲಸಮಾಡುವ ಮನಸ್ಸು ಇದ್ದವರಿಗೆ ಎಲ್ಲರಿಗೂ ಇದೊಂದು ಕರೆ. ದೇಶಬಂಧು ದಾಸರಾಗಲೀ, ಮೌಲಾನಾ ಮಹಮ್ಮದಾಲಿ ಆಗಲಿ, ಈ ಠರಾವನ್ನು ಒಪ್ಪಿಕೊಳ್ಳಿ ಎಂದು ನಿಮ್ಮನ್ನು ಕೇಳದಿದ್ದರೂ ದೇವರ ಸಾಕ್ಷಿಯಾಗಿ ಒಪ್ಪಿಕೊಳ್ಳಲು ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ನೀವು ಈ ಠರಾವಿನ ಮೇಲೆ ಮತ ಕೊಡುವಾಗ ದೈವಸಾಕ್ಷಿಯಾಗಿ ಕೊಡುತ್ತಿದ್ದೇನೆ

ಎಂದುಕೊಳ್ಳಿ . ರಾಷ್ಟಕ್ಕಾಗಿ ,ದೇಶದ ಕಡುಬಡವರಿಗಾಗಿ, ಸ್ವರಾಜ್ಯ ಸಂಪಾದನೆಗಾಗಿ ಏನಾದರೂ ಮಾಡುವ ಸಂಕಲ್ಪ ಕೈಕೊಳ್ಳುವಿರಿ ಎಂದು ಅದರ ಅರ್ಥ. ಇದರ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಸಂದೇಹ ಇದ್ದರೆ ತಿರಸ್ಕರಿಸಿ ಎನ್ನುತ್ತೇನೆ.

ಈ ಠರಾವಿನ ಹಿಂದೆ ನನ್ನ ವ್ಯಕ್ತಿತ್ವ ಇದೆ ಎಂದು ನೀವು ಚಿಂತಿಸಬೇಕಾಗಿಲ್ಲ. ನಾನು ಎಂದೂ ತಪ್ಪು ಮಾಡಲಾರದವನು ಅಲ್ಲ ಎಂದು ಪದೇ ಪದೇ ಹೇಳಿದ್ದೇನೆ. ನಾನೂ ತಪ್ಪು ಮಾಡುವವ ಎಂದು ಮತ್ತೆ ಮತ್ತೆ ಒಪ್ಪಿಕೊಂಡಿದ್ದೇನೆ. ನನ್ನ ಬದುಕಿನಲ್ಲಿ ಕೆಲವು ಸಲ ಹಿಮಾಲಯದಂಥ ತಪ್ಪು ಮಾಡಿದ್ದೇನೆ, ಒಪ್ಪಿಕೊಂಡಿದ್ದೇನೆ. ಅದಕ್ಕಾಗಿ ಪ್ರಾಯಶ್ಚಿತ್ತ ಮಾಡಿಕೊಂಡಿದ್ದೇನೆ. ತಪ್ಪು ಮಾಡದವನು ಪರಿಪೂರ್ಣಪುರುಷ. ಅವನು ತಪಸ್ಸು ಮಾಡಬೇಕಾಗಿಲ್ಲ. ಅವನಿಗೆ ಪ್ರಾಯಶ್ಚಿತ್ತ ಬೇಕಿಲ್ಲ. ಏಕೆಂದರೆ ಅವನು ತಪ್ಪನ್ನೇ ಮಾಡಲಾರ. ಅಂಥವನು ತಿಳಿಸಿ ಹೇಳಬೇಕಾದ ಅಗತ್ಯವೇನಿಲ್ಲ. ಆದ್ದರಿಂದ ನನ್ನ ವ್ಯಕ್ತಿತ್ವವನ್ನು ಮರೆತು ಈ ಸಮಸ್ಯೆಗೆ ಸರಿಯಾಗಿ ಉತ್ತರ ಹುಡುಕಿರಿ.

ಈ ತೀರ್ಮಾನ ಬಹಳ ಮಹತ್ತರವಾದದ್ದು ಇದಕ್ಕೆ ವಿರುದ್ಧವಾಗಿ ಸಾಕಷ್ಟು ದೊಡ್ಡ ಗುಂಪು ಇದೆ ಎಂದು ಬಲ್ಲೆ. ಕೇವಲ ನೂಲುವದನ್ನೆ ನಂಬಿ ಕುಳಿತುಕೊಳ್ಳುವದು ಯೋಗ್ಯವಲ್ಲ ಎಂದು ಒಂದು ಗುಂಪು ಹೇಳುತ್ತದೆ. ನೂಲುವದು ಒಳ್ಳೆಯದೇ. ಆದರೆ ಇದು ಬಹಳ ಕಷ್ಟದಾಯಕ ದೀರ್ಘ ಪ್ರಯಾಸ ಎನ್ನುತ್ತದೆ ಇನ್ನೊಂದು ಗುಂಪು. ಖಾದಿ, ನೂಲುವದು ಒಳ್ಳೆಯವೆ. ಆದರೆ ರಾಷ್ಟೀಯ ಮತಾಧಿಕಾರದಲ್ಲಿ ಇವಕ್ಕೆ ಸ್ಥಾನ ಇಲ್ಲ ಎನ್ನುತ್ತದೆ ಮೂರನೆಯ ಗುಂಪು. ಇವುಗಳಿಗೆ ವಿರುದ್ಧವಾದ ಅಭಿಪ್ರಾಯ ನನ್ನದು. ದಿನೇ ದಿನೇ ಇದು ನನಗೆ ಹೆಚ್ಚು ಮನದಟ್ಟಾಗುತ್ತಿದೆ. ಸಾಧ್ಯವಾದರೆ ದಿನವೂ ಪ್ರತಿಯೊಂದು ಗಂಟೆಯಲ್ಲಿಯೂ ನಾನು ನೂಲುತ್ತಿದ್ದೆ. ಚರಕದ ಒಂದೊಂದು ಸುತ್ತಿನಿಂದಲೂ ಸ್ವರಾಜ್ಯ ನಮಗೆ ಹತ್ತಿರ ಹತ್ತಿರ ಬರುತ್ತಿದೆ ಎಂದು ನನಗೆ ಅನಿಸುತ್ತದೆ. ಈ ಸುತ್ತುಗಳನ್ನು ಮೂವತ್ತು ಕೋಟಿಯಿಂದ ಗುಣಿಸಿ. ಅದರಿಂದ ಸ್ವರಾಜ್ಯ ಪ್ರಾಪ್ತಿಗೆ ಎಷ್ಟು ವೇಗ ಬರುತ್ತದೆಯೋ ನೋಡಿ. ಈ ಗತಿ, ಈ ವೇಗ ಬರಬೇಕಾದರೆ ನೂಲುವ ಕ್ರಿಯೆಯಲ್ಲಿ ಸ್ವರಾಜ್ಯ ಸಂಪಾದನೆಯ ಶಕ್ತಿ ಅಡಗಿದೆ ಎಂಬ ನನ್ನಲ್ಲಿರುವ ದೃಢವಿಶ್ವಾಸದ ಕಾವು ನಿಮ್ಮಲ್ಲೂ ಉಂಟಾಗಬೇಕು.

ನನ್ನ ಭಾಷಣದಲ್ಲಿ ಎಷ್ಟೋ ಮಾತು ಹೇಳಿದ್ದೇನೆ. ಶ್ರೀಮತಿ ಸರೋಜಿನಿದೇವಿ ಒಂದು ಮಾತನ್ನು ಮಾತ್ರ ಹೇಳಲು ನನಗೆ ಹೇಳಿದ್ದಾಳೆ. "ದಕ್ಷಿಣ ಆಫ್ರಿಕದಲ್ಲಿ ಅದ್ಭುತಸೇವೆ ಮಾಡಿಬಂದ ಆಕೆಯ ಗೌರವಕ್ಕಾಗಿ ನಾನು ಅದನ್ನು ಹೇಳುತ್ತೇನೆ. – ಅದು ಹಿಂದೂ ಮುಸ್ಲಿಂ ಐಕ್ಯದ ವಿಷಯ. ನನಗೆ ಇದು ತುಂಬಾ ಬೇಸರದ ವಿಷಯ. ನಾನು ದಣಿದಿದ್ದೇನೆ. ಹಿಂದೂ ಮುಸ್ಲಿಂ ದಂಗೆ ಎಲ್ಲಿಯಾದರೂ ಆಗಲಿ. ಆದರ ಪಾಡಿಗೆ ಅದನ್ನು ಬಿಡೋಣ ಎನ್ನುತ್ತಾರೆ ಶೌಕತ್ ಆಲಿ. ಪದೇ ಪದೇ ಅವರು ಹೇಳಿದ್ದಾರೆ – ನನ್ನ ಈ ಮುಸಲ್ಮಾನರ ತಲೆ ಕೆಟ್ಟಿದೆ. ಇದೇ ರೀತಿ ನಿಮ್ಮ ಹಿಂದೂಗಳೂ ಮೂರ್ಖರಾಗಿದ್ದಾರೆ . ಜಗಳಗಳನ್ನು ತೀರ್ಮಾನಿಸುವ ಪ್ರಯತ್ನದಲ್ಲಿ ಸ್ವರಾಜ್ಯ ನಮ್ಮ ಕೈಯಿಂದ ಜಾರಿ ಹೋಗಬಾರದು .ಜನರನ್ನು ಅವರ ಪಾಡಿಗೆ ಅವರನ್ನು ಬಿಟ್ಟುಬಿಡೋಣ ಎನ್ನುತ್ತಾರೆ. ಆದರೆ ನಾನು ಹೇಗೆ ಕೈಬಿಡಲಿ. ಚರಕದಂತೆ ಹಿಂದೂ ಮುಸ್ಲಿಂ ಐಕ್ಯವು ನನಗೆ ಒಂದು ಹುಚ್ಚು. ಅದರಲ್ಲಿ ನನಗೆ ಆಸಕ್ತಿ , ರಾಗ, ಭಕ್ತಿ. ನಾನು ಅದನ್ನು ಕೈಬಿಟ್ಟು ಮರೆತು ಕೂಡಲಾರೆ. ಹಿಂದೂ ಮುಸ್ಲಿಂ ಐಕ್ಯತೆಗೆ ಸರಿಯಾದ ಪರಿಹಾರ ನಿಮಗೆ ಸಿಗಬೇಕಾದರೆ ; ಪ್ರತಿಯೊಬ್ಬ ಹಿಂದೂ ಮುಸಲ್ಮಾನ ಪಕ್ಷಪಾತಿಯಾಗಬೇಕು, ಪ್ರತಿಯೊಬ್ಬ ಮುಸಲ್ಮಾನನೂ ಹಿಂದೂ ಪಕ್ಷಪಾತಿ ಆಗಬೇಕು ಎನ್ನುತ್ತೇನೆ .

ಕಡೆಗೆ ಇನ್ನೊಂದು ಮಾತು ಹೇಳಲು ಶ್ರೀಮತಿ ಸರೋಜಿನಿ ನಾಯಡು ನನಗೆ ಹೇಳಿದ್ದಾಳೆ. ಅದು ಉದಾರವಾದಿಗಳ ಬಗ್ಗೆ. ಅವರು ಕೇಳುತ್ತಾರೆ. ಮಂದಗಾಮಿಗಳ ಬಗ್ಗ ಉದಾರವಾದಿಗಳ ಬಗ್ಗ (ಲಿಬರಲ್) ಏನಾದರೂ ಹೇಳುತ್ತೀರಾ ಎಂದು. ಉದಾರವಾದಿಗಳು ನನಗೆ ಪೂಜನೀಯರು ಎಂದು ಹೇಳುತ್ತೇನೆ. ಸ್ವರಾಜ್ಯವಾದಿಗಳು ಕಾಂಗ್ರೆಸ್ಸಿಗೆ ಬರಬೇಕು ಎನ್ನುವಂತೆಯೇ ಉದಾರ ವಾದಿಗಳೂ ಬರಬೇಕು ಎನ್ನುತ್ತೇನೆ. ಅವರ ಮುಂದೆ ನನ್ನ ಹೃದಯವನ್ನು ತೆರೆದಿಟ್ಟದ್ದೇನೆ. ಚರಕದ ಮುಂದೆ ಕುಳಿತು ನೂಲೋಣ ಎನ್ನುತ್ತೇನೆ. ಚರಕದ ಮುಂದೆ ಕುಳಿತು ನಾವು ನೂಲುವದಿಲ್ಲ ಎನ್ನುತ್ತಾರೆ ಅವರು. ಅವರು ಹಾಗೆಂದರೆ ನಾನೇನು ಹೇಳಲಿ? ಕಾಂಗ್ರೆಸ್ಸಿನೊಳಗೆ ಬನ್ನಿರಿ. ನನ್ನನ್ನು ಹೊರಗೆ ನೂಕಿಬಿಡಿರಿ ಎಂದು ಅವರಿಗೆ ಹೇಳುತ್ತೇನೆ.

ಈಗ ನಾನು ಭಾಷಣ ಮುಗಿಸಿದೆ. ದೇವರ ಸಾಕ್ಷಿಯಾಗಿ ಹೇಳಿ, ನೀವು ಏನು ತೀರ್ಮಾನಿಸುತ್ತೀರೋ ಪ್ರಾಣಹೋದರೂ ಚಿಂತೆಯಿಲ್ಲ, ಅದನ್ನು ನಾವು ಮಾಡುತ್ತೇವೆ .

* * *

ಪರದೇಶಿ ವಸ್ತ್ರ ಬಹಿಷ್ಕಾರ:

ಈ ಒಂದು ಬಹಿಷ್ಕಾರವನ್ನು ಮಾತ್ರ ನಾವು ಉಳಿಸಿಕೊಂಡಿದ್ದೇವೆ ಎಂಬುದನ್ನು ಮರೆಯ ಬೇಡಿರಿ. ಇದು ಕೇವಲ ಬ್ರಿಟಿಷ್ ವಸ್ತ್ರ ಬಹಿಷ್ಕಾರವಲ್ಲ . ಪರದೇಶಿ ವಸ್ತ್ರ ಬಹಿಷ್ಕಾರ. ಇಂಥ ಬಹಿಷ್ಕಾರ ನಮಗೆ ಕೇವಲ ಒಂದು ಹಕ್ಕು ಮಾತ್ರವಲ್ಲ ಅದು ನಮಗೆ ಒಂದು ಕರ್ತವ್ಯ . ನಮ್ಮ ದೇಶದ ನದಿಗಳ ನೀರಿನ ಬದಲು ಪರದೇಶದಿಂದ ನೀರನ್ನು ತರಿಸಲು ಮೊದಲಿಟ್ಟರೆ ಅದರ ಬಹಿಷ್ಕಾರ ಹೇಗೆ ನಮ್ಮ ಕರ್ತವ್ಯವಾಗುತ್ತದೆಯೋ ಅಷ್ಟೇ ಮಟ್ಟಿಗೆ ಇದು ನಮ್ಮ ಕರ್ತವ್ಯ . ನಾವು ತರಿಸಿಕೊಳ್ಳುವ ಪರದೇಶಿ ವಸ್ತ್ರವು ಹೆಚ್ಚಾಗಿ ಲ್ಯಾಂಕಾಶೈರ್ ನದು . ನಮ್ಮ ಆಮದು ಪದಾರ್ಥಗಳಲ್ಲಿ ಎಲ್ಲಕ್ಕಿಂತ ಅದೇ ಹೆಚ್ಚಿನದು. ಎರಡನೆಯದು ಸಕ್ಕರೆ. ಭಾರತದೊಡನೆ ಲ್ಯಾಂಕಾಷೈರಿನ ವ್ಯಾಪಾರವೇ ಬ್ರಿಟನ್ನಿನ ಮುಖ್ಯ ಆಸಕ್ತಿ. ಭಾರತದ ರೈತನನ್ನು ನಾಶಮಾಡಿ ಅವನ ಮೇಲೆ ಅಂಶಿಕ ನಿರುದ್ಯೋಗವನ್ನು ಸೋಮಾರಿತನವನ್ನೂ ಹೊರಿಸುವುದು ಅವರ ಉದ್ದೇಶ .

ಭಾರತದ ರೈತನಿಗೆ ನೂಲುವುದು ಉಪವೃತ್ತಿ. ಆದರೆ ಈ ಉಪವೃತ್ತಿಯನ್ನು ಬ್ರಿಟಿಷ್ ನೀತಿಗಳು ಇಲ್ಲದಂತೆ ಮಾಡಿವೆ . ಆದ್ದರಿಂದ ನಮ್ಮ ರೈತ ಬದುಕಬೇಕು ಎಂದಾದರೆ ಪರದೇಶಿ ವಸ್ತ್ರ ಬಹಿಷ್ಕಾರ ಅತ್ಯಗತ್ಯ. ಹೀಗೆ ನಮ್ಮ ರೈತನನ್ನು ಅಗ್ಗವಾದ ಮತ್ತು ಚೆಂದಕಾಣುವ ಪರದೇಶಿ ವಸ್ತ್ರ ಕೊಳ್ಳುವುದನ್ನು ಬಿಡುವಂತೆ ಮಾಡುವದು ಒಂದೇ ಉದ್ದೇಶವಲ್ಲ . ಈ ಬಹಿಷ್ಕಾರಕ್ಕೆ ತನ್ನ ಬಿಡುವಿನ ವೇಳೆಯಲ್ಲಿ ಅರಳೆಯನ್ನು ಹಿಂಜುವುದು, ನೂಲುವದು ಮುಂತಾದ್ದನ್ನು ಮಾಡಿ ಅದನ್ನು ತನ್ನ ಹಳ್ಳಿಯಲ್ಲೇ ನೇಯಿಸಿಕೊಳ್ಳುವಂತೆ ಅವನ ಮನವೊಲಿಸಿ ಅಥವಾ ಹಾಗೆ ಹಳ್ಳಿಯಲ್ಲಿ ನೇಯ್ದ ಖಾದಿಯನ್ನು ಉಟ್ಟು ತೊಟ್ಟು ಪರದೇಶಿವಸ್ತ್ರವನ್ನು , ಅಷ್ಟೇ ಅಲ್ಲ ದೇಶೀ ಗಿರಿಣಿಬಟ್ಟೆಯನ್ನು ಕೊಳ್ಳುವದನ್ನೂ ತಪ್ಪಿಸುವದು ಇದರ ಉದ್ದೇಶ. ಹೀಗೆ ಕೈನೂಲು, ಕೈನೇಯ್ಗೆ , ಖಾದಿಯ ಮೂಲಕ ಪರದೇಶಿ ವಸ್ತ್ರ ಬಹಿಷ್ಕಾರ ನಡೆಸುವದು. ರೈತನಿಗೆ ದುಡ್ಡು ಮಿಗಿಸುವದು

ಮಾತ್ರವಲ್ಲದೆ, ಒಂದು ಉತ್ತಮ ಸಮಾಜ ಸೇವೆ ಮಾಡಲು ನಮ್ಮ ಕೆಲಸಗಾರರಿಗೆ ಅದು ಅವಕಾಶ ಮಾಡಿಕೊಡುತ್ತದೆ. ಇದರಿಂದ ಹಳ್ಳಿಯವರ ಪ್ರತ್ಯಕ್ಷ ಸಂಪರ್ಕ ನಮಗೆ ಆಗುತ್ತದೆ. ಅವರಿಗೆ ನಿಜವಾದ ರಾಜಕೀಯ ಶಿಕ್ಷಣ ಕೊಟ್ಟು, ಅವರು ಸ್ವಾವಲಂಬಿಗಳು ಆಗುವಂತೆ ಮಾಡುತ್ತದೆ. ಆದ್ದರಿಂದ ಸಹಕಾರ ಸಂಘಗಳು ಅಥವಾ ಬೇರೆ ಯಾವುದೇ ಬಗೆಯ ಗ್ರಾಮಸಂಸ್ಥೆಗಳು , ಉತ್ತಮ ಖಾದಿಯ ಸಂಘಗಳು ಉದ್ಧಾರವಾಗುತ್ತವೆ. ಅದರಿಂದ ಮಹತ್ತರ ರಾಜಕೀಯ ಪರಿಣಾಮ ಆಗುತ್ತದೆ. ಏಕೆಂದರೆ ಇದು ಬ್ರಿಟನ್ನಿಗೆ ಇರುವ ದುರಾಶೆಯನ್ನು ಕಳೆಯುತ್ತದೆ. ಲ್ಯಾಂಕಾಶೈರಿನ ಈ ವ್ಯಾಪಾರ ಅನೈತಿಕ ಎನ್ನುತ್ತೇನೆ. ಭಾರತೀಯ ಕೋಟ್ಯಂತರ ರೈತರ ವಿನಾಶದ ಮೇಲೆ ಇದನ್ನು ಕಟ್ಟಿದ್ದಾರೆ. ಒಂದು ಅನೀತಿಯ ದಾರಿ ಇನ್ನೊಂದಕ್ಕೆ ಮಾರ್ಗಮಾಡಿ ಕೊಡುತ್ತದೆ. ಬ್ರಿಟನ್ ಎಷ್ಟೋ ಅನೀತಿಯ ಕೃತಿಗಳನ್ನು ಮಾಡಿದೆ. ಅವು ರುಜುವಾತು ಆಗಿವೆ, ಆದರೆ ಇವೆಲ್ಲವೂ ಈ ಒಂದು ಅನೈತಿಕ ವ್ಯಾಪಾರದಿಂದಲೇ ಹುಟ್ಟಿದವು. ಆದ್ದರಿಂದ ಭಾರತದ ಸ್ವಪ್ರಯತ್ನದ ಮೂಲಕ ಬ್ರಿಟನ್ನಿನ ದಾರಿಯಲ್ಲಿಯ ಈ ಮಹತ್ತರ ಪ್ರಲೋಭನೆ ಅಳಿದು ಹೋದರೆ ಅದು ಭಾರತಕ್ಕೂ ಒಳಿತು ಬ್ರಿಟನ್ನಿಗೂ ಒಳಿತು. ಮತ್ತು ಬ್ರಿಟನ್ನು ಇವತ್ತು ಪ್ರಬಲ ಜಾಗತಿಕ ಶಕ್ತಿ ಆಗಿರುವದರಿಂದ ಮಾನವತೆಗೂ ಒಳಿತು.

ಬೇಡಿಕೆಯಂತೆ ಪೂರೈಕೆ ಎಂಬ ಈ ಸಿದ್ಧಾಂತವನ್ನು ನಾನು ಒಪ್ಪುವುದಿಲ್ಲ. ಎಷ್ಟೋ ಸಲ ತದ್ವಿರುದ್ಧವಾಗಿ, ನೀತಿ ನಿಯಮವಿಲ್ಲದ ವರ್ತಕರು ಕೃತ್ರಿಮವಾಗಿ ಬೇಡಿಕೆಯನ್ನು ಹುಟ್ಟಿಸುತ್ತಾರೆ. ವ್ಯಕ್ತಿಗಳಿಗೆ ಇದ್ದ ಹಾಗೆ ರಾಷ್ಟ್ರಗಳಿಗೂ ನೀತಿಯ ಬಂಧನ ಇದೆ ಎಂದು ನಾನು ತಿಳಿದಿದ್ದೇನೆ. ಹಾಗಿದ್ದರೆ ಯಾರ ಅವಶ್ಯಕತೆಗಳನ್ನು ಪೂರೈಸಲು ಬಯಸುತ್ತೇವೆಯೋ ಅವರ ಯೋಗಕ್ಷೇಮವನ್ನೂ ನೋಡಿಕೊಳ್ಳಬೇಕು. ಉದಾಹರಣೆಗೆ, ರಾಷ್ಟ್ರವು ಕುಡುಕರಿಗೆ ಹೆಂಡವನ್ನು ಒದಗಿಸುವದು ಅಪರಾಧ ಮತ್ತು ಅನೈತಿಕ. ಒಂದು ರಾಷ್ಟ್ರವು ಇನ್ನೊಂದು ರಾಷ್ಟಕ್ಕೆ ಆಹಾರಧಾನ್ಯವನ್ನೂ, ಬಟ್ಟೆಯನ್ನು ರಫ್ತು ಮಾಡುವುದರಿಂದ ಆಮದು ಮಾಡಿಕೊಳ್ಳುವ ರಾಷ್ಟ್ರದಲ್ಲಿ ಧಾನ್ಯ ಮತ್ತು ಬಟ್ಟೆಯ ಉತ್ಪಾದನೆ ನಿಂತು ಜನರು ಸೋಮಾರಿಗಳೂ ಬಡವರೂ ಆದರೆ, ಈ ಆಹಾರಧಾನ್ಯ ಹಾಗೂ ಬಟ್ಟೆಯ ರಫ್ತು ಮಾಡುವದು, ಹೆಂಡದ ರಫ್ತು ಮಾಡುವಷ್ಟೇ

ಕಾಂಗ್ರೆಸ್ ಅಧಿವೇಶನದ ಗಾಂಧೀಜಿಯವರ ಅಧ್ಯಕ್ಷೀಯ ಲಿಖಿತ ಭಾಷಣದ ಒಂದೆರಡು ಅಂಶಗಳು

ಬೆಳಗಾಂವಿಯಲ್ಲಿ ನಡೆದದ್ದು 39 ನೇ ಅಧಿವೇಶನ, ಭಾರತದ ಸ್ವರಾಜ್ಯ ಸಂಗ್ರಾಮದಲ್ಲಿ ಶಾಸನಸಭಾ ಪ್ರವೇಶದ ಒಂದು ಘಟ್ಟ. ಗಾಂಧೀಜಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ಅದನ್ನು ತಿಳಿಸಿದರು.

"ಗೆಳೆಯರೆ, ನನ್ನ ಹೆಗಲ ಮೇಲೆ ಗೌರವದ ಬಹಳ ದೊಡ್ಡಭಾರ ಹೊರಿಸಿದ್ದೀರಿ . ಇವತ್ತು ಈ ಕಾರ್ಯ ಭಾರವನ್ನು ಒಪ್ಪಿಕೊಳ್ಳುವ ಮೊದಲು ನಾನು ಬಹಳ ಮೀನ-ಮೇಷ ಮಾಡಿದೆ.

ಈ ವರ್ಷದ ಅಧ್ಯಕ್ಷತೆಯ ವಿಶಿಷ್ಟ ಗೌರವ ಶ್ರೀಮತಿ ಸರೋಜಿನಿ ನಾಯ್ಡುಗೆ ಹೋಗಬೇಕಾಗಿತ್ತು. ಕೆನ್ಯಾದಲ್ಲಿಯೂ, ದಕ್ಷಿಣ ಆಫ್ರಿಕಾದಲ್ಲಿಯೂ ಆಕೆ ಅದ್ಭುತ ಕೆಲಸ ಮಾಡಿದ್ದಾರೆ .

ಆದರೆ ಪಕ್ಷದ ಆಂತರಿಕ ಪರಿಸ್ಥಿತಿ ಮತ್ತು ಹೊರಗಿನ ಸನ್ನಿವೇಶವು ನಾನು ಈ ಅಧಿವೇಶನದ ಅಧ್ಯಕ್ಷತೆಯನ್ನು ಒಪ್ಪಿಕೊಳ್ಳುವಂತೆ ಮಾಡಿದೆ.

1920ರ ಸೆಪ್ಟೆಂಬರ್ ನಿಂದಲೂ ಆಂತರಿಕ ಶಕ್ತಿಯನ್ನು ಬೆಳೆಸಿಕೊಳ್ಳುವ ಸಂಸ್ಥೆ ಮುಖ್ಯವಾಗಿ ಕಾಂಗ್ರೆಸ್ ಆಗಿದೆ. ಕಲ್ಕತ್ತೆಯ ವಿಶೇಷ ಅಧಿವೇಶನ 1920ರಲ್ಲಿ ನಡೆದಾಗ, ಸರಕಾರ ಕೊಟ್ಟ ಬಿರುದು, ಸರಕಾರದ ನ್ಯಾಯಾಲಯ, ಸರಕಾರದ ಶಿಕ್ಷಣ ಸಂಸ್ಥೆ, ಶಾಸನಸಭೆಗಳು, ಪರದೇಶೀ ವಸ್ತ್ರ ಇವೇ ಮೊದಲಾದವನ್ನು ಬಹಿಷ್ಕರಿಸಬೇಕು ಎಂದು ತೀರ್ಮಾನವಾಯಿತು.ಒಂದು ಸನ್ನಿವೇಶ ಇಂದು ನಮ್ಮ ಎದುರಿಗೆ ಬಂದು ನಿಂತಿದೆ. ಈ ಚಳವಳಿಗೆ ಇಳಿದ ಬಹುಜನ, ಪರದೇಶೀ ವಸ್ತ್ರ ಬಹಿಷ್ಕಾರ ಒಂದನ್ನು ಬಿಟ್ಟು, ಉಳಿದವುಗಳಲ್ಲಿ ನಂಬಿಕೆ ಕಳೆದುಕೊಂಡಿದ್ದಾರೆ. ವಕೀಲರನೇಕರು ತಮ್ಮ ವೃತ್ತಿಯನ್ನು ಮತ್ತೆ ಆರಂಭಿಸಿದ್ದಾರೆ. ಕೆಲವರಿಗಂತೂ ನಾವು ಏಕೆ ಬಿಟ್ಟೆವೋ ಎಂದು ಪಶ್ಚಾತ್ತಾಪವು ಹುಟ್ಟಿರಬೇಕು . ಶಾಸನಸಭೆಗಳನ್ನು ಬಹಿಷ್ಕರಿಸಿದ್ದ ಅನೇಕರು ಮತ್ತೆ ಸಭೆಗಳಿಗೆ ಹೋಗಿದ್ದಾರೆ. ಶಾಸನಸಭಾ ಪ್ರವೇಶವನ್ನು ನಂಬುವ ಜನರ ಸಂಖ್ಯೆ ಹೆಚ್ಚುತ್ತಿದೆ. ಸರಕಾರಿ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದ್ದ ನೂರಾರು ವಿದ್ಯಾರ್ಥಿಗಳು ಹುಡುಗಿಯರೂ ಪಶ್ಚಾತ್ತಾಪಗೊಂಡು ಪುನಃ ಹಿಂದಕ್ಕೆ ಹೋಗಿದ್ದಾರೆ. ತಮಗೆ ಪ್ರವೇಶ ಬೇಕು – ಎಂದು ಹೇಳುವವರ ಸಂಖ್ಯೆಗೆ ಸರಕಾರಿ ಶಾಲಾ ಕಾಲೇಜುಗಳಲ್ಲಿ ಸ್ಥಳ ಒದಗಿಸುವುದು ಕಷ್ಟವಾಗಿದೆ ಎಂದು ನಾನು ಕೇಳಿದ್ದೇನೆ.

ಇಂಥ ಪರಿಸ್ಥಿತಿಯಲ್ಲಿ ಈ ಬಹಿಷ್ಕಾರಗಳಿಂದ ಯಾವ ಯಾವ ಜನರು ನೇರವಾಗಿ ಹಾನಿಗೆ ಒಳಗಾಗಿದ್ದಾರೆಯೋ ಅಂಥವರನ್ನು ಬಿಟ್ಟು ಕೂಡ ಕಾಂಗ್ರೆಸ್ಸು ಈ ಬಹಿಷ್ಕಾರಗಳನ್ನು ಮುಂದುವರಿಸಲು ಸಿದ್ಧರಾಗದಿದ್ದರೆ ಇವುಗಳನ್ನು ರಾಷ್ಟ್ರೀಯ ಕಾರ್ಯಕ್ರಮಗಳ ರೀತಿ ನಡೆಸುವುದು ಸಾಧ್ಯವಾಗಲಾರದು. ಆದರೆ ಇಂಥ ಜನರನ್ನು ಕಾಂಗ್ರೆಸ್ಸಿನಿಂದ ಹೊರಗಿಡುವುದು ವ್ಯಾವಹಾರಿಕವಾಗಿ ಸುಲಭವಲ್ಲ. ಅಪರಿವರ್ತನ ವಾದಿಗಳನ್ನು ಹೊರಗೆ ಓಡಿಸಬೇಕು ಎಂದು ಹೇಳುವುದು ಎಷ್ಟು ಕಾರ್ಯಸಾಧುವಲ್ಲವೋ ಇದೂ ಅಷ್ಟೇ. ಇಬ್ಬರೂ ಕಾಂಗ್ರೆಸ್ಸಿನೊಳಗೆ ಇರಬೇಕು . ಪರಸ್ಪರ ಹಸ್ತಕ್ಷೇಪ ಮಾಡಬಾರದು. ಪರಸ್ಪರ ವಿರುದ್ಧವಾಗಿ ವೈರ ತುಂಬಿ ಟೀಕೆ ಮಾಡಬಾರದು. ಹಿಂದೂ ಮುಸ್ಲಿಂ ಏಕತೆಗೆ ಯಾವುದು ಅನ್ವಯಿಸುತ್ತದೆಯೋ ಅದೇ ಭಿನ್ನ ಭಿನ್ನ ರಾಜಕೀಯ ಪಕ್ಷಗಳಿಗೂ ಅನ್ವಯಿಸುತ್ತದೆ ಎಂದು ನನ್ನ ಭಾವನೆ. ನಾವು ಪರಸ್ಪರ ಸಹನೆಯಿಂದ ಇರಬೇಕು . ಕಾಲಕ್ರಮೇಣ, ಒಬ್ಬರು ತಮ್ಮ ವಿರುದ್ಧವಾದ ಇನ್ನೊಂದು ಮತಕ್ಕೆ ಪರಿವರ್ತನೆ ಹೊಂದಬಹುದೆಂದು ನಾವು ನಂಬೋಣ. ಇಷ್ಟೇ ಅಲ್ಲ ಇನ್ನೂ ಮುಂದೆ ಹೋಗಿ ಕಾಂಗ್ರೆಸ್ಸನ್ನು ಬಿಟ್ಟಿರುವ ಉದಾರ ಮತವಾದಿಗಳನ್ನೂ ಇತರರನ್ನು ಮತ್ತೆ ಕಾಂಗ್ರೆಸಿಗೆ ಸೇರುವಂತೆ ಪ್ರಾರ್ಥಿಸಬೇಕು. ಅಸಹಕಾರವನ್ನು ಸದ್ಯಕ್ಕೆ ನಿಲ್ಲಿಸಿದರೆ, ಅವರು ಹೊರಗೆ ಇರಲು ಯಾವ ಕಾರಣವೂ ಇಲ್ಲ. ಈ ಕೆಲಸದಲ್ಲಿ ಕಾಂಗ್ರೆಸ್ಸಿಗರೇ ಮೊದಲು ಹೆಜ್ಜೆ ಹಾಕಬೇಕು. ಅವರನ್ನು ಸ್ನೇಹಪೂರ್ಣವಾಗಿ ಆಹ್ವಾನಿಸಿ ಅವರು ಒಳಕ್ಕೆ ಸುಲಭವಾಗಿ ಬರುವಂತೆ ಮಾಡಬೇಕು .

ಅಪರಾಧ. ಈ ಬಗೆಯ ಒತ್ತಾಯ ಸೋಮಾರಿತನ, ಬಡತನ ಮನುಷ್ಯನ ಆತ್ಮಕ್ಕೂ ದೇಹಕ್ಕೂ ಹೆಂಡದಷ್ಟೇ ಹಾನಿಕರ. ಏಕೆಂದರೆ ಈ ಸೋಮಾರಿತನ ಮತ್ತು ಬಡತನದಿಂದ ಉಂಟಾಗುವ ಹತಾಶಾಭಾವವು ಅನೈತಿಕ, ಪಾಪ ಎಂಬುದು ನಮಗಿನ್ನೂ ತಿಳಿದಿಲ್ಲ.

ಹಿಂದೂ ಮುಸ್ಲಿಂ ಐಕ್ಯ :

ಹಿಂದೂ ಮುಸ್ಲಿಂ ಐಕ್ಯ ; ಚರಕಕ್ಕಿಂತ ಕಡಿಮೆ ಮಹತ್ವದ್ದಲ್ಲ . ಬಾಳಿನ ಉಸಿರು ಅದು. ಸ್ವರಾಜ್ಯಕ್ಕೆ ಇದು ಅಗತ್ಯವೆಂಬುದು ಬಹಳ ಮಟ್ಟಿಗೆ ಸಾರ್ವತ್ರಿಕವಾಗಿ ಒಪ್ಪಿಗೆಯಾಗಿದೆ. ನಾನು 'ಬಹಳಮಟ್ಟಿಗೆ' ಎಂದದ್ದು ಏಕೆ ಎಂದರೆ, ಕೆಲ ಹಿಂದೂಗಳು , ಕೆಲ ಮುಸಲ್ಮಾನರು ಸಂಪೂರ್ಣವಾಗಿ ಹಿಂದೂ ಭಾರತ ಅಥವಾ ಮುಸಲ್ಮಾನ ಭಾರತ ಆಗದೇ ಇದ್ದರೆ ಈಗಿನ ಹಾಗೆ ಬ್ರಿಟನ್ನಿನ ಆಶ್ರಯವೇ ಇರಲಿ ಎನ್ನುತ್ತಾರೆ. ಹಾಗೆ ಹೇಳುವರ ಸಂಖ್ಯೆ ಬಹಳ ಕಡಿಮೆ ಎಂಬುದು ಸಂತೋಷದ ವಿಷಯ.

ಮೌಲಾನಾ ಶೌಕತ್ ಆಲಿಗೆ ಬಹಳ ಪ್ರಬಲವಾದ ಆಶಾಭಾವನೆ. ಈಗಿನ ಈ ವಿರಸವು ತಾತ್ಕಾಲಿಕ ಎನ್ನುತ್ತಾರೆ. ನನಗೂ ಹಾಗೆಯೇ ಅನ್ನಿಸುತ್ತದೆ. ಹಿಂದೂಗಳೂ ಭಾಗವಹಿಸಿದ ಖಿಲಾಫತ್ ಚಳವಳಿಯ ಬಗ್ಗೆ ಬಂದ ಅಸಹಕಾರ, ಇದುವರೆಗೆ ನಿದ್ದೆ ಮಾಡುತ್ತಿದ್ದ ಜನತೆಯನ್ನು ಎಚ್ಚರಿಸಿದವು. ಮೇಲಿನ ವರ್ಗಕ್ಕೂ ಕೆಳಗಿನ ವರ್ಗಕ್ಕೂ ಇದು ಒಂದು ಜಾಗೃತಿಯನ್ನು ಕೊಟ್ಟಿತು. ಅಸಹಕಾರದ ಉತ್ಕರ್ಷದ ದಿನಗಳಲ್ಲಿ

ನಿರಾಶೆಗೊಂಡಿದ್ದ ಸ್ವಾರ್ಥಿಗಳು ಈಗ ಹೊಸತನದ ಆಕರ್ಷಣೆ ಕಡಿಮೆಯಾದ ಮೇಲೆ ಅವಕಾಶ ಪಡೆದು ಎರಡೂ ಸಮಾಜಗಳ ಸ್ವಾರ್ಥವನ್ನು ಅಥವಾ ಮತಾಂಧತೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಕಳೆದ ಎರಡು ವರ್ಷಗಳ ಜಗಳಗಳು ಅದರ ಫಲ. ಧರ್ಮವನ್ನು ವಿದೂಷಗೊಳಿಸಿ ಅಪಹಾಸ್ಯಗೊಳಿಸಲಾಗಿದೆ . ಈ ಕ್ಷುಲ್ಲಕ ವಿಷಯಗಳನ್ನು ಧರ್ಮದ ಹೆಸರಿನಲ್ಲಿ ದೊಡ್ಡದು ಮಾಡಿದ್ದಾರೆ. ಏನು ಬೇಕಾದರೂ ಆಗಲಿ ಅದನ್ನು ನಡೆಸಿಯೇ ತೀರಬೇಕು ಎನ್ನುತ್ತಾರೆ ಮತಾಂಧರು. ವಿರಸ ಹುಟ್ಟಿಸಲು ಆರ್ಥಿಕ ರಾಜಕೀಯ ಕಾರಣಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಕೋಹಾಟ್ ನಲ್ಲಿ ಶಿಖರಕ್ಕೆ ಮುಟ್ಟಿತು. ಮೊದಲೇ ದುರಂತ. ಆ ಬೆಂಕಿಗೆ ಸ್ಥಳೀಯ "ಅಧಿಕಾರಿಗಳ ಹೃದಯಹೀನ ಔದಾಸೀನ್ಯದಿಂದ ತುಪ್ಪ ಸುರಿದಂತಾಯಿತು. ಆ ದುರಂತದ ಕಾರಣಗಳನ್ನು ಪರಿಶೀಲಿಸಲು ಅಥವಾ ಅಪರಾಧವನ್ನು ನಿಷ್ಕರ್ಷಿಸಲು ನಾನು ಇಲ್ಲಿ ತೊಡಗುವದಿಲ್ಲ. ನನಗೆ ಒಂದು ವೇಳೆ ಮನಸ್ಸಿದ್ದರೂ ಅದಕ್ಕೆ ಬೇಕಾದ ಸಾಮಗ್ರಿ ಇಲ್ಲ. ಇಷ್ಟು ಹೇಳಿದರೆ ಸಾಕು ; ಹಿಂದೂ ಶರಣಾರ್ಥಿಗಳು ಪ್ರಾಣಭಯದಿಂದ ಓಡಿಹೋದರು.

ಕೋಹಾಟದಲ್ಲಿ ಮುಸಲ್ಮಾನರ ಸಂಖ್ಯೆ ಅತ್ಯಧಿಕ. ಪರದೇಶೀಯ ಪ್ರಭುತ್ವದಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಹಜ ಅಧಿಕಾರ ಅವರ ಕೈಯ್ಯಲ್ಲಿದೆ. ಕೋಹಾಟದ ಸಂಪೂರ್ಣ ಜನ ಹಿಂದೂಗಳೇ ಆಗಿದ್ದ ಪಕ್ಷದಲ್ಲಿ ಅಲ್ಲಿ ಎಷ್ಟು ಸುರಕ್ಷಿತವಾಗಿ ಇರಬಹುದಾಗಿತ್ತೋ ಅಷ್ಟೇ ಸುರಕ್ಷಿತವಾಗಿ ಮುಸಲ್ಮಾನರು ಬಹುಸಂಖ್ಯಾತರಾಗಿ ಇದ್ದಾಗ ಕೂಡ ಅವರು ಇರಬಲ್ಲರು ಎಂಬುದನ್ನು ತೋರಿಸ ಕೊಡುವದು ಮುಸಲ್ಮಾನರ ಕರ್ತವ್ಯ. ಹಿಂದೂ ಶರಣಾರ್ಥಿಗಳು ಪ್ರತಿಯೊಬ್ಬರೂ ಊರಿಗೆ ಬರುವಂತೆ ಮಾಡುವವರೆಗೂ ಮುಸಲ್ಮಾನರು ಸುಮ್ಮನೆ ಇರಲಾಗದು. ಸರಕಾರ ಒಡ್ಡಿದ ಬೋನಿನಲ್ಲಿ ಹಿಂದೂಗಳು ಬೀಳಬಾರದು ಎಂದು ನಾನು ಆಶಿಸುತ್ತೇನೆ .ತಮ್ಮ ಪೂರ್ಣ ಸೊತ್ತುಗಳ ಬಗ್ಗೆ ಕೋಹಾಟ ಮುಸಲ್ಮಾನರು ಪೂರ್ಣ ಭರವಸೆ ಕೊಡುವವರೆಗೆ ಹಿಂದೂ ಶರಣಾರ್ಥಿಗಳು ಇದಕ್ಕೆ ದೃಢವಾಗಿ ತಿರಸ್ಕರಿಸಬೇಕು ಎನ್ನುತ್ತೇನೆ.

ಎಲ್ಲಿ ಮುಸಲ್ಮಾನರ ಸಂಖ್ಯೆ ಅತ್ಯಧಿಕವಾಗಿರುತ್ತದೆಯೋ ಅವರ ನಡುವೆ ಹಿಂದೂಗಳು ಇರಬೇಕೆಂದರೆ ಮುಸಲ್ಮಾನರು ಅವರನ್ನು ಸ್ವಂತ ತಮ್ಮ ಗೆಳೆಯರಂತೆ ಸಮಾನರಂತೆ ನೋಡುವ ಸಂದರ್ಭ ಇರಬೇಕು. ಮುಸಲ್ಮಾನರು ಕಡಿಮೆ ಸಂಖ್ಯೆ ಇರುವ ಕಡೆಯೂ ಅಷ್ಟೇ. ಹಿಂದೂಗಳು ಹೆಚ್ಚಾಗಿ ಇರುವ ಕಡೆ, ಅವರ ನಡುವೆ ಇವರು ಗೌರವದಿಂದ ಬಾಳಬೇಕೆಂದರೆ ಹಿಂದೂಗಳ ಸ್ನೇಹ ಅತ್ಯಗತ್ಯ. ಸರಕಾರ ಕಳ್ಳಕಾಕರ ದರೋಡೆಕಾರರ ವಿರುದ್ಧ ರಕ್ಷಣೆ ಕೊಡಬಹುದು. ಆದರೆ ಒಂದು ಇಡೀ ಸಮಾಜ ಇನ್ನೊಂದು ಸಮಾಜವನ್ನು ಸಂಪೂರ್ಣವಾಗಿ ಬಹಿಷ್ಕರಿಸಿದರೆ ಅದಕ್ಕೆ ರಕ್ಷಣೆ ಕೊಡಲು ಸ್ವರಾಜ್ಯ ಸರಕಾರಕ್ಕೂ



ಸಾಧ್ಯವಿಲ್ಲ. ಸರಕಾರ ಅಸಾಧಾರಣ ಪರಿಸ್ಥಿತಿಯಲ್ಲಿ ಮಾತ್ರ ಕೈಹಾಕಬಹುದು. ಈಗಿನ ಸರಕಾರ ಪರದೇಶಿ. ಆದ್ದರಿಂದ ಇದು ಬಲವಾದ ಸೈನಿಕ ಆಡಳಿತ. ನಾವು ಎಷ್ಟೇ ಸಂಘಟಿತರಾದರೂ ತನ್ನನ್ನು ಕಾಪಾಡಿಕೊಳ್ಳುವ ಶಕ್ತಿ ಸರಕಾರಕ್ಕಿದೆ. ಆದ್ದರಿಂದಲೇ ಅದಕ್ಕೆ ಮನಸ್ಸಿದ್ದರೆ ನಮ್ಮ ಈ ಅಂತಃಕಲಹವನ್ನು ತಡೆಗಟ್ಟಬಹುದು. ಆದರೆ ಜನಪ್ರಿಯ ಎನ್ನಿಸಿಕೊಳ್ಳಬಯಸಿದ ಯಾರ ಸ್ವರಾಜ್ಯ ಸರಕಾರವೂ ಯಾವಾಗಲೂ ಯುದ್ಧ ಸಿದ್ಧತೆಯಲ್ಲಿ ಇರಲಾರದು. ಸ್ವರಾಜ್ಯ ಸರಕಾರ ಎಂದರೆ ಹಿಂದೂಗಳ ಮುಸಲ್ಮಾನರ ಹಾಗೂ ಇತರರ ಸ್ವತಂತ್ರ ಸಾಮುದಾಯಿಕ ಇಚ್ಛೆಯಿಂದ ಸ್ಥಾಪಿತವಾದದ್ದು. ಹಿಂದೂಗಳಿಗೆ ಮುಸಲ್ಮಾನರಿಗೆ ಸ್ವರಾಜ್ಯ ಬೇಕಾದರೆ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಅವರು ಸ್ನೇಹದಿಂದ ಬಗೆಹರಿಸಿಕೊಳ್ಳಬೇಕು.

ದಿಲ್ಲಿಯಲ್ಲಿ ನಡೆದ ಐಕ್ಯತಾ ಸಮ್ಮೇಲನವು ಮತೀಯ ಭಿನ್ನತೆಗಳ ಪರಿಹಾರಕ್ಕೆ ದಾರಿಮಾಡಿದೆ. ಹಿಂದೂಗಳಿಗೂ, ಮುಸಲ್ಮಾನರಿಗೂ ಅಷ್ಟೇ ಅಲ್ಲ-ಎಲ್ಲ ಜಾತಿಗಳಿಗೂ ಪಂಥಗಳಿಗೂ ಇರುವ ರಾಜಕೀಯ ಭೇದಗಳನ್ನು ನ್ಯಾಯವಾಗಿ ಪರಿಹರಿಸಲು ಸರ್ವಪಕ್ಷ ಪರಿಷತ್ತಿನ ಸಮಿತಿಯು ಮತೀಯ /

ಪಂಥೀಯ ಪ್ರಾಂತೀಯ ಪ್ರಾತಿನಿಧ್ಯವನ್ನು ಆದಷ್ಟು ಬೇಗ ತೆಗೆದು ಹಾಕುವುದು ನಮ್ಮ ಗುರಿಯಾಗಬೇಕು. ಮತದಾರ ವರ್ಗವು ಸಕಲರದೂ ಆಗಿ ಕೇವಲ ಯೋಗ್ಯತೆಯ ಆಧಾರದ ಮೇಲೆ ನಿಷ್ಪಕ್ಷಪಾತವಾಗಿ ತಮ್ಮ ಪ್ರತಿನಿಧಿಗಳನ್ನು ಆರಿಸಬೇಕು. ನಮ್ಮ ನೌಕರ ವರ್ಗದಲ್ಲಿ ಹಾಗೆಯೇ ನಿಷ್ಪಕ್ಷಪಾತವಾಗಿ ಕೆಲವು ಅರ್ಹತೆಯ ಆಧಾರದ ಮೇಲೆ ಗಂಡಸರನ್ನು, ಹೆಂಗಸರನ್ನು ನಿಯಮಿಸಿಕೊಳ್ಳಬೇಕು. ಆದರೆ ಆ ಕಾಲ ಬರುವವರೆಗೆ ಬಹುಸಂಖ್ಯೆಯ ಜನರ ಉದ್ದೇಶಗಳನ್ನು ಶಂಕಿಸುವ ಅಲ್ಪಸಂಖ್ಯಾತರಿಗೂ ಅವರ ದಾರಿಯಲ್ಲಿ ಸ್ಪಷ್ಟತೆ ಇರಬೇಕು. ಬಹುಸಂಖ್ಯೆಯ ಜನರು ತ್ಯಾಗದ ದಾರಿ ತೋರಬೇಕು.

ಅಸ್ಪಶ್ಯತೆ:

ಸ್ವರಾಜ್ಯಕ್ಕೆ ಮತ್ತೊಂದು ಆತಂಕ ಅಸ್ಪೃಶ್ಯತೆ . ಅದರ ನಿವಾರಣೆ ಸ್ವರಾಜ್ಯಕ್ಕೆ ಅತ್ಯಗತ್ಯ. ಹಿಂದೂ ಮುಸ್ಲಿಂ ಹೇಗೋ ಇದು ಹಾಗೆಯೇ ಸ್ವರಾಜ್ಯಪ್ರಾಪ್ತಿಗೆ ಅಗತ್ಯ. ಮುಖ್ಯವಾಗಿ ಇದು ಹಿಂದೂಗಳ ಸಮಸ್ಯೆ . ಈ ದಲಿತವರ್ಗಗಳಿಗೆ ಸ್ವಾತಂತ್ರ್ಯವನ್ನು ನೀಡುವವವರೆಗೆ ಮತ್ತೆ ಹಿಂದೂಗಳು ಸ್ವರಾಜ್ಯವನ್ನು ಕೇಳಲು ಹಕ್ಕಿಲ್ಲ, ಪಡೆಯಲು ಸಾಧ್ಯವಿಲ್ಲ ಅವರನ್ನು ತುಳಿತುಳಿದು ನಾವೂ ಅಧಃಪತನ ಹೊಂದಿದ್ದೇವೆ. ಇಂಗ್ಲೀಷ್ ಆಕ್ರಮಣಕಾರರು ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆಯೋ ಅದಕ್ಕಿಂತ ಹೀನವಾಗಿ ಅಲ್ಲದಿದ್ದರೂ ಅಷ್ಟೇ ಹೀನವಾಗಿ ಹಿಂದುಸ್ತಾನದ ಮೂಲ ನಿವಾಸಿಗಳನ್ನು ಆರ್ಯರ ದಾಳಿಕಾರರು ನಡೆಸಿಕೊಂಡರು ಎಂದು ಇತಿಹಾಸ ಬಲ್ಲವರು ಹೇಳುತ್ತಾರೆ. ಹಾಗೆ ಒಂದು ಅಸ್ಪೃಶ್ಯರ ವರ್ಗವನ್ನು ನಿರ್ಮಿಸಿದ್ದಕ್ಕಾಗಿ ಈಗ ಗುಲಾಮಗಿರಿಯ ರೂಪದ ಪ್ರತಿಫಲವನ್ನು ನಾವು ಅನುಭವಿಸುತ್ತಿದ್ದೇವೆ. ಈ ಕಳಂಕವನ್ನು ಎಷ್ಟು ಬೇಗ ತೊಳೆದು ಹಾಕಿದರೆ ಅಷ್ಟು ಹಿಂದೂಗಳಿಗೆ ಒಳ್ಳೆಯದು. ಆದರೆ ಅಸ್ಪಶ್ಯತೆಯು ದೈವನಿರ್ಮಿತವೆಂದು ಪಂಡಿತರೂ ಪುರೋಹಿತರೂ ಹೇಳುತ್ತಾರೆ. ಹಿಂದೂ ಧರ್ಮದ ಬಗ್ಗೆ ನನಗೂ ಸ್ವಲ್ಪ ಗೊತ್ತಿದೆ. ಈ ಪಂಡಿತರದು ಶುದ್ಧ ತಪ್ಪು ಎಂದು ನನ್ನ ದೃಢ ಅಭಿಪ್ರಾಯ.

"ಭಗವಂತ ಮಾನವಕುಲದ ಒಂದು ಭಾಗವನ್ನು ಅಸ್ಪೃಶ್ಯ ಎಂದು ಬೇರೆ ಮಾಡಿದ " ಎಂಬ ಮಾತು ದೈವದ್ರೋಹ. ಕಾಂಗ್ರೆಸ್ಸಿಗರಾದ ಹಿಂದೂಗಳು ಆದಷ್ಟು ಬೇಗ ಈ ಆತಂಕವನ್ನು ತೆಗೆದು ಹಾಕಬೇಕು. ಕೇರಳದ ವೈಕೋಮ್ ಸತ್ಯಾಗ್ರಹಿಗಳು ನಮಗೆ ದಾರಿತೋರಿಸುತ್ತಿದ್ದಾರೆ. ಸಜ್ಜನಿಕೆಯಿಂದಲೂ ದೃಢತೆಯಿಂದಲೂ ಸೌಮ್ಯದಿಂದಲೂ ಅವರು ತಮ್ಮ ಹೋರಾಟ ನಡೆಸುತ್ತಿದ್ದಾರೆ. ಅವರಿಗೆ ಸಹನೆ ಇದೆ, ಧೈರ್ಯ ಇದೆ, ಶ್ರದ್ಧೆ ಇದೆ. ಈ ಗುಣಗಳು ಯಾವ ಚಳವಳಿಯಲ್ಲಿ ಇದ್ದರೂ ಅದು ಅಪ್ರತಿಮವಾಗುತ್ತದೆ; ಅದನ್ನು ತಡೆಯಲು ಸಾಧ್ಯವಿಲ್ಲ. ಆದರೆ ಈಚೆಗೆ ಒಂದು ಮಾತು ಪ್ರಾರಂಭವಾಗಿದೆ. ರಾಜಕೀಯ ಗುರಿಗಳನ್ನು ಸಾಧಿಸಲು ದಲಿತವರ್ಗವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಹಿಂದೂಗಳಿಗೆ ನಾನು ಎಚ್ಚರಿಕೆ ಕೊಡಬಯಸುತ್ತೇನೆ. ಅಸ್ಪೃಶ್ಯತಾ ನಿವಾರಣೆ ಒಂದು ಪ್ರಾಯಶ್ಚಿತ್ತ. ಸವರ್ಣ ಹಿಂದೂಗಳು ತಮಗೂ ಹಿಂದೂಧರ್ಮಕ್ಕೂ ಪ್ರಾಯಶ್ಚಿತ್ತದ ಮೂಲಕ ಋಣ ಮುಕ್ತರಾಗಬೇಕು . ನಿಜವಾಗಿ ಅಸ್ಪೃಶ್ಯರು ಶುದ್ಧರಾಗಬೇಕಾದ್ದಿಲ್ಲ. ಶುದ್ಧರಾಗಬೇಕಾದವರು ಮೇಲಿನ ಜಾತಿಯವರು . ಅಸ್ಪೃಶ್ಯರಿಗಿ ಪಾಪ ಯಾವುದೂ ಇಲ್ಲ. ಹೊಲಸು, ಅನೈರ್ಮಲ್ಯ ಅವರಿಗೇ ಮೀಸಲಿಲ್ಲ . ನಮ್ಮ ದುರಹಂಕಾರವು ನಮ್ಮ ಕಣ್ಣೊಳಗೆ ಪರೆಕಟ್ಟಿ, ನಮ್ಮ ತಪ್ಪುಗಳನ್ನು ಮಾಡಿಸುತ್ತವೆ .ಆ ಅಹಂಕಾರವೇ ನಾವು ತುಳಿದ ಹಾಗೂ ತುಳಿಯುತ್ತಿರುವ ದಲಿತ ಸಹೋದರರ ಅಲ್ಪದೋಷಗಳನ್ನು ಗುಡ್ಡದ ಹಾಗೆ ಕಾಣುವಂತೆ ಮಾಡುತ್ತದೆ. ರಾಷ್ಟ್ರಗಳಿಗೆ ಹೇಗೋ ಧರ್ಮಗಳಿಗೂ ಹಾಗೇಯೇ ಇದು ಪರೀಕ್ಷಾ ಸಮಯ. ದೇವರ ಅನುಗ್ರಹವು, ದೇವರ ಸಾಕ್ಷಾತ್ಕಾರವು ಯಾವ ಜಾತಿಗೂ ಯಾವ ರಾಷ್ಟ್ರಕ್ಕೂ ಗುತ್ತಿಗೆಯಲ್ಲ. ದೇವರಲ್ಲಿ ಶ್ರದ್ಧೆ ಇಟ್ಟು ಅವನ ಬಾಗಿಲು ಕಾಯುವವರೆಲ್ಲರಿಗೂ ಸಮಾನವಾಗಿ ಅದು ಲಭಿಸುತ್ತದೆ. ಯಾವ ರಾಷ್ಟ್ರ ಯಾವ ಮತ, ಅನ್ಯಾಯಕ್ಕೆ, ಅಸತ್ಯಕ್ಕೆ, ಹಿಂಸೆಗೆ ಮಡಿಲು ಕಟ್ಟುತ್ತದೆಯೋ ಅದು ಈ ಭೂಮಿಯಿಂದ ಮಾಯವಾಗುತ್ತದೆ. ದೇವರು ಪ್ರಕಾಶ ; ಅಂಧಕಾರವಲ್ಲ. ದೇವರು ಪ್ರೇಮ; ದ್ವೇಷವಲ್ಲ. ದೇವರು ಸತ್ಯ ; ಅಸತ್ಯವಲ್ಲ. ದೇವರು ಒಬ್ಬನೇ ಶ್ರೇಷ್ಠ. ಅವನು ಸೃಷ್ಟಿಸಿದ ನಾವು ಬರೀ ಮಣ್ಣು. ಅವನ ಸೃಷ್ಟಿಯಲ್ಲಿನ ತೀರ ಕಟ್ಟಕಡೆಯ ಪ್ರಾಣಿಯನ್ನು ಗುರುತಿಸಿಕೊಳ್ಳೋಣ. ಸುದಾಮನು ಚಿಂದಿ ಉಟ್ಟಿದ್ದರೂ ಕೃಷ್ಣ ಅವನನ್ನು ಗೌರವಿಸಿದ. ಅಷ್ಟು ಗೌರವ ಬೇರೆ ಯಾರಿಗೂ ತೋರಲಿಲ್ಲ. ಧರ್ಮದ ಅಥವಾ ತ್ಯಾಗದ ಬೇರು ಪ್ರೇಮ. ಈ ನಾಶವಂತ ದೇಹವು ಎಲ್ಲ ಅಧರ್ಮಕ್ಕೂ ಎಲ್ಲ ಸ್ವಾರ್ಥಕ್ಕೂ ಮೂಲಕಾರಣ ಎಂದು ತುಳಸೀದಾಸರು ಅನ್ನುತ್ತಾರೆ. ಸ್ವರಾಜ್ಯವು ಬರಲಿ ಬಿಡಲಿ, ವೇದದ ತತ್ವವನ್ನು ಪುನರುಜ್ಜೀವನ ಗೊಳಿಸಿ ಅದನ್ನು ಜೀವಂತವಾಗಿ ಮಾಡುವ ಆಶೆ ಇದ್ದರೆ ಹಿಂದೂಗಳು ಮೊಟ್ಟ ಮೊದಲು ತಮ್ಮನ್ನು ಶುದ್ಧೀಕರಿಸಿಕೊಳ್ಳಬೇಕು.

ಸ್ವರಾಜ್ಯದ ಯೋಜನೆ:

ಈ ಚರಕ , ಹಿಂದೂ ಮುಸ್ಲಿಂ ಐಕ್ಯತೆ ,ಅಸ್ಪೃಶ್ಯತಾ ನಿವಾರಣೆ ಎಲ್ಲವೂ ಒಂದು ಗುರಿಗೆ ಸಾಧನ ಮಾತ್ರ. ಇದು ಸಾಧ್ಯವೋ ಏನೋ ತಿಳಿಯದು . ನನ್ನ ಮಟ್ಟಿಗಂತೂ ಸಾಧನ ಮಾರ್ಗ ತಿಳಿದರೆ ಸಾಕು. ನನ್ನ ಜೀವನ ಸಿದ್ಧಾಂತದಲ್ಲಿ ಸಾಧನ – ಸಾಧ್ಯ ಎರಡೂ ಒಂದಕ್ಕೊಂದು ಪರ್ಯಾಯ ಶಬ್ದಗಳು. ಆದರೆ ನಾನು ಬಾಬೂ ಭಗವಾನ ದಾಸರು , ಕನಕದಾಸರ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದೇವೆ . ಜನತೆಗೆ ನಮ್ಮ ಲಕ್ಷ್ಯ ಏನೆನ್ನುವುದು ತಿಳಿಯಬೇಕು. ಅಸ್ಪಷ್ಟವಾಗಿ ಅಲ್ಲ; ಸ್ಪಷ್ಟವಾಗಿ. ಸ್ವರಾಜ್ಯದ ಲಕ್ಷಣ ಅವರಿಗೆ ತಿಳಿಯಬೇಕು . ಅಖಿಲ ಭಾರತಕ್ಕೆ ಯಾವ ಸ್ವರಾಜ್ಯದ ಯೋಜನೆ ಬೇಕೋ ಯಾವುದಕ್ಕಾಗಿ ಹೋರಾಡಬೇಕೋ ಅದು ತಿಳಿಯಬೇಕು. ಜನರು ಸಮ್ಮೇಲನದ ಸಮಿತಿಗೆ ಈ ಕೆಲಸವನ್ನು ವಹಿಸಿ ಕೊಟ್ಟಿದ್ದಾರೆ. ಸರ್ವಪಕ್ಷಗಳಿಗೂ ಸೇರಿ ಒಂದು ಯೋಜನೆಯನ್ನು ಆ ಸಮಿತಿ ತಯಾರಿಸಿತು ಎಂದು ಆಶಿಸೋಣ; ಇದರ

ಪರಿಶೀಲನೆಗೆ ಈ ಕೆಳಗಿನ ಅಂಶಗಳನ್ನು ನಾನು ಸೂಚಿಸಲೇ?

1. ಸ್ತ್ರೀಗಾಗಲೀ ಅಧಿಕಾರಕ್ಕಾಗಲೀ ಮತದಾನದ ಅರ್ಹತೆ ಇರಬಾರದು. ಶರೀರ ಶ್ರಮದ ಅರ್ಹತೆ ಮತದಾನಕ್ಕೆ ಇರಬೇಕು. ಈಗ ಕಾಂಗ್ರೆಸ್ಸಿಗೆ ಇದ್ದ ಹಾಗೆಯೇ , ಓದು ಬರಹದ ಅಥವಾ ಸೊತ್ತಿನ ನಿಯಮವು ಭ್ರಾಮಕ. ಆಡಳಿತದಲ್ಲಿ ರಾಜ್ಯದ ಯೋಗಕ್ಷೇಮದಲ್ಲಿ ಭಾಗವಹಿಸಬೇಕು ಎನ್ನುವವರಿಗೆಲ್ಲ ಶರೀರ ಶ್ರಮವು ಸಮಾನ ಅವಕಾಶ ಕೊಡುತ್ತದೆ .
2. ಸಾಮಾನ್ಯ ದಿನಗಳಲ್ಲಿ ಪ್ರಾಣವನ್ನೂ , ಸ್ವತ್ತನ್ನು ಕಾಪಾಡಲು ಎಷ್ಟು ಅಗತ್ಯವೋ ಅಷ್ಟು ದಂಡಿನ ವೆಚ್ಚ ಸಾಕು. ಈಗ ಅದು ವಿನಾಶಕಾರಿ . ಅದನ್ನು ತಗ್ಗಿಸ ಬೇಕು.

3. ನ್ಯಾಯವಿತರಣೆ ಅಗ್ಗವಾಗಬೇಕು. ಈ ದೃಷ್ಟಿಯಿಂದ ಪರಮೋಚ್ಚ ನ್ಯಾಯಾಲಯವು ಲಂಡನ್ನಿನಲ್ಲಿ ಇರಬಾರದು, ದಿಲ್ಲಿಯಲ್ಲಿರಬೇಕು. ಸಿವಿಲ್ ದಾವೆಗಳಲ್ಲಿ ಸಾಧಾರಣವಾಗಿ ಎಲ್ಲ ಪಕ್ಷಗಳವರನ್ನೂ ಪಂಚಾಯತಿಗೆ ಒಪ್ಪಿಸುವಂತೆ ಮಾಡಬೇಕು . ಲಂಚಕೋರತನ, ಇತರ ದುರುಪಯೋಗ ಇಲ್ಲದ ಸಂದರ್ಭಗಳಲ್ಲಿ ಪಂಚಾಯತಿಯ ತೀರ್ಪು ಕಟ್ಟಕಡೆಯದಾಗಬೇಕು. ನಡುವೆ ಇರುವ ಎಷ್ಟೋ ಕೋರ್ಟುಗಳು ಎಲ್ಲವೂ ಹೋಗಬೇಕು. ಕೇಸ್ ಲಾ ಕೊನೆಗೊಳ್ಳಬೇಕು. ಸಾಧಾರಣ ಕ್ರಮ ಸಾಕು . ಇಂಗ್ಲೀಷರ ಕ್ರಮ ಬಹಳ ಹಳೆಯದು ಮತ್ತು ಬಹಳ ಬಳಸು. ನಾವು ಅದನ್ನೇ ಅನುಕರಿಸುತ್ತಿದ್ದೇವೆ. ಈ ಕ್ರಮವನ್ನು ಸರಳಮಾಡಿ, ಕೋರ್ಟಿಗೆ ಬರುವವರು ತಮ್ಮ ಪಕ್ಷವನ್ನು ತಾವೇ ಮಂಡಿಸಲು ಸಾಧ್ಯವಾಗುವಂತೆ ಸುಲಭವಾಗುವಂತೆ ನಡೆಸುವುದು ಎಲ್ಲ ವಸಾಹತುಗಳಲ್ಲಿ ನಡೆಯುತ್ತಿದೆ .
4. ಮಾದಕ ಪಾನೀಯಗಳ ಮತ್ತು ಮಾದಕ ವಸ್ತುಗಳ ಮೂಲಕ ಆಗುವ ರಾಜ್ಯದ ಆದಾಯವನ್ನು ನಿಲ್ಲಿಸಬೇಕು.
5. ಸಿವಿಲ್ ಮತ್ತು ಸೈನಿಕ ನೌಕರಿಗಳ ಸಂಬಳಗಳನ್ನು ದೇಶದ ಪರಿಸ್ಥಿತಿಗೆ ಅನುಗುಣವಾದ ಮಟ್ಟಕ್ಕೆ ಇಳಿಸಬೇಕು.
6. ದೇಶವನ್ನು ಭಾಷಾನುಗುಣವಾಗಿ ವಿಂಗಡಿಸತಕ್ಕದ್ದು. ಪ್ರತಿಯೊಂದು ಪ್ರಾಂತ್ಯಕ್ಕೂ ಒಳಾಡಳಿತವನ್ನೂ, ವಿಕಾಸವನ್ನೂ ಸಾಧಿಸಲು ಪೂರ್ಣ ಸ್ವಾತಂತ್ರ್ಯ ಇರತಕ್ಕದ್ದು.
7. ಪರದೇಶದವರಿಗೆ ಕೊಟ್ಟಿರುವ ಎಲ್ಲ ಗುತ್ತಿಗೆಗಳನ್ನು ಪರೀಕ್ಷೆ ಮಾಡಲು ಒಂದು ಆಯೋಗ ರಚಿಸಬೇಕು. ಆ ಆಯೋಗದ ವರದಿಗೆ ವಿರೋಧವಾಗದಂತೆ ನ್ಯಾಯವಾಗಿ ಸಂಪಾದಿಸಿದ ಎಲ್ಲ ಹಕ್ಕುಗಳಿಗೂ ಪೂರ್ಣ ಭರವಸೆ ಕೊಡಬೇಕು.
8. ಸಂಸ್ಥಾನಿಕರಿಗೆ ಅವರ ಸ್ಥಾನಮಾನಗಳ ಬಗ್ಗೆ ಅಭಯ ಕೊಡಬೇಕು. ಕೇಂದ್ರ ಸರಕಾರವು ಯಾವ ಆಮಿಷ ಒಡ್ಡಬಾರದು. ಯಾವ ಅಪರಾಧವನ್ನೂ ಮಾಡದ ಸಂಸ್ಥಾನಿಕ ಪ್ರಜೆಗಳು ಸ್ವತಂತ್ರ ಭಾರತದಲ್ಲಿ ನೆಲೆಸಲು ಅವಕಾಶ ಇರಬೇಕು.
9. ಎಲ್ಲ ನಿರಂಕುಶಾಧಿಕಾರವನ್ನೂ ತೆಗೆದುಹಾಕಬೇಕು.
10. ದೇಶದ ಪರಮೋಚ್ಚ ಪದವಿ, ಅರ್ಹರಾದವರೆಲ್ಲರಿಗೂ ಲಭ್ಯ ಇರಬೇಕು. ಸಿವಿಲ್ ಮತ್ತು ಸೈನಿಕ ನೌಕರಿಗಳಿಗೆ ಪರೀಕ್ಷೆಗಳು ಭಾರತದಲ್ಲಿಯೇ ನಡೆಯಬೇಕು.
11. ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ಇರಬೇಕು. ಆದರೆ ಪರಸ್ಪರ ಸಹನೆಯೂ ಇರಬೇಕು.
12. ಪ್ರಾಂತೀಯ ಸರಕಾರಗಳಿಗೆ ಶಾಸನ ಸಭೆಗಳಿಗೆ, ಕೋರ್ಟುಗಳಿಗೆ ಇಂತಿಷ್ಟು ಕಾಲದಲ್ಲಿ ಎಂದು ನಿಗದಿ ಮಾಡಿ, ಆ ಕಾಲದೊಳಗಾಗಿ ಆಯಾ ಪ್ರಾಂತೀಯ ಭಾಷೆಯೇ ಅಧಿಕೃತ ಭಾಷೆ ಆಗಬೇಕು. ಪರಮೋಚ್ಚ ಪುನರ್ವಿಮರ್ಶ ನ್ಯಾಯಾಲಯಕ್ಕೆ ಹಿಂದೂಸ್ಥಾನೀ ಭಾಷೆ ಮಾಧ್ಯಮವಾಗಬೇಕು. ಲಿಪಿ ಪಾರ್ಸಿ ಆದರೂ ಆಗಬಹುದು. ಕೇಂದ್ರ ಸರಕಾರದ ಮತ್ತು ಕೇಂದ್ರ ಶಾಸನ ಸಭೆಯ ಭಾಷೆಯು ಹಿಂದುಸ್ತಾನಿಯೇ ಆಗಬೇಕು. ಅಂತರರಾಷ್ಟ್ರೀಯ ರಾಜ್ಯತಂತ್ರದ ಭಾಷೆ ಇಂಗ್ಲೀಷ್ ಇರಬೇಕು.

ನನ್ನ ಅಭಿಪ್ರಾಯದಲ್ಲಿ ಸ್ವರಾಜ್ಯಕ್ಕೆ ಏನು ಬೇಕೋ ಅದನ್ನು ಹೇಳಿದ್ದೇನೆ. ಇದರಲ್ಲಿ ನಾನು ಹೇಳಿರುವ ಎಲ್ಲ ಕೆಲಸವನ್ನು



ಸಾಧಿಸಲು ಇವತ್ತು ನಮಗೆ ಅಧಿಕಾರವಿಲ್ಲ. ಹೋಗಲಿ, ಸಂಕಲ್ಪ ಇರುವವರಾದರೂ ಕೂಡಿ ಕನಿಷ್ಠ ಪಕ್ಷ ಹಂಬಲ ಬೆಳಸಿಕೊಳ್ಳೋಣ. ಈ ವಿಚಾರ ಬಹಳ ಆಕರ್ಷಕ. ಏಕೆಂದರೆ, ಇದು ಊಹಾ ಪ್ರಪಂಚದ್ದು. ನನ್ನ ಈ ಸೂಚನೆಗೆ ಬೇರಾವ ವ್ಯಕ್ತಿಯ ಸೂಚನೆಗಿಂತಲೂ ಹೆಚ್ಚು ಗಮನ ಕೊಡಬೇಕೆಂದು ನಾನು ಕೇಳುವುದಿಲ್ಲ ಎಂದು ಸ್ವರಾಜ್ಯ ಯೋಜನೆಯನ್ನು ತಯಾರಿಸುವ ಆ ಸಮಿತಿಗೆ ಭರವಸೆ ಕೊಡುತ್ತೇನೆ.

ಸ್ವಾತಂತ್ರ್ಯ

ಮೇಲೆ ಹೇಳಿದ್ದೆಲ್ಲವು ಬ್ರಿಟಿಷರ ಜೊತೆಗಿನ ಸಂಬಂಧವು ಸಮಾನತೆಯ ಆಧಾರದ ಮೇಲೆ ಪೂರ್ಣ ಗೌರವದಿಂದ ಇರಬೇಕು ಎಂಬುದನ್ನು ತಿಳಿಸುತ್ತದೆ. ನನ್ನ ಅಭಿಪ್ರಾಯ ಹೀಗಿದೆ : ಬ್ರಿಟಿಷ್ ಸರಕಾರ ತಾನು ಆಡಿದಂತೆ ಮಾಡಬಯಸಿದರೆ, ನಮಗೆ ಸಮಾನತೆ ಸಿಗುವುದಾದರೆ , ಸಂಪೂರ್ಣವಾಗಿ ಬ್ರಿಟಿಷರ ಸಂಬಂಧ ತ್ಯಾಗಕ್ಕಿಂತ ಅದು ಹೆಚ್ಚಿನ ಗೆಲವು. ಆದ್ದರಿಂದ ಸಾಮ್ರಾಜ್ಯದ ಒಳಗೆಯೇ ಸ್ವರಾಜ್ಯಕ್ಕಾಗಿ ಎಂದರೆ ವಸಾಹತು ಸ್ವರಾಜ್ಯಕ್ಕಾಗಿ ಪ್ರಯತ್ನ ಮಾಡುತ್ತೇನೆ. ಆದರೆ ಬ್ರಿಟನ್ನಿನ ತಪ್ಪಿನಿಂದ ಸಂಬಂಧತ್ಯಾಗ ಅಗತ್ಯವಾದರೆ ನಾನು ಅದಕ್ಕೂ ಸಿದ್ಧ: ಹಿಂದೆ ಮುಂದೆ ನೋಡಲಿಕ್ಕಿಲ್ಲ. ಹೀಗೆ ಪರಸ್ಪರ ವಿಯೋಗ ಆದರೆ ಅದರ ಹೊಣೆ ಅವರ ಮೇಲೆಯೇ. ಜಗತ್ತಿನ ಉತ್ತಮ ಬುದ್ಧಿವಂತರು ಎಲ್ಲರೂ ಪರಸ್ಪರ ಅವಲಂಬಿತವಾಗಿರುವ ರಾಜ್ಯ-ಸಮೂಹ ಇರಬೇಕು. ಒಂದರೊಡನೆ ಒಂದು ಸದಾ ಯುದ್ಧ ಮಾಡುತ್ತಿರುವ ಪೂರ್ಣ ಸ್ವತಂತ್ರ ರಾಜ್ಯಗಳು ಬೇಡ ಎನ್ನುತ್ತಾರೆ. ಅಂಥ ದಿನ ಬೇಗ ಬರಲಿಕ್ಕಿಲ್ಲ. ನಮ್ಮ ದೇಶಕ್ಕಾಗಿ ನಾನು ಹೆಚ್ಚು ಏನನ್ನೂ ಇಚ್ಛಿಸುವುದಿಲ್ಲ .ಆದರೆ ಸರ್ವ ಸ್ವಾತಂತ್ರ್ಯಕ್ಕಿಂತಲೂ ರಾಜ್ಯ ಅನ್ಯೋನ್ಯ ಅವಲಂಬನೆಗೆ ನಾವು ಸಿದ್ಧರಾಗಿದ್ದೇವೆ ಎಂದು ಹೇಳುವದು ಹೆಚ್ಚುಗಾರಿಕೆಯೂ ಅಲ್ಲ ಅಸಾಧ್ಯವಾದ ಮಾತೂ ಅಲ್ಲ. ಭಾರತದ ಜೊತೆಗೆ ಯಾವ ಸಂಬಂಧವೂ ಬೇಡ ಎಂದು ಬ್ರಿಟನ್ ಬೇಕಾದರೆ ಹೇಳಲಿ; ಸಂಪೂರ್ಣ ಸ್ವಾತಂತ್ರ್ಯವನ್ನು ಘೋಷಿಸದೆಯೇ ಪೂರ್ಣ ಸ್ವತಂತ್ರವಾಗಿರುವ ಸಾಮರ್ಥ್ಯವನ್ನು ನಾನು ಬಯಸುತ್ತೇನೆ. ಸಾಮ್ರಾಜ್ಯದೊಳಗೆ ಭಾರತಕ್ಕೆ ಸಂಪೂರ್ಣ ಸಮಾನತೆ ಎಂದು ಬ್ರಿಟನ್ ಘೋಷಿಸುವದಾದರೆ, ನನ್ನ ಯೋಜನೆಯಲ್ಲಿ ಒಂದು ಸ್ನೇಹ ಸಂಬಂಧ ಇದ್ದೇ ಇರುತ್ತದೆ.



ಸಂಬಂಧವಿಲ್ಲದ ಸಂಪೂರ್ಣ ಸ್ವಾತಂತ್ರ್ಯ ಇರದು. ಕಾಂಗ್ರೆಸಿಗರು ಪ್ರತಿಯೊಂದು ಸಂದರ್ಭದಲ್ಲಿಯೂ ಸಂಪೂರ್ಣ ಸ್ವಾತಂತ್ರ್ಯಕ್ಕೆ ಒತ್ತಾಯ ಮಾಡಬಾರದೆಂದು ಪ್ರತಿಯೊಬ್ಬರನ್ನೂ ಪ್ರಾರ್ಥಿಸುತ್ತೇನೆ. ಅದು ಅಸಾಧ್ಯವೆಂದಲ್ಲ. ಆದರೆ ಅನಾವಶ್ಯಕ. ಬ್ರಿಟನ್ ಸಂಪೂರ್ಣ ಸಮಾನತೆ ಕೊಡುವ ಘೋಷಣೆ ಮಾಡಿದರೂ, ಅವರ ನಿಜವಾದ ಉದ್ದೇಶ ನಮ್ಮನ್ನು ಅಧೀನದಲ್ಲೇ ಇಟ್ಟುಕೊಳ್ಳುವದು ಸ್ಪಷ್ಟ. ಅದು ವ್ಯಕ್ತವಾಗುವವರೆಗೆ ಸಂಪೂರ್ಣ ಸ್ವಾತಂತ್ರ್ಯಕ್ಕೆ ಒತ್ತಾಯಪಡಿಸುವುದು ಅನಾವಶ್ಯಕ.

ಸ್ವರಾಜ್ಯ ಪಕ್ಷ:

ಇಲ್ಲಿಯವರೆಗೆ ಒಪ್ಪಂದದ ಮೂಲವನ್ನೂ, ಅದರಿಂದ ಹುಟ್ಟುವ ಅನೇಕ ಪ್ರಶ್ನೆಗಳನ್ನು ಪರಿಶೀಲಿಸಿದ್ದಾಯಿತು. ಸ್ವರಾಜ್ಯ ಪಕ್ಷಕ್ಕೆ ಕೊಟ್ಟ ಸಮಾನತೆಯ ಬಗ್ಗೆ ಹೆಚ್ಚು ಹೇಳಬೇಕಾದ್ದು ಏನೂ ಇಲ್ಲ. ಇದನ್ನು ತಪ್ಪಿಸಿದ್ದರೆ ಚೆನ್ನಾಗಿತ್ತು . ಆ ಪಕ್ಷ ಸರಿ ಇಲ್ಲವೆಂದಲ್ಲ; ಶಾಸನಸಭಾ ಪ್ರವೇಶದ ಬಗ್ಗೆ ಅದರ ಅಭಿಪ್ರಾಯಗಳು ನನಗೆ ಸಹಮತವಿಲ್ಲ ಅಷ್ಟೇ. ಕಾಂಗ್ರೆಸ್ಸಿನೊಳಗೆ ಇದ್ದು,ಮುಂದೆ ನಿಂತು ಅದನ್ನು ನಡೆಸಲೂ ಬೇಕಾದರೆ ಇರುವ ಸಂಗತಿಗಳನ್ನು ಇರುವ ಹಾಗೆಯೇ ಗ್ರಹಿಸಬೇಕು . ಕಾಂಗ್ರೆಸನ್ನು ಬಿಟ್ಟು ಹೋಗುವುದೂ ನನಗೆ ಸುಲಭವಾಗಿತ್ತು. ಈ ಅಧ್ಯಕ್ಷ ಪದವಿಯ ಗೌರವವನ್ನು ನಿರಾಕರಿಸಲೂ ಬರುತ್ತಿತ್ತು. ಆದರೆ ಹಾಗೆ ಮಾಡುವುದು ದೇಶಕ್ಕೆ ಹಿತವಲ್ಲ ಎಂದು ನಾನು ಯೋಚಿಸಿದೆ. ಈಗಲೂ ನನ್ನ ಯೋಚನೆ ಹಾಗೆಯೇ ಇದೆ. ಸ್ವರಾಜ್ಯ ಪಕ್ಷಕ್ಕೆ ಕಾಂಗ್ರೆಸ್ಸಿನಲ್ಲಿ ಬಹುಸಂಖ್ಯೆ ಇರದಿದ್ದರೂ, ದಿನೇ ದಿನೇ ಬೆಳೆಯುತ್ತಿರುವ ಬಲಿಷ್ಠವಾದ ಅಲ್ಪಸಂಖ್ಯೆ ಅದು. ಆ ಪಕ್ಷದವರ ಗೌರವದ ಪ್ರಶ್ನೆಯ ಮೇಲೆ ಕಾಂಗ್ರೆಸ್ಸನ್ನು ಇಬ್ಭಾಗ ಮಾಡಬಾರದೆಂದು ನಾನು ಹೇಳಿದರೆ ಅವರ ಕರಾರುಗಳಿಗೆ ನಾನು ಒಪ್ಪಲೇಬೇಕು ಅಷ್ಟೇ . ಆ ಕರಾರು ನನ್ನ ಅಂತರಂಗಕ್ಕೆ ವಿರುದ್ಧವಾಗಿರಬಾರದು . ಅವರೇನೂ ಅವಿಚಾರಿಗಳಲ್ಲ. ತಮ್ಮ ಧೋರಣೆಗೆ ಸ್ವರಾಜ್ಯ ಪಕ್ಷದವರು ಕಾಂಗ್ರೆಸಿನ ಹೆಸರನ್ನು ಬಳಸಬಯಸುತ್ತಾರೆ. ಅವರು ಹಾಗೆ ಮಾಡಲು ಅವಕಾಶ ಇರಬೇಕು. ಆದರೆ ಅವರು ತಮ್ಮ ಧೋರಣೆಯಿಂದ ಅಪರಿವರ್ತನವಾದಿಗಳನ್ನು ಬಂಧಿಸಬಾರದು. ಇಂಥ ಒಂದು ಸೂತ್ರವನ್ನು ಹುಡುಕಬೇಕಾಗಿತ್ತು. ಅದನ್ನು ಮಾಡಲು ಒಂದು ಮಾರ್ಗ ಅವರ ಧೋರಣೆಯನ್ನು ಅವರು ಅನುಸರಿಸಲು, ಅದನ್ನು ನಿಶ್ಚಯಿಸಲು, ಅವರಿಗೆ ಆರ್ಥಿಕ ಮತ್ತು ವ್ಯಾವಹಾರಿಕ ಜವಾಬ್ದಾರಿಯನ್ನೂ ಅಧಿಕಾರವನ್ನೂ ಕೊಡುವದು.

ಇಡೀ ಕಾಂಗ್ರೆಸ್ಸೇ ಆ ಕೆಲಸ ಮಾಡಬೇಕು ಎಂದರೆ ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.ನಾನು ಅದನ್ನು ಹೊರಲಾರೆ. ಅಪರಿವರ್ತನವಾದಿಗಳು ಯಾರೂ ಹೊರಲಾರರು ಎಂದು ನನಗೆ ಅನಿಸುತ್ತದೆ. ಅದರ ಧೋರಣೆಯನ್ನು ನಾನು ನಿಶ್ಚಯಿಸಲಾರೆ. ನನಗೆ ಅದರಲ್ಲಿ ಮನಸ್ಸಿಲ್ಲ.ಹೀಗೆ ಸ್ವರಾಜ್ಯ ಪಕ್ಷಕ್ಕೆ, ತನ್ನ ಶಾಸನಾಸಭಾ ಪ್ರವೇಶದ ಕಾರ್ಯಕ್ರಮಕ್ಕೆ ಕಾಂಗ್ರೆಸಿನ ಹೆಸರು ಬಳಸಲು ಅವಕಾಶ ಕೊಟ್ಟರೆ ಕಾಂಗ್ರೆಸಿಗೆ ಇತರ ಪಕ್ಷಗಳಿಗೂ ಯಡವಟ್ಟಾಗುತ್ತದೆ. ಇದು ಅನಿವಾರ್ಯ ಎಂದು ನನಗೆ ಅಂಜಿಕೆ. ಸ್ವರಾಜ್ಯಪಕ್ಷ ,ತನಗೆ ಈಗಿರುವ ವಿಶೇಷ ಅನುಕೂಲತೆಯನ್ನು ಬಿಟ್ಟುಕೊಡಲಾರದು. ಅದಕ್ಕೆ ಈ ನೀತಿ ತನಗಾಗಿ ಬೇಕಾಗಿಲ್ಲ. ದೇಶದ ಸೇವೆಗಾಗಿ ಬೇಕು. ಎಲ್ಲ ಪಕ್ಷಗಳಿಗೂ ಅದೇ ಆಶೆ .ಬೇರೆ ಸಾಧ್ಯವಿಲ್ಲ. ಆದ್ದರಿಂದ ಇತರರು ಕಾಂಗ್ರೆಸಿಗೆ ಸೇರಿ ಒಳಗೆ ನಿಂತು ಕೆಲಸಮಾಡಿ,ದೇಶದ ಧೋರಣೆಗಳನ್ನು ದಾಖಲಿಸಬಹುದು . ಡಾ। ಅನಿ ಬೆಜೆಂಟರು ಆ ದಾರಿಯಲ್ಲಿ ಕೆಲಸ ಮಾಡಿದ್ದಾರೆ . ಇನ್ನೂ ಎಷ್ಟೋ ಕೆಲಸ ಆಗಬೇಕೆಂದು ಆಕೆಯ ಮನಸ್ಸು. ಆದರೆ ಸಂಸ್ಥೆಯ ಒಳಗಡೆ ಇದ್ದುಕೊಂಡು ಕಾಂಗ್ರೆಸಿನ ಮತದಾರರನ್ನು ತನ್ನ ಅಭಿಪ್ರಾಯಕ್ಕೆ ತರಬಹುದು ಎಂದು ಆಕೆ ಭಾವಿಸಿದ್ದಾಳೆ. ಅಪರಿವರ್ತನವಾದಿಗಳು ನಿಸ್ಸಂಕೋಚವಾಗಿ ಈ ಒಪ್ಪಂದಕ್ಕೆ ಮತ ಕೊಡಬಹುದು ಎನ್ನುವುದು ನನ್ನ ಅಭಿಪ್ರಾಯ. ಎಲ್ಲರೂ ಎಲ್ಲ ಗುಂಪುಗಳು ಒಟ್ಟುಗೂಡಿ ನಡೆಸಬಹುದಾದ ರಾಷ್ಟ್ರೀಯ ವಾದಗಳು ಎಂದರೆ ಖಾದಿ, ಹಿಂದೂ ಮುಸ್ಲಿಂ ಐಕ್ಯ, ಹಿಂದೂಗಳಿಗಾಗಿ ಅಸ್ಪೃಶ್ಯತಾ ನಿವಾರಣೆ. ಇಷ್ಟೆ ಅಲ್ಲವೇ ಅವರಿಗೆ ಬೇಕಾದ್ದು.

ಕೇವಲ ಸಾಮಾಜಿಕ ಸುಧಾರಣೆಯೋ?

ಈ ಕಾರ್ಯಕ್ರಮವು ಕಾಂಗ್ರೆಸ್ಸನ್ನು ಕೇವಲ ಸಾಮಾಜಿಕ ಸುಧಾರಣೆಯ ಸಂಸ್ಥೆಯಾಗಿ ಮಾಡುತ್ತದೆ ಎನ್ನುತ್ತಾರೆ. ನನ್ನ ಅಭಿಪ್ರಾಯ ಬೇರೆ. ಸ್ವರಾಜ್ಯಕ್ಕೆ ಬೇಕಾದ ಅತ್ಯಗತ್ಯ ವಿಷಯಗಳು ಸಮಾಜ ಸುಧಾರಣೆಗಿಂತ ಹೆಚ್ಚಿನವು. ಅವನ್ನು ಕಾಂಗ್ರೆಸ್ ಕೈಕೊಳ್ಳಬೇಕು. ಕಾಂಗ್ರೆಸ್ ಯಾವಾಗಲೂ ಇದೊಂದೇ ಕೆಲಸ ಮಾಡುತ್ತ ಇರಬೇಕೆಂದು ನನ್ನ ವಿಚಾರವಲ್ಲ. ಆದರೆ ಬರುವ ವರ್ಷ ಪೂರಾ ತನ್ನ ಶಕ್ತಿಯನ್ನು ರಚನಾತ್ಮಕ ಕಾರ್ಯಕ್ಕೆ ಅಥವಾ ನನ್ನ ವಿವರಣೆಯಂತೆ ಆಂತರಿಕ ವಿಕಾಸಕ್ಕೆ ಗಮನ ಕೊಡಬೇಕು . ಈ ಒಪ್ಪಂದದಲ್ಲಿ ಸೇರಿಸಿದ ರಚನಾತ್ಮಕ ಕಾರ್ಯಗಳಷ್ಟೇ ಕಾಂಗ್ರೆಸ್ ಕೈಕೊಳ್ಳಬೇಕಾದ ರಚನಾತ್ಮಕ ಕಾರ್ಯಕ್ರಮಗಳು ಎಂದರ್ಥವಲ್ಲ. ಅವು ಇನ್ನೂ ಬೇಕಾದಷ್ಟಿವೆ. ಈಗ ನಾನು

ಹೇಳಲಿರುವ ಕಾರ್ಯಕ್ರಮಗಳು ಸಹ ಬಹಳ ಮುಖ್ಯವಾದವು.

ರಾಷ್ಟ್ರೀಯ ಶಾಲೆಗಳು:

ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಅಂಥದ್ದೊಂದು. ಜನತೆಗೆ ಗೊತ್ತಿದೆಯೋ ಇಲ್ಲವೋ–ಖಾದಿಯ ತರುವಾಯ ಈ ಸಂಸ್ಥೆಗಳ ನಿರ್ವಹಣವೇ ಹೆಚ್ಚು ಯಶಸ್ವಿ. ಇದನ್ನು ಕೈಬಿಡಲು ಆಗದು. ಕೆಲವೇ ವಿದ್ಯಾರ್ಥಿಗಳಾದರು ಚಿಂತೆ ಇಲ್ಲ,ತಮ್ಮ ಕಾಲೇಜುಗಳನ್ನು ರಾಷ್ಟ್ರೀಯ ನೀತಿಗೆ ಹೊಂದಿಸ ಬೇಕಾದ್ದರಿಂದ ಪ್ರಾಂತ್ಯಗಳಿಗೆ ಒಂದು ಗೌರವ. ಅಸಹಕಾರವನ್ನು ನಿಲ್ಲಿಸಿದ್ದರಿಂದ ಈ ಸಂಸ್ಥೆಗಳ ಮೇಲೆ ಯಾವ ಕೆಟ್ಟ ಪರಿಣಾಮವೂ ಆಗಬಾರದು. ಅದಕ್ಕೆ ಬದಲು ಇವನ್ನು ಸ್ಥಿರಗೊಳಿಸಿ, ಬಲಪಡಿಸಲು ಹೆಚ್ಚು ಪ್ರಯತ್ನ

ನಡೆಯಬೇಕು. ಅನೇಕ ಪ್ರಾಂತಗಳಲ್ಲಿ ರಾಷ್ಟ್ರೀಯ ಶಾಲೆಗಳು ಕಾಲೇಜುಗಳು ಇವೆ. ಗುಜರಾತ್ ಪ್ರಾಂತ್ಯ ಒಂದರಲ್ಲೇ ರಾಷ್ಟ್ರೀಯ ವಿದ್ಯಾಪೀಠ ಇದೆ. ಅವಕ್ಕೆ ವರ್ಷ ವರ್ಷವೂ ಸುಮಾರು 1 ಲಕ್ಷ ರೂಪಾಯಿ ವೆಚ್ಚವಾಗುತ್ತದೆ . ಇದರ ಕೈಕೆಳಗೆ ಮೂರು ಕಾಲೇಜು, ಎಪ್ಪತ್ತು ಶಾಲೆಗಳು ಇವೆ,ಒಂಬತ್ತು ಸಾವಿರ ವಿದ್ಯಾರ್ಥಿಗಳಿದ್ದಾರೆ . ಅದು ತನ್ನ ಸ್ವಂತ ನಿವೇಶನವನ್ನು ಸಂಪಾದಿಸಿದೆ. ಈಗಾಗಲೇ 2,05,323 ರೂ. ಗಳನ್ನು ಕಟ್ಟಡಕ್ಕಾಗಿ ವೆಚ್ಚ ಮಾಡಿದೆ. ದೇಶಾದ್ಯಂತ ಈ ಕೆಲಸ ಸದ್ದಿಲ್ಲದೇ ಅತ್ಯುತ್ತಮವಾಗಿ ನಡೆದಿದೆ. ಅಸಹಕಾರ ಮಾಡಿದ ವಿದ್ಯಾರ್ಥಿಗಳ ಕೆಲಸವಿದು. ಅವರ ತ್ಯಾಗವು ಅತ್ಯುತ್ತಮ. ಅತಿ ಶ್ರೇಷ್ಠ. ಪ್ರಾಪಂಚಿಕ ದೃಷ್ಟಿಯಿಂದ ಅವರು ತಮ್ಮ ಉಜ್ವಲ ಭವಿಷ್ಯವನ್ನು ಕಳೆದುಕೊಂಡಿರಬಹುದು. ಆದರೆ ರಾಜಕೀಯ ದೃಷ್ಟಿಯಿಂದ , ಅವರಿಂದಾದ ನಷ್ಟಕ್ಕಿಂತ ಲಾಭವೇ ಹೆಚ್ಚು ಎನ್ನುತ್ತೇನೆ. ಈ ವಿದ್ಯಾರ್ಥಿಗಳು ತಮ್ಮ ಮೊದಲಿನ ಶಾಲೆ ಕಾಲೇಜುಗಳನ್ನು ತೊರೆದರು. ಏಕೆಂದರೆ ಈ ಶಾಲೆ ಕಾಲೇಜುಗಳಲ್ಲಿ ತರಬೇತಾದ ಜನರಿಂದಲೇ ರಾಷ್ಟ್ರದ ತರುಣ ಜನಾಂಗಕ್ಕೆ ಪಂಜಾಬಿನಲ್ಲಿ ಉಪಮಾನವಾಯಿತು, ತೇಜೋಭಂಗವಾಯಿತು.

ನಮ್ಮ ಗುಲಾಮ ನದಿಯ ಮೊದಲನೆಯ ಕೊಂಡಿ ಈ ಬ್ರಿಟಿಷ್ ಚಾಲಿತವಾದ ಶಾಲೆಗಳಲ್ಲಿ ಸಿದ್ಧವಾಗುತ್ತದೆ. ಇದಕ್ಕೆ ವಿರುದ್ಧವಾದ ರಾಷ್ಟ್ರೀಯ ಶಾಲೆಗಳನ್ನು ಎಷ್ಟು ಕ್ಷಮತಾ ಹೀನವಾಗಿ ನಡೆಸಿದರೂ ನಮ್ಮ ಸ್ವಾತಂತ್ರ್ಯದ ಪ್ರಥಮ ಆಯುಧಗಳನ್ನು ತಯಾರು ಮಾಡುವ ಕಾರಖಾನೆಗಳು ಅವು. ಮುಂದಿನ ಭವಿಷ್ಯವು ನಮ್ಮ ಈ ರಾಷ್ಟ್ರೀಯ ಸಂಸ್ಥೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಕೈಯಲ್ಲೇ ಇದೆ. ಆದ್ದರಿಂದ ಪ್ರಾಂತೀಯ ಹಣಕಾಸಿನ ವೆಚ್ಚದಲ್ಲಿ ಇವಕ್ಕೆ ಮೊದಲನೆಯ ಸ್ಥಾನ. ಈ ಸಂಸ್ಥೆಗಳು ನಿಜವಾಗಿ ರಾಷ್ಟ್ರೀಯವಾಗಬೇಕಾಗಿದ್ದರೆ, ಅವು ಹಿಂದೂ ಮುಸ್ಲಿಂ ಐಕ್ಯವನ್ನು ಬೆಳೆಸಬೇಕು. ಅಸ್ಪೃಶ್ಯತೆಯು ಹಿಂದೂ ಧರ್ಮಕ್ಕೆ ಒಂದು ಕಳಂಕ ಮತ್ತು ಮಾನವೀಯತೆಗೆ ಎಸಗಿದ ಅಪರಾಧ ಎಂದು ಹಿಂದೂ ಬಾಲಕ ಬಾಲಕಿಯರು ತರಬೇತಿ ಪಡೆಯುವ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ತಿಳಿಯಬೇಕು. ನೂಲುವವರಿಗೆ ನೇಯುವವರಿಗೆ ಅತ್ಯುತ್ತಮ ತಾಂತ್ರಿಕ ಶಿಕ್ಷಣ ಕೊಡಬೇಕು. ಚರಕದಲ್ಲಿ ಖಾದಿಯಲ್ಲಿ ಕಾಂಗ್ರೆಸ್ಸಿಗೆ ವಿಶ್ವಾಸ ಉಳಿದುಕೊಂಡಿದ್ದರೆ ಚರಕಾ ಶಾಸ್ತ್ರವನ್ನು ಈ ಸಂಸ್ಥೆಗಳು ಒದಗಿಸಬೇಕು ಎಂದು ಅಪೇಕ್ಷಿಸುವ ಅಧಿಕಾರ ನಮಗಿದೆ. ಇವು ಖಾದಿ ಅಭಿಮಾನದ ಕಾರಖಾನೆಗಳು ಆಗಬೇಕು.

ಹೀಗೆಂದರೆ ವಿದ್ಯಾರ್ಥಿಗಳಿಗೆ ಅಕ್ಷರ ಶಿಕ್ಷಣವೇ ಬೇಡ ಎಂದಲ್ಲ. ಆದರೆ ಹಸ್ತಕೌಶಲದ ಶಿಕ್ಷಣ ಮತ್ತು ಅಂತಃಕರಣ ಶಿಕ್ಷಣ, ಬೌದ್ಧಿಕ ಶಿಕ್ಷಣದ ಜೊತೆಗೆಯೇ ನಡೆಯಬೇಕೆಂದು ನನ್ನ ಅಭಿಪ್ರಾಯ. ರಾಷ್ಟ್ರೀಯ ಸಂಸ್ಥೆಯ ಯೋಗ್ಯತೆ ಅದರ ಪ್ರಯೋಜನ ನಮಗೆ ತಿಳಿಯಬೇಕಾದುದು ವಿದ್ಯಾರ್ಥಿಗಳ ಗ್ರಂಥ ಪಾಂಡಿತ್ಯದ ಹಿರಿಮೆಯಿಂದಲ್ಲ . ರಾಷ್ಟ್ರೀಯ ಚಾರಿತ್ರ್ಯವನ್ನು ನೂಲುವ ರಾಟಿಯನ್ನು, ಮಗ್ಗವನ್ನು ಉಪಯೋಗಿಸುವ ಕೌಶಲ್ಯಗಳಿಂದ ಅಳೆಯಬೇಕು. ರಾಷ್ಟ್ರೀಯ ಸಂಸ್ಥೆಗಳು ಯಾವುದೂ ಮುಚ್ಚಬಾರದು ಎಂದು ನನ್ನ ಚಿಂತೆ. ಆದರೆ ಹಿಂದೂಗಳಲ್ಲದವರನ್ನು ಸೇರಿಸಿಕೊಳ್ಳಲು ಹಿಂದೆ ಮುಂದೆ ನೋಡುವ ಮತ್ತು ಅಸ್ಪೃಶ್ಯರನ್ನು ಸೇರಿಸಿಕೊಳ್ಳದ ಅಥವಾ ಹಿಂಜುವುದನ್ನೂ ನೂಲುವುದನ್ನೂ ಶಿಕ್ಷಣದ ಭಾಗ ಎಂದು ಕಲಿಸದ ಶಾಲೆ ಕಾಲೇಜುಗಳನ್ನು ಮುಚ್ಚಿಬಿಡಲು ನಾನು ಕಿಂಚಿತ್ತೂ ಹಿಂದೆ ಮುಂದೆ ನೋಡುವದಿಲ್ಲ. ಶಾಲೆಯ ನಾಮಫಲಕದ ಮೇಲೆ ರಾಷ್ಟ್ರೀಯ ಎಂಬ ಶಬ್ದವನ್ನು ಬರೆಯಿಸಿ. ಸರಕಾರಕ್ಕೆ ಇದು ಸಂಬಂಧಿಸಿಲ್ಲ, ಸರಕಾರದ ನಿಯಂತ್ರಣ ಇದಕ್ಕಿಲ್ಲ ಎಂಬುದರಿಂದಲೇ ತೃಪ್ತಿಪಡುವ ಕಾಲ ಹಿಂದಾಯಿತು. ಅನೇಕ ರಾಷ್ಟ್ರೀಯ ಸಂಸ್ಥೆಗಳಲ್ಲಿ ಇನ್ನೂ ಪ್ರಾಂತೀಯ ಭಾಷೆಗಳಿಗೆ ಮತ್ತು ಹಿಂದುಸ್ತಾನಿಗೆ ಗಮನ ಕೊಡುತ್ತಿಲ್ಲ ಎಂಬುದನ್ನು ಹೇಳದೆ ಇರಲಾರೆ. ಪ್ರಾಂತೀಯ ಭಾಷೆಯ ಮೂಲಕ, ಹಿಂದುಸ್ತಾನಿಯ ಮೂಲಕ ಶಿಕ್ಷಣ ನೀಡುವ ಅಗತ್ಯವನ್ನು ಇನ್ನೂ ಅನೇಕ ಉಪಾಧ್ಯಾಯರು ಅರಿತುಕೊಂಡಿಲ್ಲ. ರಾಷ್ಟ್ರೀಯ ಶಿಕ್ಷಣಶಾಸ್ತ್ರಜ್ಞರ ಈ ಸಭೆಯನ್ನು ಏರ್ಪಡಿಸಿ, ನಾನು ಈಗ ಹೇಳಿದ ಕೆಲವು ವಿಷಯಗಳ ಬಗ್ಗೆ ತಮ್ಮ ಅನುಭವವನ್ನು ವಿನಿಮಯ ಮಾಡಿಕೊಂಡು, ಸಾಧ್ಯವಿದ್ದರೆ ಒಂದು ಸರ್ವ ಸಾಧಾರಣ ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ಸಿದ್ಧಗೊಳಿಸಲು ಗಂಗಾಧರ ರಾಯರು ಏರ್ಪಾಟು ಮಾಡಿದ್ದಾರೆ. ಅದು ನನಗೆ ತುಂಬಾ ಸಂತೋಷ .

ನಿರುದ್ಯೋಗಿ ಅಸಹಕಾರಿಗಳು

ರಾಷ್ಟ್ರದ ಕರೆಗೆ ಓಗೊಟ್ಟು ವಕೀಲಿಯನ್ನು ಬಿಟ್ಟ ವಕೀಲರ ಬಗ್ಗೆ, ಸರಕಾರಿ ನೌಕರಿಯನ್ನು ಬಿಟ್ಟ ಶಿಕ್ಷಕರ ಬಗ್ಗೆ ಮತ್ತು ಸರಕಾರೀ ನೌಕರರ ಬಗ್ಗೆ ಒಂದು ಮಾತು ಹೇಳಲು ಇದೇ ಸರಿಯಾದ ಸ್ಥಾನ. ನಾನು ಬಲ್ಲೆ ; ಅವರಲ್ಲಿ ಅನೇಕರಿಗೆ ಎರಡು ಹೊತ್ತಿನ ಊಟಕ್ಕೂ ತೊಂದರೆಯಿದೆ. ಅವರಿಗೆ ರಾಷ್ಟ್ರದ ಸಹಾಯ ದೊರೆಯಬೇಕು. ಖಾದಿ ಬೋರ್ಡು, ರಾಷ್ಟ್ರೀಯ ಶಾಲೆ ಕಾಲೇಜುಗಳು ಎರಡೂ ಪ್ರಾಮಾಣಿಕರಾದ ಉದ್ಯೋಗಶೀಲರಾದ ಅನೇಕರನ್ನು ನೇಮಿಸಿ ಕೊಳ್ಳಬಹುದು. ಆದರೆ ಈ ಜನರು ಕಷ್ಟಪಡಲು, ಕಲಿಯಲು, ಅಲ್ಪತೃಪ್ತರಾಗಿರಲು ಸಿದ್ಧರಾಗಿರಬೇಕು. ರಾಷ್ಟ್ರೀಯ ಸೇವೆಗಾಗಿ ಏನೂ ಪ್ರತಿಫಲವನ್ನು ಸ್ವೀಕರಿಸದ ಮನೋವೃತ್ತಿ ಜನರಲ್ಲಿ ಬೆಳೆಯುತಿದೆ. ಪ್ರತಿಫಲವಿಲ್ಲದೇ ಸೇವೆ ಸಲ್ಲಿಸುವುದು ಪ್ರಶಂಸನೀಯವೇ ಸರಿ. ಆದರೆ ಇದು ಎಲ್ಲರಿಗೂ ಸಾಧ್ಯವಿಲ್ಲ. ಪ್ರತಿಯೊಬ್ಬನಿಗೂ ಅವನ ಪಾರಿಶ್ರಮಿಕ ಸಲ್ಲಬೇಕು. ಪ್ರತಿಫಲ ತೆಗೆದುಕೊಳ್ಳದ ಕಾರ್ಯಕರ್ತರನ್ನು ಯಾವ ದೇಶವೂ ಸಾವಿರಗಟ್ಟಲೆ ಉತ್ಪನ್ನ ಮಾಡಲಾರದು. ಆದ್ದರಿಂದ ದೇಶಾಭಿಮಾನಿಗಳು ದೇಶಸೇವೆ ಸಲ್ಲಿಸಿ, ಅದಕ್ಕೆ ತಕ್ಕ ಪ್ರತಿಫಲ ಪಡೆಯುವದು ಒಂದು ಗೌರವ ಎಂಬ ವಾತಾವರಣವು ಬೆಳೆಯಬೇಕು.

ಮಾದಕ ಪದಾರ್ಥಗಳು:

ರಾಷ್ಟ್ರೀಯ ಪ್ರಾಮುಖ್ಯತೆಯ ಇನ್ನೊಂದು ಸಂಗತಿ ಎಂದರೆ ಹೆಂಡದ ಮಾರಾಟ ಮತ್ತು ಅಫೀಮಿನ ವ್ಯಾಪಾರ. ಪಾನ ನಿಷೇಧದ ಬಗ್ಗೆ 1921ರಲ್ಲಿ ದೇಶವನ್ನು ಅಲ್ಲಾಡಿಸಿದ ಉತ್ಸಾಹ ತರಂಗ ಅಹಿಂಸಾತ್ಮಕವಾಗಿ ಉಳಿದಿದ್ದರೆ, ಇವತ್ತು ನಮಗೆ ಅದರಲ್ಲಿ ಒಂದು ಪ್ರಗತಿ ಕಾಣುತ್ತಿತ್ತು. ನಮ್ಮ ದುರದೃಷ್ಟ ನಮ್ಮ ಪಿಕೆಟಿಂಗ್ ಹಿಂಸಾತ್ಮಕವಾಯಿತು. ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪ್ರಚ್ಛನ್ನವಾಗಿ, ಆದ್ದರಿಂದ ಪಿಕೆಟಿಂಗ್‌ನ್ನು ನಿಲ್ಲಿಸಲಾಯಿತು.ಹೆಂಡದ ಗಂಡಂಗಗಳೂ ಅಫೀಮಿನ ಅಂಗಡಿಗಳೂ ಮೊದಲಿನಂತೆಯೇ ಏಳಿಗೆ ಹೊಂದಿದವು. ಆದರೆ ಪಾನನಿಷೇಧದ ಪ್ರಚಾರಕಾರ್ಯ ಪೂರ್ಣ ನಿಂತುಹೋಗಿಲ್ಲ ಎಂಬುದನ್ನು ಕೇಳಿ ನಿಮಗೆ ಸಂತೋಷವಾಗಬಹುದು. ಎಷ್ಟೋ ಜನ ಕೆಲಸಗಾರರು ಸದ್ದಿಲ್ಲದೆ ಸ್ವಾರ್ಥವಿಲ್ಲದೆ ಇನ್ನೂ ಈ ಕೆಲಸವನ್ನು ನಡೆಸುತ್ತಲೇ ಇದ್ದಾರೆ. ಮಾದಕ ಪದಾರ್ಥ ಸೇವನೆಯ ಈ ದುಷ್ಟಪದ್ಧತಿ ಸ್ವರಾಜ್ಯ ಸಾಧನೆಯ ಅಂಶ ಎಂಬುದನ್ನು ನಾವು ಅರಿತುಕೊಳ್ಳಬೇಕು.ದುರ್ನೀತಿಯ ಮೂಲಕ ಬಂದ ಹಣದಿಂದ ನಮ್ಮ ಮಕ್ಕಳಿಗೆ ಶಿಕ್ಷಣ ದೊರೆಯುತ್ತಿದೆ ಎಂಬುದು ನಮಗೆ ಗೌರವದ ಸಂಗತಿ ಅಲ್ಲ. ಕಾಂಗ್ರೆಸಿಗರು ಶಾಸನ ಸಭೆಗೆ ಹೋದರೂ ಚಿಂತೆ ಇಲ್ಲ,ಮಾದಕ ಪದಾರ್ಥದಿಂದ ಬರುವ ಈ ಆದಾಯವನ್ನು ಧೈರ್ಯದಿಂದ ಕಿತ್ತುಹಾಕಿಬಿಟ್ಟರೆ ನಾನು ಕ್ಷಮಿಸಿಯೇನು. ಇದರಿಂದ ಶಿಕ್ಷಣ ನಿಂತರೂ ಚಿಂತೆಯಿಲ್ಲ . ಸೇನೆಯ ವೆಚ್ಚವನ್ನು ತಗ್ಗಿಸಲು ಒತ್ತಾಯ ಮಾಡಿದರೆ ಇಂಥ ಪರಿಸ್ಥಿತಿ ಬರುವದೇ ಇಲ್ಲ.

ಬಂಗಾಳದ ದಬ್ಬಾಳಿಕೆ – ದಮನ:

ಇಲ್ಲಿಯವರೆಗೆ ಆಂತರಿಕ ವಿಷಯಗಳನ್ನೇ ಪ್ರಸ್ತಾಪ ಮಾಡಿದ್ದೇನೆ. ಆದರೆ ನಮ್ಮ ಬಾಹ್ಯ ಪರಿಸ್ಥಿತಿಗಳು — ಮುಖ್ಯವಾಗಿ ನಮ್ಮ ಆಡಳಿತಗಾರರು ಮಾಡುತ್ತಿರುವ ಕೆಲಸಗಳು ನಮ್ಮ ವಿರುದ್ಧವಾಗಿ ಅದೃಷ್ಟವನ್ನು ರೂಪಿಸುತ್ತಿವೆ. ಆದರೆ ನಮಗೆ ಮನಸ್ಸಿದ್ದರೆ ಅವನ್ನು ನಮ್ಮ ಅನುಕೂಲಕ್ಕೆ ತಿರುಗಿಸಿಕೊಳ್ಳಬಹುದು. ಅಥವಾ ಅದಕ್ಕೆ ತುತ್ತಾಗಲೂಬಹುದು. ನಮ್ಮ ಪ್ರಜೆಗಳ ಇತ್ತೀಚಿನ ಕೃತ್ಯ ಅಂದರೆ ಬಂಗಾಳದಲ್ಲಿ ಅವರು ಆರಂಭಿಸಿರುವ ದಬ್ಬಾಳಿಕೆ ಮತ್ತು ದಮನ. ಸರ್ವಪಕ್ಷ ಸಮ್ಮೇಳನವು ಅದನ್ನು ಅಸಂದಿಗ್ಧ ಶಬ್ದಗಳಲ್ಲಿ ಖಂಡಿಸಿತು. ದಬ್ಬಾಳಿಕೆಯು ಬಂಗಾಳದ ಸ್ವರಾಜ್ಯ ಪಕ್ಷಕ್ಕೆ ಕೊಟ್ಟ ಏಟು ಎಂದು ಹೇಳಲು ಆ ಸಮ್ಮೇಲನಕ್ಕೆ ಸಂಕೋಚವಿತ್ತು. ನನಗಂತೂ ಒಪ್ಪಿಗೆ ಇಲ್ಲ. ನಾನು ಕಲ್ಕತ್ತೆಗೆ ಹೋಗಿದ್ದೆ. ಭಿನ್ನ ಭಿನ್ನ ಅಭಿಪ್ರಾಯದ ಜನರ ಪ್ರತಿನಿಧಿಗಳನ್ನು ಭೇಟಿ ಮಾಡಿದೆ . ಸ್ವರಾಜ್ಯ ಪಕ್ಷ ಕೊಟ್ಟ ಏಟು ಇದು ಎಂಬ ತೀರ್ಮಾನಕ್ಕೂ ಬಂದೆ. ಆಮೇಲೆ ಲಾರ್ಡ ಲಿಟನ್, ಲಾರ್ಡ ರೀಡಿಂಗ್ ಮಾಡಿದ ಭಾಷಣಗಳಿಂದ ಈ ಅಭಿಪ್ರಾಯ ಸ್ಥಿರವಾಯಿತು. ಅವರು ಮಾಡಿಕೊಂಡಿರುವ ಸಮರ್ಥನೆ, ತೀರ ಅಸಮರ್ಪಕವಾಗಿತ್ತು ಯಾರಿಗೂ ಅದು ಒಪ್ಪಿಗೆ ಆಗಲಾರದು. ಭಾರತದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಏನೂ ಬೆಲೆಯಿಲ್ಲ. ಆದ್ದರಿಂಧ ಇಂಥಲ್ಲಿ ಮಾತ್ರ ಆ ಸಮರ್ಥನೆ ಸಾಧ್ಯ. ಸೆರೆಯಾಳುಗಳನ್ನು ಬಿಡಲು ಲಾರ್ಡ ಲಿಟನ್ ಹಾಕಿದ ಕರಾರು ನಮ್ಮ ಬುದ್ಧಿಗೇ ಒಂದು ಅವಮಾನ. ಪರಿಸ್ಥಿತಿ ಅಂಥದಿಲ್ಲ ಅಂದರೂ ಇದೆ ಎಂದು ಗ್ರಹಿಸಿ ಪರಿಸ್ಥಿತಿಯ ಮೂಲಕ ಈ ಸುಗ್ರೀವಾಜ್ಞೆಯನ್ನು (ಆರ್ಡಿನನ್ಸ್) ಹೊರಡಿಸ ಬೇಕಾಯಿತು; 1818ರ ನಿಯಮದಂತೆ ಕಾರ್ಯವನ್ನು ಕೈಕೊಳ್ಳ ಬೇಕಾಯಿತು ಎಂದು ಅವರು ಹೇಳಿದ್ದಾರೆ.



ರಾಷ್ಟದ ವಾದ ಹೀಗಿದೆ:

- ಅವರು ವರ್ಣಿಸಿರುವ ಪರಿಸ್ಥಿತಿ ಇದ್ದುದಕ್ಕೆ ಪ್ರಮಾಣವಿಲ್ಲ.
- ಒಂದು ವೇಳೆ 'ಅಂಥ ಪರಿಸ್ಥಿತಿ ಇದೆ ಎಂದರೆ ರೋಗಕ್ಕಿಂತ ಮದ್ದೇ ಹೆಚ್ಚು ವಿನಾಶಕಾರಕ.
- ಪರಿಸ್ಥಿತಿಯನ್ನು ಹದಕ್ಕೆ ತರಲು ಸಾಧಾರಣ ಕಾನೂನಿನಲ್ಲಿ ಸಾಕಷ್ಟು ಅಧಿಕಾರವಿದೆ.
- ಒಂದು ವೇಳೆ ಅಸಾಧಾರಣ ಅಧಿಕಾರ ಬೇಕು ಎನಿಸಿದರೂ ತಾವೇ ರಚಿಸಿರುವ ಶಾಸನ ಸಭೆಯಿಂದ ಅದನ್ನು ಪಡೆಯಬೇಕಾಗಿತ್ತು.

ಇಬ್ಬರ ಭಾಷಣಗಳಲ್ಲೂ ಈ ಮಾತುಗಳನ್ನು ಹಾರಿಸಿದ್ದಾರೆ. ಸರಕಾರದ ಹೇಳಿಕೆಗಳಿಗೆ ಏನೂ ಧಾಟಿ ಇರುವದಿಲ್ಲ ಎಂಬುದು ಈ ರಾಷ್ಟ್ರಕ್ಕೆ ಬೇಕಾದಷ್ಟು ಅನುಭವ ಆಗಿದೆ. ಆದ್ದರಿಂದ ಅವರ ಮಾತನ್ನು ನಾವು ನಂಬಲಾರೆವು. ನಂಬುವುದಿಲ್ಲ ಎಂಬುದು ಅವರಿಗೂ ಗೊತ್ತು. ಕಾರಣ ಅವರ ಹೇಳಿಕೆಗಳು ಬುದ್ಧಿಪೂರ್ವಕವಾಗಿ ಹೇಳಿದ ಸುಳ್ಳು ಎಂದಲ್ಲ . ಆದರೆ ಅವರ ಹೇಳಿಕೆಗಳಿಗೆ ಅಧಾರವಾದ ಸುದ್ದಿಗಳು ವಿರೂಪಗೊಂಡು ಬಂದಿರುತ್ತವೆ ಎಂದು ಗೊತ್ತಾಗಿದೆ. ಹೀಗಾಗಿ ಅವರು ಕೊಟ್ಟ ಭರವಸೆ ಜನರನ್ನು ಅಣಕಿಸಿದ ಹಾಗೆ, ಆ ಭಾಷಣಗಳು. ನೀವು ಬೇಕಾದದ್ದನ್ನು ಮಾಡಿ ಎಂದು ನಮಗೆ ಸವಾಲು ಹಾಕಿದಂತಿವೆ. ಇದರಿಂದ ನಾವು ರೇಗಲೂ ಬೇಕಾಗಿಲ್ಲ ಅಸಹನೆ ತೋರಲೂ ಬೇಕಾಗಿಲ್ಲ. ಈ ದಬ್ಬಾಳಿಕೆಯಿಂದ ನಾವು ಕುಗ್ಗದಿದ್ದರೆ, ನಮ್ಮ ಗುರಿಯಿಂದ ನಾವು ವಿಮುಖರಾಗದಿದ್ದರೆ, ಸ್ವರಾಜ್ಯಪ್ರಾಪ್ತಿ ಬೇಗ ಆದೀತು. ದಬ್ಬಾಳಿಕೆಯು ನಮ್ಮ ಶಕ್ತಿಯನ್ನು ಒರೆಗೆ ಹಚ್ಚುತ್ತದೆ. ಸಂಕಟಸಮಯದಲ್ಲಿ ಅದು ಜನರ ತ್ಯಾಗಶಕ್ತಿ ಮತ್ತು ಧೈರ್ಯಗಳನ್ನು ಜಾಗ್ರತಗೊಳಿಸುತ್ತದೆ. ಬಂಗಾರವನ್ನು ಬೆಂಕಿಯಲ್ಲಿ ಪುಟವಿಟ್ಟರೆ ಏನು ಆಗುತ್ತದೆಯೋ ನಿಜವಾದ ಮನುಷ್ಯನಿಗೆ ರಾಷ್ಟ್ರಕ್ಕೆ ದಬ್ಬಾಳಿಕೆ– ದಮನದಿಂದಲೂ ಅದೇ ಆಗುತ್ತದೆ. 1921ರಲ್ಲಿ ದಬ್ಬಾಳಿಕೆಗೆ ಉತ್ತರವಾಗಿ ಸವಿನಯ ಕಾಯಿದೆ ಭಂಗವನ್ನು

ಪ್ರಾರಂಭಿಸಿ, ಸರಕಾರವು ಏನು ಮಾಡಿದರೂ ಮಾಡಲಿ ಎಂದು ಆಹ್ವಾನಿಸಿದೆವು. ಇವತ್ತು ನಾವು ದೀನರಾಗಿದ್ದೇವೆ. ಸವಿನಯ ಶಾಸನ ಭಂಗಕ್ಕೆ ನಾವಿನ್ನೂ ಸಿದ್ಧರಾಗಿಲ್ಲ. ಅದಕ್ಕೆ ನಾವು ಸಿದ್ಧತೆ ಮಾಡಿಕೊಳ್ಳಬೇಕು. ಅದರ ಸಿದ್ಧತೆ ಮಾಡಿಕೊಳ್ಳುವುದು ಎಂದರೆ ಶಿಸ್ತು ಹಾಸುವ, ಅಹಿಂಸಾತ್ಮಕ ಪ್ರತಿಭಟನಾ ಶಕ್ತಿ ಇವೆಲ್ಲ ಅನಿವಾರ್ಯ. ಎಲ್ಲಕ್ಕಿಂತ ಮಿಗಿಲಾಗಿ, ನಮಗೆ ತಿಳಿದ ದೈವಕೃತ ನಿಯಮ ಹಾಗೂ ಅದಕ್ಕೆ ಅನುಕೂಲವಾದ ಮಾನವ ರಚಿತ ನಿಯಮಗಳನ್ನು ಕಟ್ಟುನಿಟ್ಟಾಗಿ ನಿಷ್ಠೆಯಿಂದ ಪಾಲಿಸುವುದು ಅತ್ಯಗತ್ಯ. ಆದರೆ ದುರ್ದೈವದಿಂದ ಈ ಕೆಲಸಕ್ಕೆ ಬೇಕಾದಷ್ಟು ಶಿಸ್ತಾಗಲೀ ಸಂಯಮವಾಗಲೀ ನಮ್ಮಲ್ಲಿಲ್ಲ. ನಾವು ಹಿಂಸಾಮಯರು ಆಗಿದ್ದೇವೆ. ಇಲ್ಲವೆ ನಮ್ಮ ಅಹಿಂಸೆಯು ಪ್ರತಿಭಟನಾ ಶಕ್ತಿರಹಿತವಾದದ್ದಾಗಿದೆ. ನಮ್ಮಲ್ಲಿ ಸಾಕಷ್ಟು ಸಾಮರಸ್ಯವಿಲ್ಲ. ದೈವನಿರ್ಮಿತವೋ ಅಥವಾ ಮನುಷ್ಯರಚಿತವೋ, ಅಂತೂ ನಾವು ಪಾಲಿಸುವ ಕಾನೂನು ಬಲಾತ್ಕಾರದ್ದು. ಹಿಂದೂ ಮುಸಲ್ಮಾನರ ನಡುವೆ ದಿನವೂ ಶಾಸನಗಳನ್ನು ಮುರಿಯುತ್ತಲಿದ್ದೇವೆ. ಇವು ದೈವನಿರ್ಮಿತವಿರಲಿ ಮನುಷ್ಯರಚಿತವಿರಲಿ ಇವುಗಳನ್ನು ಉಲ್ಲಂಘಿಸುತ್ತಿದ್ದೇವೆ. ಇದು ಸವಿನಯ ಶಾಸನಭಂಗಕ್ಕೆ ಅನುಕೂಲವಾದ್ದಲ್ಲ.

ಗುಲಾಮ ಜನಾಂಗಕ್ಕೆ ಇರುವ ಒಂದೇ ಒಂದು ಅಜೇಯವು ಅಪ್ರತಿಹತವೂ ಆದ ಆಯುಧವೆಂದರೆ ಸವಿನಯ ಶಾಸನಭಂಗ . ಇದನ್ನು ಬಿಟ್ಟರೆ ಹಿಂಸೆಯೇ ಗತಿ. ವಾತಾವರಣ ಅದಕ್ಕೆ ಅನುಕೂಲ ಇದ್ದಂತೆ ; ಹಿಂದೂ ಮುಸ್ಲಿಂ ಜಗಳ ಹಿಂಸೆಗೆ ನಮ್ಮನ್ನು ಸಿದ್ಧಗೊಳಿಸುತ್ತಿದೆ. ಭಾರತದ ವಿಮೋಚನೆಯು ಹಿಂಸೆಯ ಮೂಲಕವೇ ಸಾಧ್ಯ ಎಂದು ನಂಬಿದವರು ನಮ್ಮಲ್ಲಿ ನಡೆಯುವ ಈ ಸ್ವಚ್ಛಂದ ಕಲಹಗಳನ್ನು ನೋಡಿ ಉಬ್ಬಿಹೋಗಬಹುದು. ಆದರೆ ಹಿಂಸೆಯನ್ನು ನಂಬಿದವರಿಗೆ ನಾನು ಹೀಗೆ ಹೇಳಬಯಸುತ್ತೇನೆ : ನೀವು ಹಿಂದೂಸ್ತಾನದ ಪ್ರಗತಿಗೆ ಅಡ್ಡಿ ಒಡ್ಡುತ್ತಿದ್ದೀರಿ. ಹೊಟ್ಟೆಗಿಲ್ಲದೇ ಸಾಯುತ್ತಿರುವ ಜನಕೋಟಿಯಲ್ಲಿ ನಿಮಗೆ ಸ್ನೇಹ ಕರುಣೆ ಇದ್ದರೆ, ಹಿಂಸೆಯಿಂದ ಅವರಿಗೆ ಏನೂ ಲಾಭವಿಲ್ಲ ಎಂದು ತಿಳಿದುಕೊಳ್ಳಿ, ಯಾರನ್ನು ನೀವು ಉಳಿಸಬಯಸುತ್ತೀರೋ ಅವರ ಕೈಯಲ್ಲಿ ಹೆಚ್ಚು ಶಸ್ತ್ರ ಇವೆ, ಅವರ ಸಂಘಟನೆಯೂ ನಿಮಗಿಂತ ಉತ್ತಮ. ನಿಮ್ಮ ಜೀವದ ಯೋಚನೆ ನಿಮಗೆ ಇಲ್ಲದಿರಬಹುದು. ಆದರೆ ಹುತಾತ್ಮರಾಗಲು ಅಪೇಕ್ಷೆ ಇಲ್ಲದ, ನಮ್ಮ ದೇಶಬಾಂಧವರ ಪ್ರಾಣಗಳನ್ನೂ ನೀವು ದುರ್ಲಕ್ಷ ಮಾಡಲಾರಿರಿ. ಜಾಲಿಯಾನ್‌ವಾಲಾಬಾಗಿನ ಕಗ್ಗೊಲೆಯಂಥ

ಕೃತ್ಯಗಳಲ್ಲಿ ಸರಕಾರಕ್ಕೆ ವಿಶ್ವಾಸವಿದೆ. ಆತ್ಮರಕ್ಷಣೆಗೆ ಅದೇ ನ್ಯಾಯವಾದ ಮಾರ್ಗ ಎಂದು ಈ ಸರಕಾರ ತಿಳಿಯುತ್ತದೆ. ನಿಮಗೂ ಇದು ಗೊತ್ತು. ಉಳಿದ ದೇಶಗಳ ಬಗ್ಗೆ ಏನೇ ಇರಲಿ, ಈ ದೇಶದಲ್ಲಿ ಮಾತ್ರ ಹಿಂಸೆಯ ಪಂಥವು ಬೆಳೆಯುವ ಸಂಭವವಿಲ್ಲ. ಭಾರತವೇ ಅಹಿಂಸೆಯನ್ನು ಪ್ರತಿಪಾದಿಸಬಲ್ಲದು, ಮತ್ತು ಅದೇ ಅಹಿಂಸೆಗೆ ಆಗರವಾಗಿರಬಲ್ಲದು. ಇದು ನಿರ್ವಿವಾದ. ನಿಮಗೆ ಹುತಾತ್ಮರಾಗುವುದೇ ಇದ್ದರೆ ಅಹಿಂಸೆಯ ಪ್ರತಿಪಾದನೆಗಾಗಿ ನಿಮ್ಮ ಜೀವಗಳನ್ನು ಏಕೆ ಮುಡುಪು ಇಡಬಾರದು? ಅಹಿಂಸಾತ್ಮಕ ಕ್ರಾಂತಿಕಾರಿಗಳಿಗೆ ನನ್ನ ಈ ಬಿನ್ನಹದಿಂದ ಏನೂ ಪ್ರಯೋಜನವಿಲ್ಲ. ಹಿಂಸಾತ್ಮಕ ಅರಾಜಕ ಸರಕಾರಕ್ಕೆ ಬಿನ್ನಯಿಸಿದರೆ ಎಷ್ಟು ಫಲವೋ, ಕ್ರಾಂತಿಕಾರರಿಗೆ ಬಿನ್ನಯಿಸಿದರೂ ಅಷ್ಟೇ ಫಲ. ಆದ್ದರಿಂದ ನಾವು ಇದಕ್ಕೆ ಪರಿಹಾರವನ್ನು ಕಂಡುಹಿಡಿದು, ಅವರ ಹಿಂಸೆಗಿಂತಲೂ ಹೆಚ್ಚು ಪರಿಣಾಮಕಾರಿಯಾದ ಶಕ್ತಿ ಇನ್ನೊಂದು ಇದೆ ಎಂದು ಹಿಂಸಾತ್ಮಕ ಕ್ರಾಂತಿಕಾರರಿಗೂ ಹಿಂಸಾತ್ಮಕ ಸರಕಾರಕ್ಕೂ ತೋರಿಸಿಕೊಡಬೇಕು.

ದಬ್ಬಾಳಿಕೆಯು ರೋಗದ ಲಕ್ಷಣ:

ಈ ದಬ್ಬಾಳಿಕೆಯು ಹಳೆಯ ರೋಗದ ಒಂದು ಹಳೆಯ ಲಕ್ಷಣ ಎನ್ನುತ್ತೇನೆ. ಇದರ ಸೂತ್ರವು ಐರೋಪ್ಯರ ಅಧಿಕಾರ–



ಏಶಿಯಾದವರ ಅಧೀನ. ಕೆಲವು ಸಲ ಇನ್ನೂ ರಹಸ್ಯವಾಗಿ ಬಿಳಿಯರು, ವಿರುದ್ಧ ಕಪ್ಪು ಜನರು ಎನ್ನುತ್ತಾರೆ. ಬಿಳಿಯ ಮನುಷ್ಯನು ಹೊರಿಸಿದ ನೊಗವನ್ನು , ಬಿಳಿಯ ಮನುಷ್ಯ ಹೊತ್ತ ಹೊರೆ ಎಂದು ತಪ್ಪೇ ಹೇಳಿದ ಕಿಪ್ಲಿಂಗ್. ಮಲಯಾದಲ್ಲಿ ಬಣ್ಣದ ಆತಂಕವು ತಾತ್ಕಾಲಿಕವೆಂದು ತಿಳಿದಿದ್ದರು. ಈಗಂತೂ ಅದು ಶಾಶ್ವತವೇ ಆಗಿದೆ. ಮಾರಿಷಸ್ ತೋಟಗಾರ ಅನಿರ್ಬಂಧವಾಗಿ ಭಾರತದ ಕೂಲಿಕಾರರನ್ನು ಪಡೆಯಲೇಬೇಕು. ಭಾರತೀಯರು ಮೊದಲಿನಿಂದಲೂ ಅಲ್ಲಿ ಇದ್ದರೂ ಕೀನ್ಯಾ ಐರೋಪ್ಯರು ಅವರ ಮೇಲೆ ಸವಾರಿ ಮಾಡುತ್ತಿದ್ದಾರೆ. ಹಿಂದಿನ ಉಪಕಾರವನ್ನು ಕಡೆಗಣಿಸಿ ಸಾಧ್ಯವಾದರೆ ಎಲ್ಲ ಭಾರತೀಯರನ್ನೂ ದಕ್ಷಿಣ ಆಫ್ರಿಕಾ ಕಡೆಗಣಿಸಲು ಸಿದ್ಧ. ಈ ಎಲ್ಲ ಸಂದರ್ಭಗಳಲ್ಲೂ ಭಾರತ ಸರಕಾರ ಮತ್ತು ಸಾಮ್ರಾಜ್ಯ ಸರಕಾರ ಕೈಲಾಗದವರೇನಲ್ಲ. ಅವರಿಗೆ ಮನಸ್ಸಿಲ್ಲ ಅಥವಾ ಭಾರತೀಯ ವಲಸೆಗಾರರ ಬಗ್ಗೆ ಎಷ್ಟು ಒತ್ತಾಯ ಮಾಡಬೇಕೋ ಅಷ್ಟು ಮಾಡುತ್ತಿಲ್ಲ. ಭಾರತ ಸರಕಾರ ಫಿಜಿ ದ್ವೀಪಗಳ ಬಗ್ಗೆ ತಾವೇ ನೇಮಿಸಿದ ಆಯೋಗದ ವರದಿಯನ್ನು ಪ್ರಕಟಿಸುವಷ್ಟು ಸೌಜನ್ಯ ಅದಕ್ಕೆ ಇಲ್ಲ. ಅಕಾಲಿಗಳ ದುರ್ದಮನೀಯ ವೀರತನವನ್ನು ಮೆಟ್ಟಿಹಾಕಲು ಮಾಡಿದ ಪ್ರಯತ್ನವೂ ಅದೇ ರೋಗದ ಕುರುಹು. ತಮ್ಮ ಪ್ರಾಣದಷ್ಟೆ ಪ್ರಿಯವಾದ ಉದ್ದೇಶಕ್ಕಾಗಿ ನೀರಿನ ಹಾಗೆ ತಮ್ಮ ರಕ್ತವನ್ನು ಅವರು ಸುರಿದಿದ್ದಾರೆ. ಅವರು ತಪ್ಪು ಮಾಡಿರಬಹುದು. ಮಾಡಿದ್ದರೆ ಅವರ ರಕ್ತ ಸುರಿಯಿತು ಅಷ್ಟೆ. ಬೇರೆ ಯಾರಿಗೂ ಅವರು ತೊಂದರೆ ಮಾಡಲಿಲ್ಲ. ಅವರ ಧೈರ್ಯಕ್ಕೆ, ಅವರ ಮೂಕ ಕಷ್ಟ ಸಹನೆಗೆ, ಅವರ ಆತ್ಮಾರ್ಪಣೆಗೆ ನಾನ್‌ಕಾನಾ ಸಾಹೇಬ,ಗುರು ಕಾ ಬಾಗ್ ಜೈತೋಗಳು ಸಾಕ್ಷಿಯಾಗಿ ನಿಂತಿವೆ. ಆದರೂ ಅಕಾಲಿಗಳನ್ನು ಮೆಟ್ಟಿ ಹಾಕುತ್ತೇನೆ ಎಂದು ಪಂಜಾಬ ಗವರ್ನರ್ ಪ್ರತಿಜ್ಞೆ ಮಾಡಿದ್ದಾನೆಂದು ಹೇಳಲಾಗಿದೆ.

ನಮಗಿಂತ ಈಜಿಪ್ಟಿನ ಹಣೆಯ ಬರಹ ಉತ್ತಮವಾಗಿಲ್ಲ. ಯಾರೋ ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ಕೊಂದನಂತೆ. ಇದು ಖಂಡಿತವಾಗಿಯೂ ಬಹು ತುಚ್ಛ ಹಾಗೂ ಬಲು ಹೀನಕಾರ್ಯ. ಆದರೆ ಇದಕ್ಕೆ ಕೊಡುತ್ತಿರುವ ಶಿಕ್ಷೆ ಅದಕ್ಕೂ ಹೀನ ಅಪರಾಧ,ಅಷ್ಟೇ ಅಲ್ಲ; ಅದು ಒಂದು

ಅಧಿವೇಶನದ ಉಪಸಂಹಾರ
(27-12-1924)

ಸೋದರರೆ,

ನಿಮಗೆ ನಾನು ಎಷ್ಟು ಕೃತಜ್ಞನಾಗಿದ್ದರೂ ಸಾಲದು. ನೀವು ನನಗೆ ತೋರಿಸಿದ್ದಕ್ಕಿಂತ ಹೆಚ್ಚು ಪ್ರೇಮವನ್ನು ಯಾವ ಅಧ್ಯಕ್ಷನೂ ನಿರೀಕ್ಷಿಸಲಾರ. ನೀವೇನು ಮಾಡಬೇಕು ಎಂದು

ನಾನು ಬಯಸಿದೆನೋ ಅದನ್ನೆಲ್ಲ ಮಾಡಿದಿರಿ. ಮೌನವಾಗಿರಬೇಕು ಎಂದಾಗ ಮೌನವಾಗಿದ್ದಿರಿ. ನಾನು ಮಾಡಿದ ಭಾಷಣವನ್ನೆಲ್ಲ ಕೇಳಿದಿರಿ. ಬರೆದುಕೊಂಡು ಬಂದು ಓದಬೇಕು ಎಂದಿರಿ.

ನಾನು ಕ್ಷಮಿಸಿ ಎಂದಾಗ ನೀವು ಅದಕ್ಕೆ ಒತ್ತಾಯ ಮಾಡಲಿಲ್ಲ. ಇಲ್ಲಿ ಹೇಗೆ ಸದ್ದುಗದ್ದಲ ಇಲ್ಲದೆ ನಿಮ್ಮ ಅಭಿಪ್ರಾಯವನ್ನು ಪ್ರಕಟಿಸಿದಿರೋ ವಿಷಯ ನಿಯಾಮಕ ಸಮಿತಿಯಲ್ಲೂ ಹಾಗೇ ಮಾಡಿದಿರಿ. ನಿಮ್ಮ ನಡುವೆ ಚರಕದ ಬಾಂಬು ಬಿದ್ದಾಗ ಗದ್ದಲವಾಗಬಹುದಾಗಿತ್ತು. ಏನೂ ಆಗಲಿಲ್ಲ. ವಿಷಯ ನಿಯಾಮಕ ಸಮಿತಿಯಲ್ಲೂ ನೀವು ಸಭ್ಯತೆಗೆ ಶೋಭಿಸುವಂತೆ ನಡೆದುಕೊಂಡಿರಿ. ನನ್ನ ಸೋದರರು ತೋರಿಸಿದ ಈ ದಯೆ ಯಾವುದೋ ನನ್ನ ಪೂರ್ವ ಜನ್ಮದ ಫಲ ಎಂದು ತಿಳಿದಿದ್ದೇನೆ, ನನ್ನ ಬಗ್ಗೆ ತೋರಿಸಿದ ಈ ಕರುಣೆಯನ್ನು ಭರತ ಭೂಮಿಯ ಬಗ್ಗೆಯೂ ತೋರಿಸಬೇಕು ಎನ್ನುತ್ತೇನೆ. ನಾನು ಬದುಕಿರುವುದು ಭಾರತಕ್ಕಾಗಿಯೇ .ಸಾಯಬೇಕೆನ್ನುವುದೂ ಭಾರತಕ್ಕಾಗಿಯೇ. ದೇವರ ಇಚ್ಛೆ ಇಲ್ಲದೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವದಿಲ್ಲ. ಆದರೆ ಮಗು ತಂದೆಯನ್ನು ತನಗೆ ಬೇಕಾದ್ದು ಕೇಳುವಂತೆ, ಪ್ರತಿಯೊಬ್ಬರಿಗೂ ದೇವರನ್ನು ಕೇಳಲು ಹಕ್ಕಿದೆ, ನಾನು ಕೇಳಿದ್ದನ್ನು ಅವನು ಕೊಟ್ಟೇ ಕೊಡುತ್ತಾನೆ ಎಂಬುದನ್ನು ನಾನು ಮನಗೊಂಡಿದ್ದೇನೆ, ದೇವರ ಇಷ್ಟಕ್ಕೆ ವಿರುದ್ಧವಾಗಿ ಏನೂ ನಡೆಯಲಾರದು.

ಆದ್ದರಿಂದ, ಸೋದರರೇ, ಭಾರತದ ಸೇವೆಗೆ ಟೊಂಕಕಟ್ಟಿ, ನೀವು ಮಾಡಿರುವ ಶಪಥವನ್ನು ಪಾಲಿಸಿರೆಂದು ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ನಾನು ಅಧ್ಯಕ್ಷತೆ ವಹಿಸಿದೆ. ನೀವೆಲ್ಲರೂ ಪ್ರೇಮವನ್ನು ಸುರಿದಿರಿ, ಪ್ರತಿಯೊಬ್ಬರೂ ನನ್ನನ್ನು ಹೊಗಳಬೇಕು ಎಂದು ಬಯಸುವುದು ಸ್ವಾಭಾವಿಕ, ಆದರೆ ಇದರಿಂದ ಏನೂ ಸಾಧನೆ ಆಗುವದಿಲ್ಲ. ಸಾಧನೆ ಆಗಬೇಕು ಎಂದರೆ ನೀವೆಲ್ಲರೂ ಮಾತು ಕೊಟ್ಟಂತೆ ನಡೆಯಬೇಕು. ಇವೆಲ್ಲ ಕಾರ್ಯಗಳೂ ನಿಮ್ಮ ಅಳವಿಗೆ ಮೀರಿದ್ದೆಂದು ನಾನು ನಂಬಲಾರೆ .ಮೂರನೆಯದು, ನಾಲ್ಕನೆಯದು ಅಥವಾ ಐದನೆಯದು ಯಾವ ಕಾರ್ಯವೂ ನಮ್ಮಿಂದ ಅಸಾಧ್ಯವಲ್ಲ.

ಅತ್ಯಾಚಾರ, ಮಾನವತೆಗೆ ಮಾಡಿದ ಅಪಚಾರ.ಒಬ್ಬ ಮಾಡಿದ ಅಪರಾಧಕ್ಕಾಗಿ ಇಡೀ ಜನಾಂಗವನ್ನೇ ನಿರ್ದಯೆಯಿಂದ ಶಿಕ್ಷಿಸಲಾಗುತ್ತಿದೆ . ಆ ಕೊಲೆಗೆ ಈಜಿಪ್ತಿನ ಜನರು ಸಹಾನುಭೂತಿ ತೋರಿಸಿರಲೂ ಬಹುದು . ಆದರೆ ಹಿಂಸೆಯನ್ನು ನಿಯಂತ್ರಿಸ ಬಲ್ಲ ಸಾಮರ್ಥ್ಯವುಳ್ಳ ಸರಕಾರದ ಈ ಭಯೋತ್ಪಾದಕ ಕೃತ್ಯವು ನ್ಯಾಯಸಮ್ಮತವಾದೀತೇ? ಆದ್ದರಿಂದ ಬಂಗಾಲದಲ್ಲಿ ನಡೆಯುವ ದೌರ್ಜನ್ಯ ಅಸಾಧಾರಣವೇನೂ ಅಲ್ಲ.ಕಾಲ ಕಾಲಕ್ಕೆ ಇದು ಹೊರಚಿಮ್ಮುತ್ತದೆ, ಅದು ಯಾವುದೋ ರೂಪದಲ್ಲಿ ಯಾವುದೋ ಪ್ರಾಂತದಲ್ಲಿ ಸ್ವತಂತ್ರವಾಗುವವರೆಗೆ ಇದು ಸಾಮಾನ್ಯವಾದದ್ದೆಂದು ನಾವು ತಿಳಿಯಬೇಕು.


ನನ್ನ ನಂಬಿಕೆ:

ನನ್ನ ವಿಶ್ವಾಸವನ್ನು ಹೇಳುತ್ತೇನೆ: ಕಾಂಗ್ರೆಸ್ಸನ್ನು ಭದ್ರವಾಗಿ ಇಡ ಬಯಸುವ ಕಾಂಗ್ರೆಸ್ಸಿಗನಂತೆ ಅಸಹಕಾರವನ್ನು ನಿಲ್ಲಿಸಲು ಸಲಹೆ ಕೊಡುತ್ತೇನೆ, ನಮ್ಮ ದೇಶ ಅದಕ್ಕಿನ್ನೂ ಸಿದ್ಧವಾಗಿಲ್ಲ ಎಂದು. ಆದರೆ ಈಗಿನ ಈ ಸರಕಾರ ಈಗಿರುವ ಹಾಗೆಯೇ ಇರುವ ತನಕ ವೈಯಕ್ತಿಕವಾಗಿ ನಾನು ಅಸಹಕಾರವನ್ನು ಕೈಬಿಡಲಾರೆ, ಕೈಬಿಡುವುದೂ ಇಲ್ಲ. ನನ್ನ ಮಟ್ಟಿಗೆ ಇದು ಕೇವಲ ಒಂದು ಧೋರಣೆ ಅಷ್ಟೇ ಅಲ್ಲ, ಅದೊಂದು ಶ್ರದ್ಧಾಪೂರ್ಣ ಉದ್ದೇಶ. ಅಸಹಕಾರ, ಸವಿನಯ ಶಾಸನಭಂಗ ಇವು ಸತ್ಯಾಗಹದ ವೃತ್ತಕ್ಕೆ ಬೇರೆ ಬೇರೆ ಶಾಖೆಗಳು ಮಾತ್ರ. ಸತ್ಯಾಗ್ರಹವೆಂದರೆ ಸತ್ಯಶೋಧನೆ ; ದೇವರು ಸತ್ಯ. ಆ ಸತ್ಯವನ್ನು ನನಗೆ ತಿಳಿಸಿಕೊಡುವ ಬೆಳಕು ಅಹಿಂಸೆ. ಸ್ವರಾಜ್ಯವು ನನಗೆ ಆ ಸತ್ಯದ ಒಂದು ಅಂಶ. ದಕ್ಷಿಣ ಆಫ್ರಿಕೆಯಲ್ಲಿ, ಖೇಡಾದಲ್ಲಿ, ಚಂಪಾರಣ್ಯದಲ್ಲಿ ಇನ್ನೂ ಹಲವು ಪ್ರಸಂಗಗಳಲ್ಲಿ ಸತ್ಯಾಗ್ರಹವು ನನ್ನನ್ನು ಕೈಬಿಟ್ಟಿಲ್ಲ. ಅದರಲ್ಲಿ ಹಿಂಸೆಗೆ ಅಥವಾ ದ್ವೇಷಕ್ಕೆ ಸ್ವಲ್ಪವೂ ಸ್ಥಾನವಿಲ್ಲ. ಆದ್ದರಿಂದ ನಾನು ಇಂಗ್ಲಿಷ್ ಜನರನ್ನು ದ್ವೇಷಿಸಲಾರೆ, ದ್ವೇಷಿಸುವುದೂ ಇಲ್ಲ. ಹೀಗೆಂದರೆ ಅವರ ನೊಗಕ್ಕೆ ಹೆಗಲನ್ನು ಕೊಡುತ್ತೇನೆ" ಎಂದು ಅಲ್ಲ.


ಭಾರತದ ಮೇಲೆ ಬ್ರಿಟಿಷ್ ರೀತಿ ನೀತಿಗಳನ್ನೂ ಬ್ರಿಟಿಶ್ ಸಂಸ್ಥೆಗಳನ್ನೂ ಹೇರುವ ಈ ಅಧಾರ್ಮಿಕ ಪ್ರಯತ್ನಗಳನ್ನು ನನ್ನ ಪ್ರಾಣ ಪಣವಿಟ್ಟು ಕಡೆಯವರೆಗೂ ಹೋರಾಡುತ್ತೇನೆ, ಆದರೆ ನಾನು ಜತೆಯಾಗಿ ಆ ಪ್ರಯತ್ನವನ್ನು ಎದುರಿಸುತ್ತೇನೆ, ಇಂಗ್ಲಿಷ್ ಪ್ರಭುಗಳೊಡನೆ ಅಹಿಂಸಾತ್ಮಕವಾಗಿ ಯುದ್ಧ ಮಾಡಬಲ್ಲ ಸಾಮರ್ಥ್ಯ ಭಾರತಕ್ಕೆ ಇದೆ ಎನ್ನುವುದು ನನ್ನ ವಿಶ್ವಾಸ , ಈ ಪ್ರಯೋಗ ವಿಫಲವಾಗಿಲ್ಲ,ಆದರೆ ಎಷ್ಟು ಸಫಲವಾಗಬೇಕೆಂದು ನಾವು ಬಯಸಿದ್ದೆವೋ ಅಷ್ಟು ಸಫಲವಾಗಿಲ್ಲ. ಆದರೆ ನನಗೆ ನಿರಾಶೆ ಆಗಿಲ್ಲ. ಅದಕ್ಕೆ ಬದಲು ಶೀಘ್ರದಲ್ಲಿಯೇ ಭಾರತವು ತನ್ನ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಸತ್ಯಾಗ್ರಹದ ಮೂಲಕವೇ ಪಡೆದೀತೆಂದು ನನ್ನ ನಂಬಿಕೆ. ತಾತ್ಕಾಲಿಕವಾಗಿ ಸತ್ಯಾಗ್ರಹವನ್ನು ನಿಲ್ಲಿಸಬೇಕೆಂಬ ಸೂಚನೆ ಕೂಡ ಆ ಪ್ರಯೋಗದ ಒಂದು ಅಂಗವೇ ಆಗಿದೆ. ನಾನು ಹಾಕಿಕೊಟ್ಟ ಕಾರ್ಯಕ್ರಮವನ್ನು ಪೂರೈಸಿದ್ದೇ ಆದರೆ ಅಸಹಕಾರವನ್ನು ಮತ್ತೆ ಪ್ರಾರಂಭಿಸುವ ಅಗತ್ಯವೇ ಬೇಕಾಗುವದಿಲ್ಲ. ಒಂದು ವೇಳೆ ಕಾರ್ಯಕ್ರಮ ನಡೆಯದೇ

ಇದ್ದರೆ ಕಾಂಗೆಸ್ಸಿನ ಮೂಲಕವೋ ಅಥವಾ ಹೊರಗಡೆಯೋ ಯಾವುದೂ ಒಂದು ರೂಪದಲ್ಲಿ ಅಹಿಂಸಾತ್ಮಕ ಅಸಹಕಾರವನ್ನು ಪುನಃ ಪ್ರಾರಂಭಿಸಲೇಬೇಕಾಗುತ್ತದೆ. ಸತ್ಯಾಗ್ರಹಕ್ಕೆ ಎಂದೂ ಸೋಲಿಲ್ಲ ಎಂದು ಪದೇ ಪದೇ ಹೇಳಿದ್ದೇನೆ. ಸತ್ಯವನ್ನು ಎತ್ತಿ ಹಿಡಿಯಲು ಒಬ್ಬನೇ ಒಬ್ಬ ಪೂರ್ಣ ಸತ್ಯಾಗಹಿ ಆದರೂ ಸಾಕು. ಅಂಥ ಪೂರ್ಣ ಸತ್ಯಾಗ್ರಹಿಗಳಾಗಲು ನಾವೆಲ್ಲರೂ ಪ್ರಯತ್ನಿಸೋಣ. ಇದನ್ನು ಸಾಧಿಸಲು ನಮ್ಮಲ್ಲಿ ಕೆಳಗಿನವನಿಗೂ ಸಾಧ್ಯವಲ್ಲದ ವಿಶೇಷ ನಮ್ಮಲ್ಲಿ ಪ್ರತಿಯೊಬ್ಬರ ಒಳಗೂ ಅಡಗಿದೆ. ಸ್ವರಾಜ್ಯದ ಹಾಗೆ ಅದು ಅದು ನಮ್ಮ ಜನ್ಮಸಿದ್ಧ ಹಕ್ಕು. ಅದನ್ನು ಅರಿತುಕೊಳ್ಳೋಣ. ಏಕೆಂದರೆ ಸತ್ಯಾಗ್ರಹವು ಒಳಗಿರುವ ಆತ್ಮದ ಲಕ್ಷಣ. ■

1924ರಲ್ಲಿ ನಡೆದ ಬೆಳಗಾವಿ ಅಧಿವೇಶನದ ಚಿತ್ರಾವಳಿ



ಮಹಾತ್ಮಜೀ ಅವರು 39 ನೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಬೆಳಗಾವಿ, 1924 ರ ಅಧ್ಯಕ್ಷರು



ಗಂಗಾಧರರಾವ್ ದೇಶಪಾಂಡೆ, ಸ್ವಾಗತ ಸಮಿತಿಯ ಅಧ್ಯಕ್ಷರು, 39ನೇ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಬೆಳಗಾವಿ, 1924.
ಕೆಂಭಾವಿ, ಪ್ರಧಾನ ಕಾರ್ಯದರ್ಶಿ ಎಂ.ಆರ್, ಬಿ.ಬಿ.ಪೋತದಾರ, ಪ್ರಧಾನ ಕಾರ್ಯದರ್ಶಿ
ಎಸ್.ಎಲ್. ಸೋಮನ್, ಪ್ರಧಾನ ಕಾರ್ಯದರ್ಶಿ, ಎಚ್.ಎಸ್. ಕೌಜಲಗಿ, ಸ್ವದೇಶಿ ವಸ್ತುಪ್ರದರ್ಶನ ಕಾರ್ಯದರ್ಶಿ



1924ರ ಕಾಂಗ್ರೆಸ್ ಅಧಿವೇಶನ ಸ್ಥಳ, ವಿಜಯನಗರ




ವಿದ್ಯಾರಣ್ಯ ರಸ್ತೆಯಿಂದ ಲೋಕಮಾನ್ಯ ವೃತ್ತ




ಗೋಪುರ



ಅಧ್ಯಕ್ಷರು ಮತ್ತು ನಾಯಕರ ಮೆರವಣಿಗೆ




ಅಧ್ಯಕ್ಷ ಮಹಾತ್ಮ ಗಾಂಧಿ ಮತ್ತು ಶೌಕತ್ ಅಲಿ, ಮಹಮದ್ ಅಲಿ, ಮದನ್ ಮೋಹನ್ ಮಾಳವೀಯ, ಸರೋಜಿನಿ ನಾಯ್ಡು, ಗಂಗಾಧರರಾವ್ ದೇಶಪಾಂಡೆ ಮತ್ತು ಇತರ ನಾಯಕರ ಮೆರವಣಿಗೆ ಆರಂಭದ ದಿನ



ಕಾಂಗ್ರೆಸ್ ಪೆಂಡಾಲ್ ಮತ್ತು ಉದ್ಯಾನದ ಮುಂಭಾಗದ ನೋಟ



ಮಹಾತ್ಮಜೀ ಅವರು ಅಧ್ಯಕ್ಷೀಯ ಭಾಷಣ ಮಾಡಿದರು



ರಾಷ್ಟ್ರಧ್ವಜ




ಮಹಾತ್ಮಾ ಗಾಂಧಿಯವರು ಬೇಗಂ ಮಹಮ್ಮದ್ ಅಲಿ ಮತ್ತು ಇತರರೊಂದಿಗೆ ಹೋಗುತ್ತಿದ್ದರು
ಕಾಂಗ್ರೆಸ್ ಪಂಡಲ್, ಬೆಳಗಾವಿ, ಡಿಸೆಂಬರ್ 1924



ಮಹಾತ್ಮಾ ಗಾಂಧಿಯವರು ಬೇಗಂ ಮಹಮ್ಮದ್ ಅಲಿ ಮತ್ತು ಇತರರೊಂದಿಗೆ ಹೋಗುತ್ತಿದ್ದರು
ಕಾಂಗ್ರೆಸ್ ಪಂಡಲ್, ಬೆಳಗಾವಿ, ಡಿಸೆಂಬರ್ 1924





ಮಹಾತ್ಮಾ ಗಾಂಧಿ ಮತ್ತು ಸರೋಜಿನಿ ನಾಯ್ಡು ಕಾಂಗ್ರೆಸ್ ಅಧ್ಯಕ್ಷೀಯ ಸ್ಥಾನಕ್ಕೆ ಸೇರಿದರು
ಇತರ ನಾಯಕರೊಂದಿಗೆ ಮೆರವಣಿಗೆ, ಬೆಳಗಾವಿ, ಡಿಸೆಂಬರ್ 1924



ಸ್ವಯಂಸೇವಕ ಶಿಬಿರದಲ್ಲಿ ಮೌಲಾನಾ ಮಹಮ್ಮದ್ ಅಲಿ ಸಾಹೇಬ್ ಮತ್ತು ಇತರ ನಾಯಕರೊಂದಿಗೆ ಮಹಾತ್ಮಜೀ



ಮಹಾತ್ಮ ಗಾಂಧಿಯವರು ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡುತ್ತಾ, ಹಿನ್ನೆಲೆಯಲ್ಲಿ ಶುಖತ್ ಅಲಿ, ಮಹಮ್ಮದ್ ಅಲಿ, ಪಂಡಿತ್ ಜವಾಹರಲಾಲ್ ನೆಹರು ಮತ್ತು ಮೌಲಾನಾ ಅಬುಲ್ ಕಲಾಂ ಆಜಾದ್, ಬೆಳಗಾವಿ ಕಾಂಗ್ರೆಸ್, ಡಿಸೆಂಬರ್ 1924



ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಧ್ವಜಾರೋಹಣ ಮಾಡುವಾಗ ಮಹಾತ್ಮ ಗಾಂಧಿ, ಡಿಸೆಂಬರ್ 1924



ಸ್ವದೇಶಿ ಪ್ರದರ್ಶನ ಗೇಟ್



ಮಹಾತ್ಮ ಗಾಂಧಿಯವರು ಕಾಂಗ್ರೆಸ್ ಸ್ವಯಂಸೇವಕರನ್ನು ಅಲಂಕರಿಸುತ್ತಿದ್ದಾರೆ, ಬೆಳಗಾವಿ, ಡಿಸೆಂಬರ್ 1924

ಬಾಪೂ ಸ್ಮರಣೆ..

ತಿಳಿ ನೀಲದಲ್ಲಿ ತಾ ಲೀನವಾಗಿ ಅವ ಹೋದ
ದೂರ ದೂರ
ಬೆಳಗಿಹುದು ಇಲ್ಲಿ ಅವ ಬಿಟ್ಟ ಬೆಳಕು :
ಇನ್ನೊಮ್ಮೆ ಏಕೆ ಬಾರ?

ಅಂದು ಸಂಜೆ ಪ್ರಾರ್ಥನೆಗೆ ದೇವಮಂದಿರದ ದಾರಿಯಲ್ಲಿ
ಆಚೆ ಈಚೆ ಮೊಮ್ಮಕ್ಕಳಿಬ್ಬರಲಿ ಮೈಯ ಭಾರ ಚೆಲ್ಲಿ
ಜಗದ ಕರುಣೆ ನಡೆವಂತೆ ನಡೆದು ಮಂದಿರದ ಪೀಠವೇರಿ
ನಿಂದನಲ್ಲೊ! ಜಡವುಳಿದು ಜೀವವೊಂದಾಯ್ತು ದೇವನಲ್ಲಿ.

ಎಸೆದ ಗುಂಡಿಗಾ ಕುಸಿದ ದೇಹದಲಿ ವಿಮಲ ರಕ್ತ ಚೆಲ್ಲಿ
ಮೀಯಿಸಿತ್ತು ಈ ಜಗದ ಮನವನೇ ಶೋಕ ಜಲಧಿಯಲ್ಲಿ
ಮುಗಿದ ಕೈಯು ಮುಗಿದಂತೆ ಇತ್ತು :
ನೆಲಸಿತ್ತು ಕ್ಷಮೆಯು ಮೊಗದಿ
ಎದೆಯೊಳೆಂಥ ತಿಳಿಭಾವವಿತ್ತು !
ಅದನಾವ ಬಲ್ಲ ಜಗದಿ ?

ಹೋದ ಹೋದನವ ತ್ಯಾಗಜೀವನದ ತುತ್ತ ತುದಿಯನೇರಿ
ಏರಿ ಏರಿದೊಲು ಅಂತರಂಗದೈಸಿರಿಯ ಜಗಕೆ ತೂರಿ
ಸತ್ಯ ಪ್ರೇಮಗಳ ಸತ್ವವನ್ನೆ ಕಣ್ಣೆದುರು ಎತ್ತಿ ತೋರಿ
ಬೇರೆ ಲೋಕದನುಭಾವ ಬೀರಿ ಹೋದನಾವ ದಾರಿ ?

ಎನಿತು ಸರಳ ನುಡಿ,
ಎಷ್ಟು ಸಹಜ ನಡೆ ಮನದ ಮಹತಿಯೇನು !
ಅವನ ಎದೆಯ ಉನ್ನತಿಯ ನಿಲುಕುವುದು
ಯಾವ ಗಿರಿಯ ಸಾನು ?
ಇಹುದೆ ಅವನ ಕರುಣೆಯನು ಧರೆಗೆ ಕರೆವಂಥ ಕಾಮಧೇನು ?
ಅವನು ಗೈದ ಲೀಲೆಯಲಿ ಲಯಸಿತೆಂಥವರ "ನಾನು–ನಾನು ".



ತಿಳಿದಿಹುದು ಚಿತ್ತ, ಹರಿದಿಹುದು ನೋಟ ಮೇಲಕ್ಕೆ ಬಾನಿನೆಡೆಗೆ
ಆ ಜಾಡ ಹಿಡಿದು ಇಳಿದಂತೆ ಇಹುದು ಬೆಳಕೊಂದು ಕೆಳಗೆ ಇಳೆಗೆ
" ಏನಷ್ಟು ಭ್ರಾಂತಿ? ಕಾಣದೆಯೆ ಜ್ಯೋತಿ ? " ಎಂಬರುಹು ಮೂಡಲೊಡನೆ
ಬೆಳಕ ನಂಬಿ ನಿಂದಿಹನು ಧೀರ ಎದೆ ತೆರೆದು
ನಾಡ ಕರೆಗೆ.

ಸಾಹಿತ್ಯ : ಡಿ. ಎಸ್. ಕರ್ಕಿ.
(ಹಚ್ಚೇವು ಕನ್ನಡದ ದೀಪದಂತಹ ಗೀತೆಯನ್ನು ಬರೆದ ಕರ್ಕಿಯವರು ಮಹಾತ್ಮ ಗಾಂಧೀಜಿಯವರು, ಹಂತಕನ ಗುಂಡಿನೇಟಿನಿಂದ ಈ ಲೋಕದಿಂದ ವಿರಮಿಸಿದ ಸಂದರ್ಭದಲ್ಲಿ ಮೂಡಿಸಿದ ಭಕ್ತಿಭಾವವಿದು).

(ಜನವರಿ 30, 2025 ಸರ್ವೋದಯ ದಿನಾಚರಣೆ)



ಬಾಪೂ ಮತ್ತು ಬರ್ಕ್ ವೈಟ್..

' ಆಟೋಗ್ರಾಫ್ ಸಂಗ್ರಹಿಸುವ ಗೀಳು ನನಗಿರಲಿಲ್ಲ, ಆದರೂ ಮಹಾತ್ಮ ಗಾಂಧಿಯವರ ವಿಷಯಕ್ಕೆ ಬಂದಾಗ ಅದೇ ಬೇರೆ. ನನಗೆ ಗಾಂಧಿಯವರ ಹಸ್ತಾಕ್ಷರ ಬೇಕಿತ್ತು. ಅದೂ ನಾನು ಅಷ್ಟೆಲ್ಲ ಕಷ್ಟಪಟ್ಟು ತೆಗೆದಿದ್ದ ಅವರ ಫೋಟೋಗ್ರಾಫ್ ಗಳ ಮೇಲೆಯೇ. ಗಾಂಧಿಯವರ ಆಟೋಗ್ರಾಫ್ ಕೇಳುವ ಹೊತ್ತಿಗೆ ನಾನು ಭಾರತದಿಂದ ವಾಪಸ್ಸು ಹೋಗಲು ಇನ್ನೂ ಕೇವಲ ಒಂದೇ ಒಂದು ದಿನ ಮಾತ್ರ ಬಾಕಿ ಉಳಿದಿತ್ತು.

ಗಾಂಧಿಯವರ ಮುಂದೆ ಅವರ ಫೋಟೋಗಳನ್ನಿಟ್ಟು ಹಸ್ತಾಕ್ಷರವನ್ನು ಕೇಳಿದೆ. ಪ್ರತಿಯೊಂದಕ್ಕೂ 5 ರೂಪಾಯಿ ಕೊಡಬೇಕಾಗುತ್ತದೆ ಎಂದರು ಗಾಂಧೀಜಿ.

ನಾನು ಮರು ಮಾತನಾಡದೇ ಪರ್ಸ್ ನಿಂದ 10 ರೂಪಾಯಿಯ ನೋಟು ತೆಗೆದು ಅವರ ಚರಕದ ಬಳಿ ಇಟ್ಟೆ, ಗಾಂಧಿಯವರ ಕಡ್ಡಿಯಂತಹ ಬೆರಳುಗಳಿಂದ ಹಿಂದಿ ಮತ್ತು ಇಂಗ್ಲೀಷ್ ಗಳೆರೆಡರಲ್ಲೂ ಒ.ಐ.ಉಚಿಟಿಜಿಜ ಎಂದು ಸಹಿ ಮಾಡಿದರು ಮತ್ತು ಜನವರಿ 29, 1948 ಎಂದು ದಿನಾಂಕವನ್ನು ಬರೆದರು.

ಆಮೇಲೆ ಮುಖವನ್ನೆತ್ತಿ ನನ್ನ ಕಡೆಗೆ ನೋಡುತ್ತಾ ' Do You Know What Is For The Ten Rupees ' ಎಂದರು. ಗಾಂಧಿಯವರ ಇಂಗ್ಲೀಷ್ ಬಹು ಸುಂದರ, ಅವರ ಪದ ಸಂಪತ್ತು ವೈವಿಧ್ಯಮಯ. ಅದರಲ್ಲಿ ತಮಗೆ ವಿಶಿಷ್ಟವಾದ ಕೆಲವೊಂದು ವ್ಯತ್ಯಾಸಗಳನ್ನು ಮಾಡುತ್ತಿದ್ದರು. ಗಾಂಧಿಯವರ ಪ್ರಶ್ನೆಗೆ ನಾನು ಉತ್ತರ ಊಹಿಸಿ ಹೇಳಿದೆ ' ಅದು ಹರಿಜನ ನಿಧಿಗೆ 'ಎಂದು.

ಸೌಜನ್ಯ : 'ಬರ್ಕ್ ವೈಟ್ ಕಂಡ ಭಾರತ' ಪುಸ್ತಕ.
ಅನುವಾದಕರು : ಡಾ.ಕೆ.ಆರ್.ಸಂಧ್ಯಾರೆಡ್ಡಿ.

ಲೇಖಕರ ಪರಿಚಯ :

ಮಾರ್ಗರೇಟ್ ಬರ್ಕ್ ವೈಟ್, ಅಮೆರಿಕದ ಟೈಮ್ಸ್ & ಲೈಫ್ ನಿಯತಕಾಲಿಕ ಪತ್ರಿಕೆಯ ಛಾಯಾಚಿತ್ರ ವರದಿಗಾರರು. ಭಾರತ ದೇಶಕ್ಕೆ ಸ್ವಾತಂತ್ರ್ಯ ಘೋಷಣೆಯಾಗುವ ಕೆಲವು ತಿಂಗಳು ಮುಂಚೆ 1946ನೇ ಇಸವಿಯಲ್ಲಿ ಭಾರತಕ್ಕೆಆಗಮಿಸಿ ಆಗ ತಾನು ಕಂಡ ಭಾರತ ಹೇಗಿತ್ತು ? ಆವತ್ತಿನ ಪರಿಸ್ಥಿತಿ ಮತ್ತು ಸಂದರ್ಭಗಳ ಬಗ್ಗೆ ತಾನು ತೆಗೆದ ಫೋಟೋಗಳ ಸಚಿತ್ರ ವರದಿಯನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ . ಮಹೋನ್ನತವಾದ ಈ ಕೃತಿಯ ಮೂಲ ' ಹಾಫ್ ವೇ ಟು ಫ್ರೀಡಂ ' ಇಂಗ್ಲಿಷ್ ಪುಸ್ತಕ..



ಗಾಂಧೀಜಿಗೆ ಗೊತ್ತಿತ್ತು. ಆತ್ಮವನ್ನು ಕಳೆದುಕೊಂಡ ರಾಜಕಾರಣಿ ತನ್ನನ್ನು ರಕ್ಷಿಸಲು ಪೊಲೀಸು ಪಡೆಯನ್ನು ಹೊಂದಿರಬೇಕಾಗುತ್ತದೆ. ಬಾಪೂಜಿ ಎಂದೂ ಅಂಗರಕ್ಷಕರನ್ನು ಪಡೆಯಲಿಲ್ಲ. ಅಂಗರಕ್ಷಕರು ಕೇವಲ ದೇಹವನ್ನು ಮಾತ್ರ ರಕ್ಷಿಸುವುದಿಲ್ಲ. ನಿಮ್ಮ ಆತ್ಮವನ್ನು ಸೆರೆಮನೆಯಲ್ಲಿಟ್ಟು ನಾಶಗೊಳಿಸುತ್ತಾರೆ ಎಂಬುದು ಬಾಪೂಜಿಗೆ ಗೊತ್ತಿತ್ತು.

ಗಾಂಧೀಜಿಯ ಇಡೀ ಬದುಕು ಮನುಷ್ಯರನ್ನು ಬೆಸೆಯಲು, ಅವರನ್ನು ತಿಳಿಯಲು ಮೀಸಲಾಗಿತ್ತು. ಇದು ಕೇವಲ ಪ್ರಶಂಸೆಯಲ್ಲ.

ಈ ಬಾಪೂವನ್ನು ಒಮ್ಮೆ ನೋಡಿದ, ಮಾತಾಡಿಸಿದ, ಅವರೊಂದಿಗೆ ವ್ಯವಹರಿಸಿದ ವ್ಯಕ್ತಿ ಮಾನವೀಯ, ಪ್ರೀತಿಪಾತ್ರ, ಪ್ರಾಮಾಣಿಕ ಮನುಷ್ಯನಾಗುತ್ತಿದ್ದ.

ಈ ನಾಡಿನ ಉದ್ದಗಲಕ್ಕೂ ಬಾಪೂಜಿಯ ಅಂಶಗಳು ಹರಡಿದ್ದನ್ನು ನೀವು ಗಮನಿಸಿರಬಹುದು. ಈತನ ಶಿಷ್ಯರು, ಈತನ ಬಗ್ಗೆ ಅರಿತವರು ಎಂದೂ ದ್ವೀಪಗಳಾಗುತ್ತಿರಲಿಲ್ಲ, ಭ್ರಷ್ಟರಾಗುತ್ತಿರಲಿಲ್ಲ, ಸ್ವಾರ್ಥಿಗಳಾಗುತ್ತಿರಲಿಲ್ಲ.

~ಪಿ ಲಂಕೇಶ್, 24 ಮಾರ್ಚ್ 1985



ಮಂಡ್ಯ ಜಿಲ್ಲೆಯ ಕೆ ಆರ್ ಪೇಟೆ ತಾಲ್ಲೂಕಿನ ಪೂವನಹಳ್ಳಿ ಗ್ರಾಮದಲ್ಲಿ ವಿಶ್ವ ಪರಂಪರ ಪರಿಸರ ಪಾಠಶಾಲೆಯ ಬಳಗದವರು ಇಂದು ಪರಿಸರ ಪಾಠ ಶಾಲೆಯ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದರು. ವಿಶೇಷವಾಗಿ ಪ್ಲಾಸ್ಟಿಕ್ ಬಳಸದೇ ದೇಸೀ ಶೈಲಿಯ ಆಟ , ಊಟ, ಮತ್ತು ಪಾಠ ಪ್ರವಚನಗಳನ್ನು ಸಂಪನ್ಮೂಲ ವ್ಯಕ್ತಿಗಳ ಮತ್ತು ವಿಷಯ ತಜ್ಞರುಗಳ ಮೂಲಕ ಚಿಂತನ ಮಂಥನ ನಡೆಸಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪರವಾಗಿ ಕಾರ್ಯಾಧ್ಯಕ್ಷರಾದ ಎನ್ ಅರ್ ವಿಶುಕುಮಾರ್ ಈ ಸಂಕಲ್ಪದ ಜೊತೆಗಿದ್ದು ಶುಭ ಹಾರೈಸಿದರು .



ಗಾಂಧಿವಾದಿ ದಿವಂಗತ ಹೋ ಶ್ರೀನಿವಾಸಯ್ಯ ನವರ ಹುಟ್ಟೂರು ನಾಗಮಂಗಲ ತಾಲ್ಲೂಕು ಚೌದರಿ ಕೊಪ್ಪಲಿನಲ್ಲಿ ನಡೆದ ಡಾ . ಹೋ ಶ್ರೀನಿವಾಸಯ್ಯ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಆದಿ ಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ , ಕೃಷಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚೆಲುವರಾಯ ಸ್ವಾಮಿ , ಕರ್ನಾಟಕ ಗನ್ಧಿ ಸ್ಮಾರಕ ನಿಧಿ ಅಧ್ಯಕ್ಷರಾದ ನಾಡೋಜ ವೂಡೇ ಪಿ ಕೃಷ್ಣ , ಮಾಜಿ ಶಾಸಕರಾದ ಡಿ ಆರ್ ಪಾಟೀಲ್ ಹಾಗೂ ಇತರೆ ಗಣ್ಯರು ಭಾಗವಹಿಸಿದ್ದರು .

ಸಮಾಜವಾದಿ ನಾಯಕಿ ವಾಣಿ ಕಿಷನ್ ಪಾಟ್ನಾಯಕ್ ಭೇಟಿ

ವಾಣಿ ಕಿಷನ್ ಪಾಟ್ನಾಯಕ್ – ದಿವಂಗತ ಹಿರಿಯ ಸಮಾಜವಾದಿ ಕಿಶನ್ ಪಾಟ್ನಾಯಕ್ ಅವರ ಪತ್ನಿ . ಅವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗಾಂಧಿ ಭವನಕ್ಕೆ ಮತ್ತು ಅರಸೀಕೆರೆಯ ರಾಜ್ ಘಾಟ್ ಮಾದರಿಯ ಕಸ್ತೂರಬಾ ಆಶ್ರಮಕ್ಕೆ ಡಿಸೆಂಬರ್ ತಿಂಗಳಲ್ಲಿ ಭೇಟಿ ನೀಡಿದ್ದರು . ಆ ಸಂದರ್ಭದ ಕೆಲವು ನೋಟಗಳು .



ಖಾದಿ ಸೀರೆ, ಸಾದಾ ಚಪ್ಪಲಿ , ಕೈಲಿ ಒಂದು ಕರವಸ್ತ್ರ , ಮುಖದಲ್ಲಿ ಮುಗ್ಧ ನಗು, ಭೇದ ಭಾವಗಳಾಚೆ ಇಣುಕಿ ನೋಡುವ ಕಣ್ಣುಗಳು, ಯಾರ ಬಗೆಗೂ ಕೆಟ್ಟ ಮಾತನಾಡದ ಪರಿಶುದ್ಧತೆ, ಸದಾ ರೈತಪರವಾದ ನಿಲುವು, ಜೊತೆಯಾದವರಿಗೆ ಒಂದಷ್ಟು ಪ್ರೇರಣೆ, ಶಕ್ತಿ , ಇಂತಹ ಚೇತನಕ್ಕೆ ಶರಣು .



ಇವರಿಗೆ ಪ್ರಚಾರದ ಚಪಲವೂ ಇಲ್ಲ ; ತನ್ನ ನಿಲುವನ್ನು ಬಚ್ಚಿಡುವ ಹಿಂಜರಿಕೆಯೂ ಇಲ್ಲ. ಕಲೆ , ಸಂಗೀತ, ನಾಟಕ, ಸಾಹಿತ್ಯ, ಇವುಗಳ ಬಗ್ಗೆ ಅಪಾರ ತಿಳಿವಳಿಕೆ . ಅನ್ಯಮತ ಗ್ರಂಥಗಳನ್ನೂ ಅಧ್ಯಯನ ಮಾಡಿದ್ದಾರೆ. ಸುಮಾರು 18 ಕ್ಕೂ ಹೆಚ್ಚು ಭಾಷೆಗಳ ಪರಿಚಯವನ್ನಿಟ್ಟು ಕೊಂಡಿದ್ದಾರೆ.





ಬೆಂಗಳೂರಿನ ಗಾಂಧಿಭವನದಲ್ಲಿರುವ ಧ್ಯಾನಾಸಕ್ತ ಗಾಂಧೀ ಅವರನ್ನು ಹೆಚ್ಚು ಆಕರ್ಷಿಸಿತು . ಗಾಂಧೀಜಿಯವರ ಚಿತಾಭಸ್ಮ ಇರುವ ಹಾಸನ ಜಿಲ್ಲೆಯ ಅರಸೀಕೆರೆಯ ಕಸ್ತೂರಿಬಾ ಗಾಂಧಿ ಆಶ್ರಮದ ವಾತಾವರಣ ಅವರಿಗೆ ಬಹಳ ಇಷ್ಟವಾಯಿತು .ಇದು ಕರ್ನಾಟಕದ ರಾಜ್‌ಘಾಟ್ ಎಂದು ಪ್ರಸಿದ್ಧಿಯಾಗಿದೆ.



ಪುರಾತನ ಶೈಲಿಯ ವಾಸ್ತು ಶಿಲ್ಪ, ಕಲ್ಲಿನ ಕಂಬಗಳಿಂದ ಕೂಡಿದ ಅರಸೀಕೆರೆಯ ಪುರಾತನ ದೇವಾಲಯಗಳಿಗೂ ಭೇಟಿ ನೀಡಿದರು. ಧರ್ಮ, ದೇವರು, ನಂಬಿಕೆ, ಜಾತಿ ಮುಂತಾದ ವಿಷಯಗಳು ಹೆಚ್ಚು ಪ್ರಚಾರ ಗಿಟ್ಟಿಸಿಕೊಳ್ಳುತ್ತಿವೆ ಎಂದು ನಕ್ಕರು . ಐಕ್ಯತೆಯೇ ದೈವ ವಾಗ ಬೇಕೆಂದು ನುಡಿದರು. ಪ್ರಕೃತಿಗೆ ಹತ್ತಿರವಾಗಿ ಜೀವಿಸುವ ಬದುಕನ್ನು ರೂಪಿಸಿಕೊಳ್ಳುವಲ್ಲಿ ಇಂದು ಮನುಷ್ಯ ಸದಾ ಎಡವುತ್ತಲಿದ್ದಾನೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಚಿತ್ರಲೇಖನ : ತನುಜ್ ಆರಾಧ್ಯ



ಎಲ್ಲರ ಗಾಂಧೀಜಿ: ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ.

ಗಾಂಧೀಜಿ ಬರೆದ 124 ವೈವಿಧ್ಯಮಯ ಬರಹಗಳು ಹಾಗೂ 150 ಹೇಳಿಕೆಗಳನ್ನು ಒಳಗೊಂಡ 400 ಪುಟಗಳ ಪುಸ್ತಕ ಇದು. ಗಾಂಧೀ ಚಿಂತನೆಯ ಅಪೂರ್ವ ಮಿಂಚು, ಆಳ, ಗಾಂಭೀರ್ಯಗಳನ್ನು ಬಿಂಬಿಸುವ ಈ ಕನ್ನಡಾನುವಾದಗಳನ್ನು 'ಬಾಪೂ ಚಿಂತನೆ' ಪ್ರತಿ ತಿಂಗಳು ಪ್ರಕಟಿಸುತ್ತದೆ.

ನ್ಯಾಯವಾದಿಗಳು

– ನಟರಾಜ್ ಹುಳಿಯಾರ್

ಕೋರ್ಟು, ನ್ಯಾಯವಾದಿ, ನ್ಯಾಯಾಧೀಶ ಸತ್ಯ ಮತ್ತು ಸೇವೆಗೆ ಮೊದಲ ಸ್ಥಾನ ನೀಡುವವನೇ ನಿಜವಾದ ಲಾಯರ್. ನಿಜವಾದ ಲಾಯರೊಬ್ಬ ತನ್ನ ವೃತ್ತಿಯಿಂದ ಬರುವ ಲಾಭಕ್ಕೆ ಎರಡನೇ ಸ್ಥಾನ ನೀಡುವನು. ವಕೀಲವೃತ್ತಿ ಸಟ್ಟಾ ವ್ಯಾಪಾರದಂತೆ ಆಗಬಾರದು. ಕಡುಬಡವನಿಗೂ ತಕ್ಕಮಟ್ಟಿನ ಶುಲ್ಕದಲ್ಲಿ ಅತ್ಯುನ್ನತ ಕಾನೂನು ಪ್ರತಿಭಾವಂತರ ಸೇವೆ ದೊರೆಯುವಂತಿರಬೇಕು. ಆದರೆ ನಾವು ಇಂಗ್ಲಿಷ್ ಲಾಯರ್‌ಗಳ ಪದ್ಧತಿಯನ್ನೇ ಅನುಕರಣೆ ಮಾಡುತ್ತಿದ್ದೇವೆ; ಅಷ್ಟೇ ಅಲ್ಲ ಅವರನ್ನು ಅತಿಯಾಗಿ ಅನುಸರಿಸತೊಡಗಿದ್ದೇವೆ. ಇಂಗ್ಲಿಷ್ ಲಾಯರುಗಳ ಸರಿಸಮಾನರಾಗಬೇಕೆಂದರೆ ಅವರಷ್ಟೇ ಕೊಲೆಗಡುಕ ಶುಲ್ಕವನ್ನು ವಿಧಿಸಬೇಕೆಂದು ನಾವೂ ಭಾವಿಸತೊಡಗಿದ್ದೇವೆ... ಅಷ್ಟೇ ಮುಖ್ಯವಾದ ಮತ್ತೊಂದು ಅಂಶವೂ ಇದೆ: ಈಗ ಕೋರ್ಟುಗಳನ್ನು ಅತ್ಯಂತ ದುಬಾರಿ ವೆಚ್ಚದಲ್ಲಿ ನಡೆಸಲಾಗುತ್ತಿದೆ. ಹೀಗಾಗಿ ಜನರ ಆರ್ಥಿಕ ಸ್ಥಿತಿಗತಿಗೂ ತಮಗೂ ಸಂಬಂಧವಿಲ್ಲವೆಂಬಂತೆ ಕೋರ್ಟಿನ ವಲಯಗಳು ವರ್ತಿಸುತ್ತಿವೆ. ದಕ್ಷಿಣ ಆಫ್ರಿಕಾದ ಅತ್ಯುತ್ತಮ ಲಾಯರುಗಳು ಕೂಡ ಇಂಡಿಯಾದ ಲಾಯರುಗಳಷ್ಟು ದುಬಾರಿ ಶುಲ್ಕ ವಿಧಿಸುವುದಿಲ್ಲ... ಬ್ರಿಟಿಷ್ ಕೋರ್ಟುಗಳಲ್ಲಿ ನ್ಯಾಯ ದುಬಾರಿ ಭೋಗವಸ್ತುವಾಗಿದೆ. ಈ ಕೋರ್ಟುಗಳಲ್ಲಿ ಬಹಳಷ್ಟು ಸಲ 'ಉದ್ದನೆಯ ಜೇಬು ಗೆಲ್ಲುತ್ತದೆ.'

...ಇದೇ ಸಂದರ್ಭದಲ್ಲಿ ಫಿರೋಜ್ ಶಾ ಮೆಹ್ತಾ, ರಾನಡೆ, ತ್ಯಾಬ್‌ಜಿ, ತೆಲ್ಲಾಗ್, ಮನಮೋಹನ್ ಘೋಷ್, ಕೃಷ್ಣಸ್ವಾಮಿ ಅಯ್ಯರ್ ಮುಂತಾದ ಮೇಧಾವಿ ಲಾಯರುಗಳು ನಮ್ಮ ದೇಶಕ್ಕೆ ಸಲ್ಲಿಸಿರುವ ಸೇವೆಯನ್ನು ಎಂದೂ ಮರೆಯಲಾರೆ. ಹಾಗೆಯೇ ಈಗ ನಮ್ಮೊಡನೆ ಇರುವ ಲಾಯರುಗಳ ಸೇವೆಯನ್ನು ಕೂಡ ಮರೆಯಲಾರೆ. ಯಾರಿಗೂ ಮಾತಾಡಲು ಧೈರ್ಯವಿಲ್ಲದ ಕಾಲದಲ್ಲಿ ಇವರೆಲ್ಲರೂ ಜನರ ದನಿಯಾಗಿ, ದೇಶದ ಸ್ವಾತಂತ್ರ್ಯದ ಕಾವಲುಗಾರರಾಗಿ ಕೆಲಸ ಮಾಡಿದ್ದಾರೆ...

ಲಾಯರೊಬ್ಬ ತನ್ನ ವೃತ್ತಿಯ ಕಾರಣದಿಂದಾಗಿಯೇ ಜನರ ಹಕ್ಕುಗಳ ಪ್ರತಿಪಾದಕನಾಗಿರುತ್ತಾನೆ, ಕಾನೂನು ಮತ್ತು ರಾಜಕೀಯದಲ್ಲಿ ಪರಿಣತಿ ಸಾಧಿಸಿರುತ್ತಾನೆ, ಹಾಗೂ ಪ್ರಭುತ್ವದ ದಮನಕ್ಕೆ ಬಲಿಯಾಗುವವರನ್ನು ಪಾರು ಮಾಡುತ್ತಾನೆ ಎಂಬ ನಿರೀಕ್ಷೆ ಜನರಲ್ಲಿರುತ್ತದೆ. ...ಲಾಯರುಗಳು ಜನರಿಗಾಗಿ ಕಾನೂನುಗಳನ್ನು ವ್ಯಾಖ್ಯಾನ ಮಾಡುತ್ತಾರೆ. ಆ ಮೂಲಕವೂ ಪ್ರಭುತ್ವವನ್ನು ಬೆಂಬಲಿಸುತ್ತಾರೆ. ಆದ್ದರಿಂದಲೇ ಅವರನ್ನು ಕೋರ್ಟ್ ಆಫೀಸರುಗಳೆಂದು ಕರೆಯುವುದು. ಈಗ ರಾಷ್ಟ್ರೀಯ ಅಸಹಕಾರ ಚಳುವಳಿಯಲ್ಲಿ ಪಾಲ್ಗೊಳ್ಳಬಯಸುವ ಲಾಯರುಗಳು ತಮ್ಮ ವಕೀಲಿಕೆಯನ್ನು (ಪ್ರಾಕ್ಟೀಸನ್ನು) ಕೆಲಕಾಲವಾದರೂ ಅಮಾನತ್ತಿನಲ್ಲಿಡಬೇಕು. ...ಲಾಯರುಗಳು ಸರ್ಕಾರದ ವಿರುದ್ಧ ಉಗ್ರ ಹೋರಾಟ ಮಾಡುವವರ ಮುಂಚೂಣಿಯಲ್ಲಿದ್ದಾರೆ ಎಂದು ಹೇಳುವುದುಂಟು. ಕೆಲ ಮಟ್ಟಿಗೆ ಅದು ನಿಜ. ಆದರೆ ದೇಶವು ಸರ್ಕಾರವನ್ನು ನಿಸ್ಸತ್ವಗೊಳಿಸಲು ಬಯಸಿದಾಗ, ಅಂಥ ಸರ್ಕಾರದ ಇಚ್ಛಾಶಕ್ತಿಯನ್ನು ಮಣಿಸಲು ಲಾಯರುಗಳು ತಮ್ಮ ವಕೀಲಿಕೆಯನ್ನು ಅಮಾನತ್ತಿನಲ್ಲಿಡಬೇಕು...ಲಾಯರುಗಳು ವಕೀಲಿಕೆ ಕೈಬಿಡುವುದೆಂದರೆ ತಮ್ಮ ವೃತ್ತಿಯನ್ನು ಸ್ಥಗಿತಗೊಳಿಸಬೇಕೆಂದು ಅರ್ಥವಲ್ಲ, ಅಥವಾ ವಿಶ್ರಾಂತಿ ಪಡೆಯಬೇಕೆಂದೂ ಅಲ್ಲ. ಲಾಯರುಗಳು ತಮ್ಮ ಕಕ್ಷಿದಾರರು ಕೂಡ ಕೋರ್ಟುಗಳನ್ನು ಬಹಿಷ್ಕರಿಸುವಂತೆ ಅವರ ಮನವೊಲಿಸಬೇಕು. ಮಧ್ಯಸ್ಥರ ಮೂಲಕ ವ್ಯಾಜ್ಯ ತೀರ್ಮಾನ ಮಾಡುವ ಆರ್ಬಿಟ್ರೇಶನ್ (ನ್ಯಾಯ ಪಂಚಾಯಿತಿ) ಬೋರ್ಡುಗಳನ್ನು ಇನ್ನಷ್ಟು ಉತ್ತಮಪಡಿಸಿ ವ್ಯಾಜ್ಯಗಳನ್ನು ಕೋರ್ಟಿನ ಹೊರಗೆ ಬಗೆಹರಿಸಬೇಕು...ಕಳೆದ ಮಹಾಯುದ್ಧದ ಕಾಲದಲ್ಲಿ ಇಂಗ್ಲೆಂಡಿನ ಪ್ರಖ್ಯಾತ ಲಾಯರುಗಳು ತಮ್ಮ ವೃತ್ತಿಯನ್ನು ಅಮಾನತ್ತಿನಲ್ಲಿಟ್ಟಿದ್ದರೆಂಬ ವಿಷಯ ಅನೇಕರಿಗೆ ಗೊತ್ತಿರಲಿಕ್ಕಿಲ್ಲ.

* * *

ಕಾನೂನು ವೃತ್ತಿಯ ಉದಾತ್ತೀಕರಣ

ಕಾನೂನು ವಿದ್ಯಾರ್ಥಿಗಳು: ಕಾನೂನು ವೃತ್ತಿಯನ್ನು ಉದಾತ್ತೀಕರಣ ಮಾಡುವುದು ಹೇಗೆ?

ಗಾಂಧೀಜಿ: ನೀವು ಈ ಪ್ರಶ್ನೆ ಕೇಳಿದ್ದು ಸಂತೋಷ. ಈ ವಿಷಯದ ಬಗ್ಗೆ ನಾನು ಅಧಿಕೃತವಾಗಿ ಮಾತಾಡದಿದ್ದರೆ ಬೇರಾರೂ ಮಾತಾಡಲಾರರು ಎಂದು ಹೇಳಬಲ್ಲೆ. ಯಾಕೆಂದರೆ ನನ್ನ ಇಡೀ ಕಾನೂನು ವೃತ್ತಿಯಲ್ಲಿ ನಾನು ಒಂದು ಸಲವೂ ಕಟ್ಟುನಿಟ್ಟಿನ ಸತ್ಯದ ಹಾದಿಯನ್ನಾಗಲೀ, ಪ್ರಾಮಾಣಿಕತೆಯ ಹಾದಿಯನ್ನಾಗಲೀ ಬಿಟ್ಟವನಲ್ಲ. ನೀವು ವಕೀಲಿಕೆಯನ್ನು ಉದಾತ್ತೀಕರಿಸಲು ಬಯಸುವುದಾದರೆ ಮಾಡಬೇಕಾದ ಮೊದಲ ಕೆಲಸ ಇದು: ನಿಮ್ಮ ವೃತ್ತಿಯನ್ನು ಹಣಕ್ಕೆ ಎಂದೂ ಅಡಿಯಾಳಾಗಿಸದೆ, ನಿಮ್ಮ ವೃತ್ತಿಯನ್ನು ದೇಶದ ಸೇವೆಯೆಂದು ನಡೆಸಿ. ತಮ್ಮ ಸ್ವಂತ ಹಿತಗಳನ್ನು ತ್ಯಾಗ ಮಾಡಿ ಜೀವನ ನಡೆಸಿದ, ಆ ಮೂಲಕ ಬಹುತೇಕ ಬಡತನವನ್ನೂ ಎದುರಿಸಬೇಕಾಗಿ ಬಂದ ಉಜ್ವಲ ನ್ಯಾಯವಾದಿ ಪ್ರತಿಭೆಣಟಜಜಜಟಜಜಗಳು ಎಲ್ಲ ದೇಶಗಳಲ್ಲೂ ಇವೆ. ಇಂಡಿಯಾದಲ್ಲಿ ಮನಮೋಹನ್ ಘೋಷ್ ಅವರ ಉದಾಹರಣೆಯನ್ನೇ ತೆಗೆದುಕೊಳ್ಳಿ. ಅವರು ನೀಲಿ ಬೆಳೆಯ ಜಮೀನ್ದಾರರ ವಿರುದ್ಧದ ಹೋರಾಟವನ್ನು ಕೈಗೆತ್ತಿಕೊಂಡರು. ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ, ಪ್ರಾಣಭಯಕ್ಕೂ ಜಗ್ಗದೆ, ತಮ್ಮ ಶ್ರಮಕ್ಕಾಗಿ ನಯಾಪೈಸೆಯನ್ನೂ ತೆಗೆದುಕೊಳ್ಳದೆ, ಬಡ ಕಕ್ಷಿದಾರರ ಪರವಾಗಿ ಹೋರಾಡಿದರು. ಅವರು ಅತ್ಯಂತ ಮೇಧಾವಿ

ಲಾಯರಾಗಿದ್ದರೂ, ಬಹುದೊಡ್ಡ ಲೋಕೋಪಕಾರಿಯೂ ಆಗಿದ್ದರು. ಇದು ನಿಮ್ಮೆದುರು ಇರುವ ಒಂದು ಮಾದರಿ.

ಅದೇ ರೀತಿಯಲ್ಲಿ, ಜಾನ್ ರಸ್ಕಿನ್ ಅವರ 'ಅನ್ ಟು ದಿಸ್ ಲಾಸ್ಟ್' ಪುಸ್ತಕದ ನೀತಿಬೋಧೆಯನ್ನು ಕೂಡ ನೀವು ಅನುಸರಿಸಬಹುದು: ಒಬ್ಬ ಬಡಗಿ ತನ್ನ ಕೆಲಸಕ್ಕೆ ಹದಿನೈದು ಶಿಲ್ಲಿಂಗ್ ಹಣ ಕೂಡ ಪಡೆಯದಿರುವ ಸಂದರ್ಭದಲ್ಲಿ ಒಬ್ಬ ಲಾಯರ್ ತನ್ನ ಕೆಲಸಕ್ಕಾಗಿ ಹದಿನೈದು ಪೌಂಡ್ ಯಾಕೆ ಶುಲ್ಕ ವಿಧಿಸಬೇಕು? ಈಗ ಎಲ್ಲೆಡೆ ಲಾಯರುಗಳು ವಿಧಿಸುತ್ತಿರುವ ಶುಲ್ಕ ಊಹೆಗೂ ನಿಲುಕದಷ್ಟಿದೆ. ಹಿಂದೆ ಸ್ವತಃ ನಾನೇ ದುಬಾರಿ ಶುಲ್ಕ ವಿಧಿಸಿದ್ದೆನೆಂದು ಈಗ ಒಪ್ಪಿಕೊಳ್ಳುತ್ತೇನೆ. ಆದರೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ: ನಾನು ಲಾಯರ್ ವೃತ್ತಿಯಲ್ಲಿ ತೊಡಗಿದ್ದಾಗ ಕೂಡ, ನನ್ನ ವೃತ್ತಿ ಎಂದೂ ನನ್ನ ಸಾರ್ವಜನಿಕ ಸೇವೆಗೆ ಅಡ್ಡಿಯಾಗಲು ಬಿಡಲಿಲ್ಲ.

* * *

ಕೋರ್ಟುಗಳಿಲ್ಲದಿದ್ದರೆ...

ಒಂದು ವೇಳೆ ಕೋರ್ಟುಗಳು ಹಾಗೂ ಲಾಯರುಗಳ ಸಮ್ಮೋಹಿನಿಗೆ ನಾವು ಒಳಗಾಗಿರದಿದ್ದರೆ, ದಲ್ಲಾಳಿಗಳು ಈ ಕೋರ್ಟುಗಳ ಜೌಗು ಭೂಮಿಗೆ ನಮ್ಮನ್ನು ದೂಡದಿದ್ದರೆ, ಅವರು ನಮ್ಮ ನಿಕೃಷ್ಟ ಭಾವನೆಗಳನ್ನು ಉದ್ರೇಕಿಸುವ ಕೆಲಸ ಮಾಡದೇ ಇದ್ದಿದ್ದರೆ ಈಗಿರುವುದಕ್ಕಿಂತ ನೆಮ್ಮದಿಯ ಜೀವನ ನಮ್ಮದಾಗಿರುತ್ತಿತ್ತು ಎಂಬುದು ನನ್ನ ನಂಬಿಕೆ. ನಿತ್ಯ ಕೋರ್ಟುಗಳಿಗೆ ಎಡತಾಕುವ ಸೂಕ್ಷ್ಮ ಮನಸ್ಸಿನವರು ಇಡೀ ಕೋರ್ಟಿನ ವಾತಾವರಣ ಕೊಳಕು ವಾಸನೆಯಿಂದ ತುಂಬಿದೆ ಎಂಬುದನ್ನು ಸಾರಿ ಹೇಳಬೇಕು. ಗೆಳೆತನದ ಕಾರಣದಿಂದಲೋ, ಹಣದ ಆಸೆಯಿಂದಲೋ ಸುಳ್ಳು ಸಾಕ್ಷಿ ಹೇಳುವವರು ಎರಡೂ ಕಡೆ ಇದ್ದೇ ಇರುತ್ತಾರೆ. ಆದರೆ ಕೋರ್ಟುಗಳ ವಲಯದಲ್ಲಿ ಇದಕ್ಕಿಂತ ಕೆಟ್ಟ ಮುಖ ಒಂದಿದೆ: ಅದೇನೆಂದರೆ, ಈ ವಲಯ ಸರ್ಕಾರದ ಅಧಿಕಾರವನ್ನು ಬೆಂಬಲಿಸುತ್ತಿರುತ್ತದೆ. ಕೋರ್ಟುಗಳು ನ್ಯಾಯ ಒದಗಿಸುತ್ತಿರಬೇಕು. ಆ ಕಾರಣದಿಂದಲೇ ಕೋರ್ಟುಗಳನ್ನು ರಾಷ್ಟ್ರೀಯ ಸ್ವಾತಂತ್ರ್ಯದ ವೀರರಕ್ಷಕರು ಎಂದು ಕರೆಯುವುದು. ಆದರೆ ಕೋರ್ಟುಗಳು ಅನೈತಿಕವಾದ ಸರ್ಕಾರವನ್ನು ಬೆಂಬಲಿಸಿದಾಗಲೆಲ್ಲ ಒಂದು ರಾಷ್ಟ್ರದ ಅಂತಃ ಸತ್ವವನ್ನೇ ಹೊಸಕಿ ಹಾಕುತ್ತವೆ. ಪಂಜಾಬಿನ ನ್ಯಾಯಪೀಠಗಳು ಹಾಗೂ ಕ್ಷಿಪ್ರ ನ್ಯಾಯಾಡಳಿತಗಳು ಮಾಡಿದ್ದು ಇದನ್ನೇ. ಇದೆಲ್ಲದರ ನಗ್ನ ಸ್ವರೂಪವನ್ನು ನಾವೆಲ್ಲ ನೋಡಿದ್ದೇವೆ. ಇಂಡಿಯಾದಲ್ಲಿ ಮಾಡಿದ ಬರ್ಬರ ಹತ್ಯೆಗಳಿಗಾಗಿ ಒಬ್ಬನೇ ಒಬ್ಬ ಇಂಗ್ಲಿಷ್ ವ್ಯಕ್ತಿಗಾದರೂ ಉಗ್ರ ಶಿಕ್ಷೆಯಾಗಿದೆಯೆ?

ಇಂಗ್ಲಿಷ್ ನ್ಯಾಯಾಧೀಶರು ಹಾಗೂ ಇಂಗ್ಲಿಷ್ ಸರ್ಕಾರಿ ವಕೀಲರನ್ನು ಓಡಿಸಿ, ಅವರ ಜಾಗಕ್ಕೆ ಭಾರತೀಯರು ಬಂದ ತಕ್ಷಣ ಪರಿಸ್ಥಿತಿ ಬದಲಾಗುತ್ತದೆ ಎಂದೇನೂ ಭಾವಿಸಬೇಡಿ. ಇಂಗ್ಲಿಷ್ ಜನ ಮೂಲತಃ ಭ್ರಷ್ಟರೇನಲ್ಲ; ಹಾಗೆಯೇ, ಭಾರತೀಯರೂ ದೇವತೆಗಳೇನಲ್ಲ. ಇಬ್ಬರೂ ತಂತಮ್ಮ ಪರಿಸರಕ್ಕೆ ಶರಣಾಗುವವರೇ. ಮಿಲಿಟರಿ ಕಾನೂನಿನ (ಮಾರ್ಷಲ್ ಲಾ) ರಾಜ್ಯಭಾರದಲ್ಲಿ ಇಂಗ್ಲಿಷ್ ನ್ಯಾಯಾಧೀಶರು ಮಾಡಿದಷ್ಟೇ ಪಾಪಕೃತ್ಯವನ್ನು ಭಾರತೀಯ ನ್ಯಾಯಾಧೀಶರೂ ಮಾಡಿದ್ದಾರೆ. ಅಮೃತಸರದಲ್ಲಿ ಮುಗ್ಧ ಹೆಂಗಸರ ಮೇಲೆ ಚಿತ್ರಹಿಂಸೆ ಎಸಗಿದವರು ಭಾರತೀಯರು; ಅತ್ತ ಜಲಿಯನ್‌ವಾಲಾ ಊರಿನಲ್ಲಿ ಮಹಿಳೆಯರನ್ನು ಅವಹೇಳನ ಮಾಡಿದವನು ಬಾಸ್ವರ್ತ್ ಸ್ಮಿತ್. ನಾನು ದೂಷಿಸುತ್ತಿರುವುದು ಈ ವ್ಯವಸ್ಥೆಯನ್ನೇ ಹೊರತು, ಇಂಗ್ಲಿಷರನ್ನಲ್ಲ. ಅವರ ಜೊತೆಗೆ ನನ್ನದೇನೂ ಜಗಳವಿಲ್ಲ...ಆದರೆ ರಾಕ್ಷಸ ತನ್ನ ಕೃತ್ಯಗಳನ್ನು ಜಾರಿಗೊಳಿಸಲು ಒಂದು ಬಗೆಯ ನೈತಿಕ ಸಾಧನಗಳನ್ನೂ, ನೀತಿ ನಡಾವಳಿಯ ಭಾಷೆಯನ್ನೂ ಬಳಸುತ್ತಿರುತ್ತಾನೆ; ಆ ಮೂಲಕ ತನ್ನ ಉದ್ದೇಶಗಳಿಗೆ ಒಂದು ಬಗೆಯ ಗೌರವದ ಸ್ಪರ್ಶ ಕೊಡಲೆತ್ನಿಸುತ್ತಾನೆ.

...ಈ ದೃಷ್ಟಿಯಿಂದ ನೋಡಿದಾಗ, ನ್ಯಾಯದ ಅರಮನೆಗಳೆಂದು ಕರೆಯಲ್ಪಡುವ ಸ್ಥಳಗಳ ಬಗ್ಗೆ ನಮ್ಮ ಲಾಯರುಗಳು ಹಾಗೂ ನ್ಯಾಯಾಧೀಶರು ಅಂಧಶ್ರದ್ಧೆ ಹಾಗೂ ಭಯಭಕ್ತಿಗಳನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದರೆ ನಮ್ಮ ಸ್ವಾತಂತ್ರ್ಯ ಹೋರಾಟದ ಗುರಿ ಈಡೇರುವುದಿಲ್ಲ. ಈ ಕೋರ್ಟುಗಳಿಲ್ಲದಿದ್ದರೆ ಬ್ರಿಟಿಷ್ ಸರ್ಕಾರ ಒಂದೇ ದಿನದಲ್ಲಿ ಉರುಳಿ ಬೀಳುವುದು... ಆದ್ದರಿಂದಲೇ ಈ ಕಾಲದಲ್ಲಿ ತನ್ನ ವಕೀಲಿಕೆಯನ್ನು ಅಮಾನತ್ತಿನಲ್ಲಿಡುವ ಲಾಯರುಗಳು ದೇಶದ ಸ್ವಾತಂತ್ರ್ಯ ಸಾಧನೆಗೆ ತಮ್ಮದೇ ಆದಂಥ ಸೇವೆ ಸಲ್ಲಿಸಬಲ್ಲರು.

* * *

ಅಹವಾಲು ಬರೆಯುವ ಬರಹಗಾರರಿಗೆ

ಅಹವಾಲುಗಳನ್ನು ಬರೆಯುವ ಅಥವಾ ಇಂಥ ಇನ್ನಿತರ ಕೆಲಸಗಳ ಮೂಲಕ ಸಾರ್ವಜನಿಕ ಹಿತಾಸಕ್ತಿಯ ಕೆಲಸ ಮಾಡುವ ತರುಣ ದೇಶಭಕ್ತರಿಗೆ ನನ್ನ ಅಮೂಲ್ಯ ಅನುಭವವೊಂದನ್ನು ಹೇಳುತ್ತೇನೆ. ಗೋಪಾಲಕೃಷ್ಣ ಗೋಖಲೆ ಹಾಗೂ ದಾದಾಬಾಯಿ ನವರೋಜಿಯವರ ಜೊತೆಗೆ ಕೆಲಸ ಮಾಡುವ ಸದವಕಾಶ ನನಗೆ ಸಿಕ್ಕಿತ್ತು. ಆ ಇಬ್ಬರೂ ನನಗೆ ಹೇಳಿಕೊಟ್ಟ ಪಾಠ ಇದು: 'ನೀನು ಬರೆದ ಅಹವಾಲನ್ನು [ಸಂಬಂಧ ಪಟ್ಟವರು] ಕೇಳಿಸಿಕೊಳ್ಳಬೇಕೆಂದರೆ, ನಿನ್ನ ಬರಹ ಸಂಕ್ಷಿಪ್ತವಾಗಿರಬೇಕು. ವಾಸ್ತವ ಸಂಗತಿಗಳಿಗೆ ನಿಷ್ಠವಾಗಿರಬೇಕು. ವಿಷಯಕ್ಕೆ ಎಷ್ಟು ಬೇಕೋ ಅಷ್ಟು ಅಂಶಗಳನ್ನು ಮಾತ್ರ ಬರೆಯಬೇಕು. ನೀನು ಬರೆಯುತ್ತಿರುವ ವಿಷಯದಿಂದ ದೂರ ಸಾಗಿ ಏನನ್ನೂ ಬರೆಯಬಾರದು. ಅತಿಯಾದ ಗುಣವಾಚಕಗಳನ್ನು ಬಳಸಬಾರದು.'

ಈ ನಿಟ್ಟಿನ ನನ್ನ ಪ್ರಯತ್ನಗಳಲ್ಲಿ ನನಗೇನಾದರೂ ಒಂದಿಷ್ಟು ಯಶಸ್ಸು ಸಿಕ್ಕಿದ್ದರೆ ನಾನು ಈ ಮಹನೀಯರ ಚಿನ್ನದಂಥ ಬುದ್ಧಿವಾದಕ್ಕೆ ಅಂಟಿಕೊಂಡಿರುವುದು ಕೂಡ ಕಾರಣ.

('ದ ಲಾ ಅಂಡ್ ಲಾರ್ಸ್' ಪುಸ್ತಕದಿಂದ ಆಯ್ದ ಭಾಗಗಳು)

(ಟಿಪ್ಪಣಿ: ಗಾಂಧೀಜಿ ಸುಮಾರು ಇಪ್ಪತ್ತು ವರ್ಷಗಳ ಕಾಲ ಲಾಯರ್ ಆಗಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಅವರ ನ್ಯಾಯವಾದಿ ವೃತ್ತಿ ಕೋರ್ಟಿನ ಆವರಣದಲ್ಲಿ, ಸಾರ್ವಜನಿಕ ಜೀವನದಲ್ಲಿ ಹಾಗೂ ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಟದಲ್ಲಿ ಪ್ರಖರ ನೈತಿಕ ಆಯಾಮ ಪಡೆಯಿತು. ಮುಂದೆ ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯನ್ನು ಎದುರಿಸುವಾಗಲೂ ಅವರ ನ್ಯಾಯವಾದಿ ವೃತ್ತಿಯ ನಿಷ್ಠುರತೆ, ನೈತಿಕ ನಿಲುವು ಹಾಗೂ ಕಾನೂನು ಜ್ಞಾನಗಳು ಅವರ ನೆರವಿಗೆ ಬಂದವು. 'ಲಾ ಅಂಡ್ ಲಾರ್ಸ್' ಪುಸ್ತಕ ಬ್ರಿಟಿಷ್ ಆಡಳಿತ ಕಾಲದ ಕಾನೂನು, ಕೋರ್ಟು, ನ್ಯಾಯಾಧೀಶರು, ನ್ಯಾಯವಾದಿಗಳನ್ನು ಕುರಿತು ಗಾಂಧೀಜಿ ಬರೆದ ಬರಹಗಳ ಸಂಕಲನ. ಈ ಬರಹಗಳು ಇವತ್ತು ಕಾನೂನು ವೃತ್ತಿಯಲ್ಲಿ, ಆ ವಲಯದಲ್ಲಿ ತೊಡಗಿಸಿಕೊಂಡಿರುವವರಿಗೆ ದಾರಿದೀಪದಂತಿವೆ. ಜೊತೆಗೆ, ಗಾಂಧೀಜಿ ಒಬ್ಬ ಮೇಧಾವಿ ನ್ಯಾಯವಾದಿಯಾಗಿ ಅನೇಕ ಪ್ರಕರಣಗಳ ವಿಚಾರಣಾ ಕ್ರಮಗಳನ್ನೂ, ನ್ಯಾಯತೀರ್ಮಾನಗಳನ್ನೂ ವಿಶ್ಲೇಷಿಸಿರುವ ಸೂಕ್ಷ್ಮ ವಿಧಾನಗಳು ಇವತ್ತಿಗೂ ಉತ್ತಮ ಮಾದರಿಗಳಾಗಿವೆ.)

ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ
RNI No. KARBIL/2019/77950 Regd No.KA/BGGPO/2589/2023-25
Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58